ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 8 ಸೋಮವಾರ 2026

47

ಸಂಪುಟ: 47 | ಸಂಚಿಕೆ: 53 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಗೃಹಬಳಕೆ ಸಿಲಿಂಡರ್ ದರ 29 ರೂ. ಹೆಚ್ಚಳ

917.50 ರೂ. ಇದ್ದ ಸಿಲಿಂಡರ್ ಈಗ 946.50 ರೂ.ಆಗಿದೆ



ಮೈಸೂರು, ಜೂ.7(ವಿಎನ್‌ಎಸ್, ಎಂಕೆ)– ಪೆಟ್ರೋಲ್, ಡೀಸೆಲ್ ಮತ್ತು ಸಿಎನ್‌ಜಿ ಬೆಲೆ ಏರಿಕೆಯ ಬೆನ್ನಲ್ಲೇ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಪ್ರತಿ ಸಿಲಿಂಡರ್‌ಗೆ 29 ರೂ. ಹೆಚ್ಚಳ ಮಾಡಲಾಗಿದೆ. ಕಳೆದ ಮೂರು ತಿಂಗಳಲ್ಲಿ ಎರಡನೇ ದರ ಏರಿಕೆ ಇದಾಗಿದೆ.

ಇಸ್ರೇಲ್, ಇರಾನ್ ಮತ್ತು ಅಮೆರಿಕದ ನಡುವಿನ ಸಂಘರ್ಷದಿಂದ ಜಾಗತಿಕ ಇಂಧನ ಪೂರೈಕೆಯಲ್ಲಾಗುತ್ತಿರುವ ಅಡಚಣೆಯಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂಧನ ಬೆಲೆಗಳಲ್ಲಿ ಹೆಚ್ಚಳ ವಾಗಿರುವುದರಿಂದ ಮಾ.7 ರಂದು ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯನ್ನು 60 ರೂ. ಹೆಚ್ಚಿಸಲಾಗಿತ್ತು. ಮತ್ತೆ ಜೂ.7ರ ಮಧ್ಯರಾತ್ರಿಯಿಂದಲೇ 29 ರೂ. ಹೆಚ್ಚಿಸಲಾಗಿದೆ. ಮೈಸೂರಿನಲ್ಲಿ ನಿನ್ನೆ (ಜೂ.6) 917.50 ರೂ. ಇದ್ದ 14.2 ಕೆಜಿ ಗೃಹಬಳಕೆ ಸಿಲಿಂಡರ್ 946.50 ರೂ.ಗಳಿಗೆ ಏರಿಕೆಯಾಗಿದೆ. ಬೆಲೆ ಏರಿಕೆಯಿಂದ ಡೀಲರ್‌ಗಳಿಗೆ ಯಾವುದೇ ರೀತಿಯ ಪ್ರಯೋಜನವಿಲ್ಲ. ಜಾಗತಿಕ ಮಟ್ಟದಲ್ಲಿ ಬೆಲೆ ಏರಿಕೆಯಾಗಿರುವುದರಿಂದ ಗೃಹ ಬಳಕೆ ಸಿಲಿಂಡರ್ ಬೆಲೆ ಏರಿಕೆಯಾಗಿದೆ ಎಂದು ಎಲ್‌ಪಿಜಿ ಡಿಸ್ಟ್ರಿಬ್ಯೂಟರ್ ಅಸೋಸಿಯೇಷನ್ ಆಫ್ ಇಂಡಿಯಾದ ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ■6ನೇ ಪುಟಕ್ಕೆ

ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ ಬಗ್ಗೆ ವರದಿ ಕೇಳಿದ್ದೇನೆ: ಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು: ಎಲ್‌ಪಿಜಿ ಬೆಲೆ ಏರಿಕೆ ಕುರಿತು ಅಧಿಕಾರಿಗಳಿಂದ ವರದಿ ಕೇಳಿರುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಇಂದು ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಎಲ್‌ಪಿಜಿ ದರ ಏರಿಕೆ ಬಗ್ಗೆ ನಾನು ವರದಿ ಕೇಳಿದ್ದೇನೆ. ಅದಕ್ಕಿಂತಲೂ ಹೆಚ್ಚು ಕೈಗಾರಿಕಾ ಅನಿಲ ಮತ್ತು ಕೈಗಾರಿಕಾ ಡೀಸೆಲ್ ದರಗಳು ಆತಂಕಕಾರಿ ಪ್ರಮಾಣದಲ್ಲಿ ಏರಿಕೆ ಕಂಡಿವೆ. ಈ ಕುರಿತು ವರದಿ ಪಡೆಯುತ್ತಿದ್ದೇನೆ. ನಾಳೆ ಈ ವಿಷಯದ ಬಗ್ಗೆ ಮಾತನಾಡುತ್ತೇನೆ ಎಂದು ಹೇಳಿದರು. ಪಶ್ಚಿಮ ಏಷ್ಯಾದಲ್ಲಿ ಸಂಘರ್ಷದಿಂದ ಜಾಗತಿಕ ಮಟ್ಟದಲ್ಲಿ ಎಲ್‌ಪಿಜಿ ದರಗಳು ಗಣನೀಯವಾಗಿ ಏರಿಕೆಯಾಗಿದ್ದರೂ, ಭಾರತದಲ್ಲಿ ಇನ್ನೂ ವಿಶ್ವದಲ್ಲೇ ಅತ್ಯಂತ ಕಡಿಮೆ ಅಡುಗೆ ಅನಿಲ ದರವಿದೆ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಇದೇ ವರ್ಷದ ಮಾರ್ಚ್ 7ರಂದು ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು 60 ರೂಪಾಯಿ ಹೆಚ್ಚಿಸಲಾಗಿತ್ತು. ಇದೀಗ ಮತ್ತೊಮ್ಮೆ 29 ರೂಪಾಯಿ ಏರಿಕೆ ಮಾಡಲಾಗಿದೆ.

ನಾನು ಎರಡೇ ವರ್ಷ ಸಿಎಂ ಆಗಿರಬೇಕೇ...!?

- ತವರಿನಲ್ಲಿ ನಡೆದ ಕೃತಜ್ಞತಾ ಯಾತ್ರೆಯಲ್ಲಿ ಡಿ.ಕೆ.ಶಿವಕುಮಾರ್ ಮತ್ತೆ ಮುಖ್ಯಮಂತ್ರಿಯಾಗುವ ಮನದಿಂಗಿತ
- ಬಿಜೆಪಿ, ಜೆಡಿಎಸ್‌ನಿಂದ ಮತ್ತೊಬ್ಬ ಡಿಕೆಶಿ ಹುಟ್ಟುಹಾಕಲು ಸಾಧ್ಯವಿಲ್ಲ: ಬನ್ನಿ ಒಟ್ಟಾಗಿ ಕೆಲಸ ಮಾಡೋಣ



ತವರು ಕ್ಷೇತ್ರ ಕನಕಪುರದಲ್ಲಿ ದಿನವಿಡೀ ನಡೆದ ಕೃತಜ್ಞತಾ ಯಾತ್ರೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡುತ್ತಿರುವುದು.

ಕನಕಪುರ, ಜೂ.7– 'ನಾನು ಎರಡು ವರ್ಷ ಮಾತ್ರ ಸಿಎಂ ಆಗಿರಬೇಕೇ' ಎಂದು ಸ್ವಕ್ಷೇತ್ರದ ಜನರನ್ನು ಪ್ರಶ್ನಿಸುವ ಮೂಲಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 2028ರಲ್ಲೂ ಕಾಂಗ್ರೆಸ್ ಪಕ್ಷದ ಗೆಲುವಿನೊಂದಿಗೆ ಮತ್ತೊಮ್ಮೆ ಸಿಎಂ ಗಾದಿಗೇರುವ ತಮ್ಮ ಮನದಿಂಗಿತವನ್ನು ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಭಾನುವಾರ ತವರು ಕ್ಷೇತ್ರ ಕನಕಪುರದ ವಿವಿಧ ಭಾಗಗಳಿಗೆ ಭೇಟಿ ನೀಡಿ ಜನರಿಗೆ ಕೃತಜ್ಞತೆ ಸಲ್ಲಿಸಿದ ವೇಳೆ ಡಿಕೆಶಿ, ಮುಕ್ತವಾಗಿ ಮನದಾಳದ ಮಾತುಗಳನ್ನಾಡಿದರು. ನಮ್ಮ ಬದುಕು ಶಾಶ್ವತವಲ್ಲ. ನಾವು ಬಿಟ್ಟು ಹೋಗುವ ಸಾಕ್ಷಿಗಳೇ ಶಾಶ್ವತ. ನಾನು ಕೇವಲ ಎರಡು ವರ್ಷ ಮಾತ್ರ ಸಿಎಂ ಆಗಿರಬೇಕೇ? ನಿಮ್ಮ ಆಶೀರ್ವಾದದಿಂದ 2028ರಲ್ಲಿ ಮತ್ತೇ ಗೆಲ್ಲಬೇಕು. ಅದಕ್ಕೆ ನೀವು–ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡೋಣ. ಒಳ್ಳೆ ರೀತಿಯಲ್ಲಿ ಅಧಿಕಾರ ನಡೆಸಿ, ಸಾಕ್ಷಿ ಗುಡ್ಡೆಗಳನ್ನು ಬಿಟ್ಟು ಹೋಗೋಣ ಎಂದು ಕರೆ ನೀಡುವ ಮೂಲಕ ಮತ್ತೆ ಸಿಎಂ ಆಗಲು ಶಕ್ತಿ ತುಂಬುವಂತೆ ಮನವಿ ಮಾಡಿದರು.

ಈ ಜಿಲ್ಲೆಯಲ್ಲಿ ಮತ್ತೊಬ್ಬ ಡಿ.ಕೆ.ಶಿವಕುಮಾರ್‌ನನ್ನು ಹುಟ್ಟುಹಾಕಲು ಬಿಜೆಪಿ ಹಾಗೂ ಜೆಡಿಎಸ್ ಪಕ್ಷದಿಂದ ಸಾಧ್ಯವೇ? ಖಂಡಿತಾ ಇಲ್ಲ. ಇದನ್ನು ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಮನದಟ್ಟು ಮಾಡಿಕೊಳ್ಳಬೇಕು. ನೀವು ಯಾರನ್ನು ಒಪ್ಪಿಸದಿದ್ದರೂ ನಿಮ್ಮ ಆತ್ಮಸಾಕ್ಷಿಯನ್ನು ಒಪ್ಪಬೇಕು. ಪಿಜಿಆರ್ ಸಿಂಧ್ಯಾ, ವಿಶ್ವನಾಥ್, ನಾರಾಯಣ ಗೌಡರು, ಯು.ಕೆ.ಸ್ವಾಮಿ ಅವರು ನನ್ನ ವಿರುದ್ಧ ಚುನಾವಣೆಯಲ್ಲಿ ನಿಂತಿದ್ದರು. ಅವರು ಈಗ ನನ್ನ ಪರವಾಗಿ ನನ್ನ ಜತೆ ನಿಂತಿದ್ದಾರೆ. ಅವರೇನೂ ದಡ್ಡರಾ? ಮತ್ತೊಬ್ಬ ಶಿವಕುಮಾರ್ ಬರುವುದಿಲ್ಲ, ಜನರಿಗೆ ಒಳ್ಳೆಯದಾಗಲಿ ಎಂದು ಅವರು ನನ್ನ ಜತೆ ಕೈ ಜೋಡಿಸಿದ್ದಾರೆ. ನಿಮ್ಮಲ್ಲಿ ವೈಷಮ್ಯ ಇದ್ದರೆ ಮರೆತುಬಿಡಿ. ವೈಷಮ್ಯ ಮರೆತು ಕ್ಷೇತ್ರದ ಒಳಿತಿಗೆ ಒಟ್ಟಾಗಿ ಕೆಲಸ ಮಾಡೋಣ ಎಂದು ಬೇರೆ ಪಕ್ಷದ ಮುಖಂಡರಿಗೂ ತಿಳಿಸುತ್ತೇನೆ. ಎಲ್ಲರಿಗೂ ಬಾಗಿಲು ತೆರೆದಿದೆ ಎಂದರು. ■6ನೇ ಪುಟಕ್ಕೆ

'ಮತ' ಇಲ್ಲದಿದ್ದರೆ ಪಂಚ ಗ್ಯಾರಂಟಿ ಸಿಗಲ್ಲ!

ಕನಕಪುರ: ಮತ ಕಳೆದುಕೊಂಡರೆ ಪಂಚ ಗ್ಯಾರಂಟಿ ಸಿಗುವುದಿಲ್ಲ ಎಂದು ಸಿಎಂ ಡಿ.ಕೆ. ಶಿವಕುಮಾರ್ ಎಚ್ಚರಿಸಿದ್ದಾರೆ. 'ಕೃತಜ್ಞತಾ ಯಾತ್ರೆ' ವೇಳೆ ಸಾತನೂರಿನಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಮೂಲಕ ನಿಮ್ಮ ಮತ(ವೋಟ್) ಕಿತ್ತುಹಾಕಲು ನೋಡುತ್ತಿದ್ದಾರೆ. ತಮಿಳುನಾಡಿನಲ್ಲಿ 65 ಲಕ್ಷ, ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮತಗಳನ್ನು ಕಿತ್ತುಹಾಕಿದ್ದಾರೆ. ಯಾರೂ ಮತವನ್ನು ಕಳೆದುಕೊಳ್ಳಬೇಡಿ. ವೋಟ್ ಇಲ್ಲವಾದರೆ ಅನ್ನಭಾಗ್ಯ, ಗೃಹಲಕ್ಷ್ಮೀ, ಗೃಹಜ್ಯೋತಿ, ಬಸ್ ಪಾಸ್ ಯಾವುದೇ ಸೌಲಭ್ಯ ಸಿಗುವುದಿಲ್ಲ ಎಂದರು.

ಜೀರೋ ಟ್ರಾಫಿಕ್ ತಪ್ಪಿಸಲು ಸಿಎಂ ಡಿಕೆಶಿ ಮೆಟ್ರೋ ಪ್ರಯಾಣ



ಬೆಂಗಳೂರು: ಸಾರ್ವಜನಿಕರಿಗೆ ತೊಂದರೆ ಆಗಬಹುದಾದ ಜೀರೋ ಟ್ರಾಫಿಕ್ ಕಾರು ಪ್ರಯಾಣ ತಪ್ಪಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸೌಧದ ಮೆಟ್ರೋ ಸ್ಟೇಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ ಮೆಟ್ರೋದಲ್ಲಿ ಪ್ರಯಾಣಿಸಿದರು. ಸಾಮಾನ್ಯವಾಗಿ ಮುಖ್ಯ ಮಂತ್ರಿ ನಿವಾಸ ಸದಾಶಿವನಗರದಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ ಜನಸ್ನೇಹಿ ಕ್ರಮವಾಗಿ ಮೆಟ್ರೋ ರೈಲಿನಲ್ಲಿ ಪ್ರಯಾಣಿಸಿ, ಸಾರ್ವಜನಿಕರೊಂದಿಗೆ ಬೆರೆತು ಮಾತುಕತೆ ನಡೆಸಿದರು. ಈ ವೇಳೆ ಯುವಕ–ಯುವತಿಯರು ಸಿಎಂ ಜೊತೆ ಸೆಲ್ಫಿ ತೆಗೆದುಕೊಂಡು, ಸಂಭ್ರಮಿಸಿ ದರು. ಕನಕಪುರ ರಸ್ತೆಯಿಂದ ರಸ್ತೆ ಮಾರ್ಗವಾಗಿ ಕನಕಪುರಕ್ಕೆ ಪ್ರವಾಸ ಮುಂದುವರೆಸಿದರು.

ಕೊಡಗಿನ ಹೋಂಸ್ಟೇನಲ್ಲಿ ಗ್ಯಾಸ್ ವಿಷಾನಿಲ ಸೋರಿಕೆಗೆ ಮೈಸೂರಿನ ಯುವತಿ ಬಲಿ

ಮಡಿಕೇರಿ, ಜೂ.7– ಪ್ರವಾಸಕ್ಕೆಂದು ಸ್ನೇಹಿತರ ಜೊತೆಯಲ್ಲಿ ಬಂದಿದ್ದ ಮೈಸೂರಿನ ಯುವತಿ ಹೋಂಸ್ಟೇನಲ್ಲಿ ಗ್ಯಾಸ್ ಗೀಸರ್‌ನಿಂದ ವಿಷಾನಿಲ ಸೋರಿಕೆಯಾಗಿ ಮೃತಪಟ್ಟಿರುವ ಘಟನೆ ಸೋಮವಾರಪೇಟೆಯ ಕಲ್ಕಂದೂರು ಗ್ರಾಮದಲ್ಲಿ ನಡೆದಿದೆ.



ಮೈಸೂರಿನ ಯರಗನಹಳ್ಳಿ ಬಡಾವಣೆ ನಿವಾಸಿ ಎಸ್.ಜಗನ್ನಾಥ್ ಹಾಗೂ ರೇಣುಕಾ ದಂಪತಿ ಪುತ್ರಿ ವಿನುತ (27) ಎಂಬುವರೆ ಮೃತ ದುರ್ದೈವಿಯಾಗಿದ್ದಾರೆ.

ಘಟನೆ ಹಿನ್ನೆಲೆ: ವಿನುತ ಹೆಲ್ತ್ ಕೇರ್ ಖಾಸಗಿ ಕಂಪೆನಿ ಉದ್ಯೋಗಿಯಾಗಿದ್ದು, ವರ್ಕ್ ಫ್ರಂ ಹೋಮ್ ಮಾಡುತ್ತಿದ್ದರು. ಕಂಪೆನಿಗೆ 2 ದಿನ ರಜೆ ಇದ್ದ ಹಿನ್ನೆಲೆಯಲ್ಲಿ ಸ್ನೇಹಿತರ ಜೊತೆಯಲ್ಲಿ ಕೊಡಗಿಗೆ ಪ್ರವಾಸ ಬಂದಿದ್ದರು. ವಿನುತ ಮತ್ತವರ ಸ್ನೇಹಿತರು ಸೋಮವಾರಪೇಟೆಯ ಕಲ್ಕಂದೂರು ಗ್ರಾಮದ ಎಸ್ಟೇಟ್ ಹೋಂಸ್ಟೆ ಒಂದರಲ್ಲಿ ತಂಗಿದ್ದರು. ಭಾನುವಾರ ■6ನೇ ಪುಟಕ್ಕೆ

ರಘು ಕೌಟಿಲ್ಯ, ಲಿಂಗರಾಜ್ ಪಾಟೀಲ್ ಪರಿಷತ್‌ಗೆ ಬಿಜೆಪಿ ಅಭ್ಯರ್ಥಿಗಳು

ರಾಜ್ಯಸಭೆಗೆ ಪ್ರೊ.ಎಂ.ನಾಗರಾಜ್ ಘೋಷಣೆ

ನಾಮಪತ್ರ ಸಲ್ಲಿಕೆಗೆ ಇಂದೇ ಕಡೆ ದಿನ



ರಘು ಕೌಟಿಲ್ಯ



ಲಿಂಗರಾಜಪಾಟೀಲ್

ಬೆಂಗಳೂರು: ರಾಜ್ಯಸಭಾ ಮತ್ತು ವಿಧಾನ ಪರಿಷತ್‌ಗೆ ಬಿಜೆಪಿ, ಅಭ್ಯರ್ಥಿಗಳನ್ನು ಘೋಷಿಸಿದೆ.

ರಾಜ್ಯಸಭೆಗೆ ಪ್ರೊ.ಎಂ. ನಾಗರಾಜ್ ಹಾಗೂ ವಿಧಾನ ಪರಿಷತ್‌ಗೆ ಬಿಜೆಪಿ ಓಬಿಸಿ ಮೋರ್ಚಾ ರಾಜ್ಯಾಧ್ಯಕ್ಷ ಮೈಸೂರಿನ ರಘು ಕೌಟಿಲ್ಯ ಹಾಗೂ ಲಿಂಗರಾಜ್ ಪಾಟೀಲ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಇತ್ತ, ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ 3ನೇ ಅಭ್ಯರ್ಥಿಯಾಗಿ ಗೋವಿಂದ ರಾಜು ಹೆಸರನ್ನು ಘೋಷಿಸಲಾಗಿದೆ.

ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಸೋಮವಾರ(ಜೂನ್ 8) ಕಡೆಯ ದಿನವಾಗಿದ್ದು, ಜೂ.9ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ. ಜೂ.11ರವರೆಗೆ ನಾಮಪತ್ರ ಹಿಂಪಡೆಯಲು ಅವಕಾಶವಿದ್ದು, ಜೂ.18ಕ್ಕೆ ಮತದಾನ ನಡೆಯಲಿದೆ. ಹಿಂದುಳಿದ ಮಡಿವಾಳ ಸಮುದಾಯದ ಆರ್.ರಘು(ಕೌಟಿಲ್ಯ) ■6ನೇ ಪುಟಕ್ಕೆ

ಮೈಸೂರಿನ ಮನೆಯೊಂದರ ಮುಂದೆ ಚೀಲ ಪ್ರತ್ಯಕ್ಷ...! ಸ್ಥಳಕ್ಕೆ ದೌಡಾಯಿಸಿ ಪರಿಶೀಲಿಸಿದ ಪೊಲೀಸರು...!!

ಮೈಸೂರು, ಜೂ.7(ಪಿಎಂ)– ಏನೋ ತುಂಬಿದ್ದ ಪ್ಲಾಸ್ಟಿಕ್ ಚೀಲವೊಂದು ಮನೆಯೊಂದರ ಮುಂದೆ ಪತ್ತೆಯಾಗಿ ಆತಂಕ ಸೃಷ್ಟಿಸಿತ್ತು. ಸ್ಥಳಕ್ಕೆ ದೌಡಾಯಿಸಿದ ಪೊಲೀಸರು, ಆ ಇಡೀ ಆವರಣದಲ್ಲಿ ಸಾರ್ವಜನಿಕರಿಗೆ ನಿರ್ಬಂಧ ವಿಧಿಸಿ ಪರಿಶೀಲನೆಯಲ್ಲಿ ತೊಡಗಿದ್ದರು. ಹೌದು, ಇಂತಹದೊಂದು ಆತಂಕಕಾರಿ ಪ್ರಸಂಗ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಭಾನುವಾರ ನಡೆದಿದೆ!

ಮೈಸೂರಿನ ಲಕ್ಷ್ಮೀಪುರಂನ ಅಂಚೆ ಕಚೇರಿಯ ಸಮೀಪದ ಮನೆವೊಂದರ ಮುಂದೆ ರಸ್ತೆಯಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ಚೀಲವು ಈ ರೀತಿಯ ಅವಾಂತರಕ್ಕೆ ಕಾರಣವಾಯಿತು. ಭಾನುವಾರ ಬೆಳಗ್ಗೆಯಿಂದಲೂ ಆ ಮನೆಯ ಮುಂದಿನ ರಸ್ತೆಯಲ್ಲಿ ಏನೋ ತುಂಬಿದ್ದ ಚೀಲವೊಂದು ಬಿದ್ದಿತ್ತು. ಆದರೆ ಮನೆಯವರು ಬೆಳಗ್ಗೆಯಿಂದ ಅದನ್ನು ಗಮನಿಸಿರಲಿಲ್ಲ. ಸಂಜೆ ವೇಳೆಗೆ ಆ ಚೀಲ ನೋಡಿದ ಮನೆಯವರು, ನಮಗೆ ಆಗದವರು ಯಾರೋ ಬೇಕೆಂದೇ, ಏನೋ ಅನಾಹುತ ಆಗಲೆಂದೇ ಈ ಚೀಲವನ್ನು ಇಲ್ಲಿ ಎಸೆದು ಹೋಗಿದ್ದಾರೆ ಎಂಬ ಅನುಮಾನದಿಂದ ಆತಂಕಗೊಂಡಿದ್ದರು.



ಫೈಲ್ ಚಿತ್ರ


ಆ ಚೀಲದಲ್ಲಿ ಸ್ಫೋಟಕ, ಮಾರಾಕಾಸ್ತ್ರ ಇರಬಹುದೇ? ಮಾಟ–ಮಂತ್ರದ ಸಾಮಗ್ರಿಗಳು ಅದರೊಳಗಿರಬಹುದೇ? ಹೀಗೆ ನಾನಾ ರೀತಿಯ ಲೆಕ್ಕಾಚಾರದೊಂದಿಗೆ ಆ ಮನೆಯವರು ದುಗುಡ–ಸಂಕಟದಲ್ಲಿ ತೊಳಲಾಡುತ್ತಿದ್ದರು. ಕೊನೆಗೆ ಅದೇ ಭೀತಿಯಲ್ಲಿ ಸ್ಥಳೀಯ ಪೊಲೀಸರಿಗೂ ವಿಷಯ ತಿಳಿಸಿದರು. ಕೂಡಲೇ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು, ಆ ಮನೆಯವರನ್ನು ಮೊದಲಿಗೆ ಸಮಾಧಾನಪಡಿಸಿ, ನಿಮ್ಮೊಂದಿಗೆ ನಾವಿದ್ದೇವೆ ಏನೂ ಆಗುವುದಿಲ್ಲ ಎಂದು ಧೈರ್ಯ ತುಂಬಿದರು.

ಆತಂಕದಲ್ಲೇ ಆ ಚೀಲದ ಸಮೀಪಕ್ಕೆ ಹೋದ ಇಬ್ಬರು ಪೊಲೀಸ್ ಸಿಬ್ಬಂದಿಗೂ ತಕ್ಷಣಕ್ಕೆ ಅದರಲ್ಲೇನಿದೆ ಎಂದು ಗೊತ್ತಾಗದೇ ಹಾಗೆ ಕೆಲ ಕಾಲ ನಿಂತು ನೋಡಿದರು. ಕೊನೆಗೆ ಆ ಚೀಲವನ್ನು ತುಸು ಕೊಡವಿದಾಗ, ಅಲ್ಲಿ ಕಂಡು ಬಂದಿದ್ದು ಏನು ಗೊತ್ತೇ!? ಅದುವೇ ಕೆಮ್ಮಣ್ಣು!! ಕೊನೆಗೆ ಒಮ್ಮೆಲೇ ಚೀಲವನ್ನು ಕೊಡವಿದಾಗ, ಚೀಲದೊಳಗೆ ಇದ್ದ ಮಣ್ಣು ಪೂರ್ಣ ಪ್ರಮಾಣದಲ್ಲಿ ಹೊರ ಬಿದ್ದಿತು.

ಚೀಲ ಇಲ್ಲಿಗೆ ಹೇಗೆ ಬಂತು: ಕೊನೆಗೆ ಸ್ಥಳದಲ್ಲಿದ್ದ ಎಲ್ಲರಲ್ಲೂ ಕಾಡಿದ್ದು ಒಂದೇ ಪ್ರಶ್ನೆ. ಅದೇನೆಂದರೆ ಈ ಚೀಲ ಇಲ್ಲಿಗೆ ಹೇಗೆ ಬಂತು. ಈ ಬಗ್ಗೆ ಅವಲೋಕಿಸಿದಾಗ, ■6ನೇ ಪುಟಕ್ಕೆ

ಸೂರಜ್ ಎಂ.ಎನ್. ಹೆಗಡೆ ನಿಧನ

ಮೈಸೂರು,ಜೂ.7– ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರೂ ಆದ ಎಐಸಿಸಿ ಕಾರ್ಯದರ್ಶಿ ಹಾಗೂ ಕೆಪಿಸಿಸಿ ಉಪಾಧ್ಯಕ್ಷ ಸೂರಜ್ ಎಂ.ಎನ್.ಹೆಗಡೆ ಭಾನುವಾರ ರಾತ್ರಿ ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನ ಹೊಂದಿದರು.



ಇವರು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ದ್ವಿತೀಯ ಪುತ್ರಿ ನಾಗರತ್ನ ಅವರ ಪುತ್ರ. ಮೃತರು ಪತ್ನಿ ಶಿಲ್ಪ ಹೆಗಡೆ, ಪುತ್ರರಾದ ಸಮೃದ್ಧ್ ಹೆಗಡೆ, ವಿಶ್ರುತ್ ಹೆಗಡೆ, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರು ತಮಿಳುನಾಡು ರಾಜ್ಯದ ಕಾಂಗ್ರೆಸ್ ಉಸ್ತುವಾರಿ ಸಹ ಆಗಿದ್ದರು. ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿ ಮೃತರ ನಿವಾಸವಿದ್ದು, ಅಂತ್ಯಕ್ರಿಯೆ ಸಂಬಂಧ ಸದ್ಯ ಮಾಹಿತಿ ಲಭ್ಯವಾಗಿಲ್ಲ.

3,395 ಪೊಲೀಸ್ ಕಾನ್ಸ್‌ಟೇಬಲ್ ನೇರ ನೇಮಕಾತಿಗೆ ಅಧಿಸೂಚನೆ: ಜೂ.8ರಿಂದ ಅರ್ಜಿ ಸಲ್ಲಿಕೆ

ಬೆಂಗಳೂರು: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಮಿಕ್ಕುಳಿದ (ಉಳಿದ ಮೂಲ) ವೃಂದದಲ್ಲಿನ ವಿವಿಧ ಜಿಲ್ಲಾ, ನಗರ ಹಾಗೂ ಘಟಕಗಳಲ್ಲಿ ಖಾಲಿ ಇರುವ ಒಟ್ಟು 3,395 ಪೊಲೀಸ್ ಕಾನ್ಸ್‌ಟೇಬಲ್(ಸಿವಿಲ್) ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಈ ಬಗ್ಗೆ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಇ–ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆಫ್‌ಲೈನ್–ಒಎಂಆರ್ ಮಾದರಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯನ್ನು ನಡೆಸಲಿದೆ ಎಂದ ಹೇಳಿದ್ದಾರೆ.

ಒಟ್ಟು 3,395 ಹುದ್ದೆಗಳಲ್ಲಿ ಪುರುಷ ಅಭ್ಯರ್ಥಿಗಳಿಗೆ 2,266, ಮಹಿಳಾ ಅಭ್ಯರ್ಥಿಗಳಿಗೆ 755, ಸೇವಾನಿರತ ಪುರುಷರಿಗೆ 257, ಸೇವಾನಿರತ ಮಹಿಳೆಯರಿಗೆ 82 ಹಾಗೂ ತೃತೀಯ ಲಿಂಗಿ ಅಭ್ಯರ್ಥಿಗಳಿಗೆ 35 ಹುದ್ದೆಗಳನ್ನು ಕಾಯ್ದಿರಿಸಲಾಗಿದೆ. ಆಯ್ಕೆಯಾಗುವ ಅಭ್ಯರ್ಥಿಗಳಿಗೆ 37,500 ರಿಂದ 76,100 ರವರೆಗಿನ ವೇತನ ಶ್ರೇಣಿ ಅನ್ವಯವಾಗಲಿದ್ದು, ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದ್ದಾರೆ. ■6ನೇ ಪುಟಕ್ಕೆ

ರೌಡಿಗಳ ಹೆಡೆಮುರಿ ಕಟ್ಟಲು ಮೈಸೂರಿನ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ರೌಡಿ ಸ್ಕ್ವಾಡ್ ರಚನೆ

ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಈ ನಿರ್ಧಾರ

- ಪೊಲೀಸ್ ಮಹಾ ನಿರ್ದೇಶಕರಿಂದ ಎಲ್ಲಾ ಜಿಲ್ಲೆಯ ಆಯುಕ್ತರು, ಐಜಿಪಿ, ಡಿಜಿಪಿಗಳು, ವರಿಷ್ಠಾಧಿಕಾರಿಗಳಿಗೆ ಸುತ್ತೋಲೆ
- ಏಳು ದಿನಗಳಲ್ಲಿ ಅನುಷ್ಠಾನ ವರದಿ ಸಲ್ಲಿಕೆಗೆ ಸೂಚನೆ

ಮೈಸೂರು, ಜೂ.7(ಜಿಎ)– ಮೈಸೂರಿನಲ್ಲಿ ರೌಡಿ ಶೀಟರ್‌ಗಳ ಹೆಡೆಮುರಿ ಕಟ್ಟಲು ಮುಂದಿನ ವಾರದಿಂದ ಮೈಸೂರು ನಗರದ ಎಲ್ಲಾ ಠಾಣೆಗಳ ವ್ಯಾಪ್ತಿಯಲ್ಲಿ ರೌಡಿ ಪ್ರತಿ ಬಂಧಕ ದಳ(ರೌಡಿ ಸ್ಕ್ವಾಡ್) ಆರಂಭವಾಗಲಿದೆ.

ರಾಜ್ಯದಲ್ಲಿ ರೌಡಿಸಂ, ಗ್ಯಾಂಗ್ ವಾರ್‌ಗಳು ಹಾಗೂ ಸಮಾಜ ವಿರೋಧಿ ಕೃತ್ಯಗಳನ್ನು ನಿಯಂತ್ರಿಸಲು ಕರ್ನಾಟಕ ಪೊಲೀಸ್ ಇಲಾಖೆ ಈ ಮಹತ್ವದ ಆದೇಶ ಹೊರಡಿಸಿದ್ದು, ಅದರಂತೆ ಮೈಸೂರು ನಗರದಲ್ಲಿ ರೌಡಿ ಪ್ರತಿಬಂಧಕ ದಳ ಆರಂಭವಾಗಲಿದ್ದು, ಈಗಾಗಲೇ ಎಲ್ಲಾ ಠಾಣೆಗಳಿಗೂ ಈ ಕುರಿತು ಸೂಚನೆ ನೀಡಲಾಗಿದೆ.

ಇತ್ತೀಚೆಗೆ ನೂತನ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ತಮ್ಮ ಅಧ್ಯಕ್ಷತೆಯಲ್ಲಿ ಕರ್ನಾಟಕ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆ ನಡೆಸಿ,



ಫೈಲ್ ಚಿತ್ರ

ರಾಜ್ಯದಲ್ಲಿ ರೌಡಿಸಂ ನಿರ್ಮೂಲನೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಮುಖ್ಯಮಂತ್ರಿಗಳ ಈ ನಿರ್ದೇಶನದ ಮೇರೆಗೆ ರಾಜ್ಯದ ಎಲ್ಲಾ ಪೊಲೀಸ್ ವಲಯಗಳು ಮತ್ತು ಪೊಲೀಸ್ ಠಾಣೆಗಳಲ್ಲಿ ವಿಶೇಷ 'ರೌಡಿ ಸ್ಕ್ವಾಡ್' ರಚಿಸುವಂತೆ ಪೊಲೀಸ್ ಮಹಾನಿರ್ದೇಶಕ ಹಾಗೂ ಮಹಾ ನಿರೀಕ್ಷಕ ಡಾ.ಎಂ.ಎ.ಸಲೀಂ ಅವರು ಜೂ.5 ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಸೂಚಿಸಿದ್ದಾರೆ. ಈ ಆದೇಶವನ್ನು ರಾಜ್ಯದ ಎಲ್ಲಾ ಪೊಲೀಸ್ ಆಯುಕ್ತರು, ಐಜಿಪಿ, ಡಿಐಜಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕಳುಹಿಸಲಾಗಿದ್ದು, ಏಳು ದಿನಗಳೊಳಗೆ ಅನುಷ್ಠಾನ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ.

> ರೌಡಿ ಸ್ಕ್ವಾಡ್ ರಚನೆಗೆ ಸಂಬಂಧಿಸಿದಂತೆ ಪೊಲೀಸ್ ಮಹಾನಿರ್ದೇಶಕ ಹಾಗೂ ಮಹಾ ನಿರೀಕ್ಷಕರು ಆದೇಶ ಹೊರಡಿಸಿದ್ದಾರೆ. ಮೈಸೂರು ನಗರದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಏಳು ದಿನಗಳೊಳಗೆ ಅನುಷ್ಠಾನಗೊಳಿಸಲಾಗುತ್ತದೆ. ಈ ಸಂಬಂಧ ಎಲ್ಲಾ ಠಾಣೆಗಳಿಗೂ ಸೂಚನೆ ನೀಡಲಾಗಿದೆ.
>
> 
>
> -ಡಾ. ಹರ್ಷ ಪ್ರಿಯಂವದ, ಡಿಸಿಪಿ

ರಚನೆ ಹೇಗೆ: ಪ್ರತಿ ಪೊಲೀಸ್ ವಲಯದಲ್ಲಿ ಪ್ರತ್ಯೇಕ ರೌಡಿ ಸ್ಕ್ವಾಡ್ ರಚನೆ ಮಾಡಿ, ಪೊಲೀಸ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ತಂಡ ಕಾರ್ಯನಿರ್ವಹಣೆ ಮಾಡಬೇಕು. ಅಗತ್ಯವಿದ್ದರೆ ಪ್ರತಿ ಪೊಲೀಸ್ ಠಾಣೆಯಲ್ಲೂ ಪ್ರತ್ಯೇಕ ರೌಡಿ ಸ್ಕ್ವಾಡ್ ರಚನೆ ಮಾಡಿ, ರೌಡಿ ಶೀಟರ್‌ಗಳ ಚಟುವಟಿಕೆಗಳ ಮೇಲ್ವಿಚಾರಣೆ ಹಾಗೂ ನಿರಂತರ ಪರಿಶೀಲನೆ ಮಾಡಬೇಕು. ಹೊಸದಾಗಿ ರೌಡಿ ಶೀಟ್ ತೆರೆಯಬೇಕಾದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ. ಪ್ರಮುಖವಾಗಿ ಗ್ಯಾಂಗ್ ಚಟುವಟಿಕೆ, ಬೆದರಿಕೆ, ಸುಲಿಗೆ, ಬಲವಂತದ ವಸೂಲಿ, ಸಾರ್ವಜನಿಕ ಶಾಂತಿ ಭಂಗ ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಿದ್ದಾರೆ.

ಮೈಸೂರಲ್ಲಿ 600 ಮಂದಿ ರೌಡಿ ಶೀಟರ್

ಮೈಸೂರು ನಗರದಲ್ಲಿ ಈಗಾಗಲೇ 600 ಮಂದಿ ರೌಡಿ ಶೀಟರ್‌ಗಳಿದ್ದು, ಅವರಲ್ಲಿ 90 ಮಂದಿ ಕುಖ್ಯಾತ ರೌಡಿಗಳು ಒಳಗೊಂಡಿದ್ದಾರೆ. ಇವರುಗಳ ಮೇಲೆ ನಗರ ಅಪರಾಧ ವಿಭಾಗದಲ್ಲಿರುವ ರೌಡಿ ಪ್ರಬಂಧಕ ದಳ ತೀವ್ರ ನಿಗಾವಹಿಸಿದೆ. ಮೈಸೂರು ನಗರದಲ್ಲಿ ಸಣ್ಣ–ಪುಟ್ಟ ವಿಚಾರಕ್ಕೆ ಯುವಕರು ಗುಂಪು ಕಟ್ಟಿಕೊಂಡು ಗಲಾಟೆ ಮಾಡುತ್ತಿದ್ದಾರೆ. ಕೆಲವೆಡೆ ಕೊಲೆಗಳು ನಡೆದಿವೆ. ಮತ್ತೊಂದೆಡೆ ಗುಂಪುಗಳ ನಡುವೇ ಸೇಡಿನ ಕೊಲೆಗಳು ಹೆಚ್ಚಳವಾಗಿದ್ದು, ಮುಂದಿನ ವಾರದಿಂದ ಎಲ್ಲಾ ಪೊಲೀಸ್ ಠಾಣೆಯಲ್ಲಿ ರೌಡಿ ಸ್ಕ್ವಾಡ್ ರಚನೆಯಾದ ನಂತರ ನಗರದಲ್ಲಿರುವ ರೌಡಿಗಳ ಅಟ್ಟಹಾಸಕ್ಕೆ ಮತ್ತಷ್ಟು ಕಡಿವಾಣ ಬೀಳಬಹುದೇ ಎಂದು ಕಾದು ನೋಡಬೇಕಿದೆ.

ರೌಡಿ ಸ್ಕ್ವಾಡ್‌ನ ಪ್ರಮುಖ ಕರ್ತವ್ಯಗಳು: ರೌಡಿ ಶೀಟರ್‌ಗಳ ಚಲನವಲನಗಳ ಮೇಲೆ ನಿಗಾವಹಿಸಿ, ಅಪರಾಧ ಪ್ರಕರಣಗಳ ಪರಿಶೀಲನೆ ಮಾಡಿ, ವಾರಂಟ್ ಜಾರಿ ಹಾಗೂ ಕಾನೂನು ಕ್ರಮಗಳ ಅನುಷ್ಠಾನಗೊಳಿಸಬೇಕು. ಸ್ಥಳೀಯ ಗುಪ್ತಚರ ಮಾಹಿತಿಯ ಸಂಗ್ರಹ, ಸೂಕ್ಷ್ಮ ಪ್ರದೇಶಗಳಲ್ಲಿ ವಿಶೇಷ ದಾಳಿ ಮತ್ತು ತಪಾಸಣೆ ಮಾಡುವುದು ಪ್ರಮುಖ ಕರ್ತವ್ಯವಾಗಿದೆ.

ಅಧಿಕಾರಿಗಳ ಜವಾಬ್ದಾರಿ: ಪ್ರತಿ 15 ದಿನಗಳಿಗೊಮ್ಮೆ ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಮತ್ತು ಠಾಣಾಧಿಕಾರಿಗಳು ರೌಡಿ ಸ್ಕ್ವಾಡ್ ಕಾರ್ಯವನ್ನು ಪರಿಶೀಲಿಸಬೇಕು. ತಿಂಗಳವಾರು ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಕಡ್ಡಾಯವಾಗಿದೆ. ■6ನೇ ಪುಟಕ್ಕೆ

ಕೆಂಪು ಚೆಲುವಾಜಮ್ಮಣ್ಣಿ ನಗರದಲ್ಲಿ ಬೆಳ್ಳಿ ಹಬ್ಬದ ಸಂಭ್ರಮ

● ಭರತನಾಟ್ಯ, ಪೊಲೀಸ್ ಬ್ಯಾಂಡ್, ಸುಮಧುರ ಗೀತೆಗಳ ಗಾಯನ ● ಮೈಸೂರು ಪರಂಪರೆ ಉಳಿವಿಗೆ ಕೆ.ಸಿ.ನಗರ ನಿವಾಸಿಗಳ ಕೊಡುಗೆ ಸ್ಮರಣೀಯ: ಯದುವೀರ್

ಮೈಸೂರು, ಜೂ.7(ಎಂಕೆ)– ಮೈಸೂರಿನ ಪ್ರಸಿದ್ಧ ಧಾರ್ಮಿಕ ಕೇಂದ್ರವಾದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಯುವರಾಣಿ 'ಕೆಂಪು ಚೆಲುವಾಜಮ್ಮಣ್ಣಿ ನಗರ(ಕೆ.ಸಿ.ನಗರ) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬೆಳ್ಳಿ ಹಬ್ಬದ ಸಮಾರಂಭ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಡಗರ–ಸಂಭ್ರಮದಿಂದ ಭಾನುವಾರ ನಡೆಯಿತು.

ಸಂಘದ ವತಿಯಿಂದ ಆಯೋಜಿಸಿದ್ದ ಬೆಳ್ಳಿ ಹಬ್ಬದ ಸಮಾರಂಭದಲ್ಲಿ ಭರತನಾಟ್ಯ, ಪೊಲೀಸ್ ಬ್ಯಾಂಡ್, ಸುಮಧುರ ಗೀತಾಗಾಯನ ಸೇರಿದಂತೆ ಹಲವು ಸ್ಮರಣೀಯ ಕಾರ್ಯಕ್ರಮಗಳು ನಿವಾಸಿಗಳಲ್ಲಿನ ಸಂಭ್ರಮವನ್ನು ಇಮ್ಮಡಿಗೊಳಿಸಿತು.

ಪೂರ್ಣಕುಂಭ ಸ್ವಾಗತದೊಂದಿಗೆ ಸಮಾರಂಭಕ್ಕೆ ಆಗಮಿಸಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಗಿಡನೆಟ್ಟು ನೀರೆರೆಯುವ ಮೂಲಕ ಪರಿಸರ ದಿನ ಆಚರಿಸಿ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ದೀಪ ಬೆಳಗಿಸುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು. ಹಾಗೆಯೇ ಕೆ.ಸಿ.ನಗರ ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ನಂತರ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅವರು, ಮೈಸೂರು ಸಂಸ್ಥಾನದ ಪರಂಪರೆ ಉಳಿವಿಗೆ ಶ್ರಮಿಸಿದ ಯುವರಾಣಿ ಕೆಂಪು ಚೆಲುವಾಜಮ್ಮಣ್ಣಿ ಅವರ ಅಧ್ಯಾತ್ಮಿಕ ಜೀವನ ಮಾದರಿಯಾಗಿದೆ. ಜಯಚಾಮರಾಜ ಒಡೆಯರ್ ಅವರು 'ದತ್ತಾತ್ರೇಯ' ಪುಸ್ತಕ ಬರೆಯಲು ಕೆಂಪು ಚೆಲುವಾಜಮ್ಮಣ್ಣಿ ಅವರು ಪ್ರೇರಣೆಯಾಗಿದ್ದಾರೆ. ಇವತ್ತಿಗೂ ಅವರನ್ನು ಯುವರಾಣಿ ಎಂದು ಕರೆಯುವ ಪದ್ಧತಿ ಬೆಳೆದು ಬಂದಿದೆ ಎಂದು ಸ್ಮರಿಸಿದರು.

ಯುವರಾಣಿ ಕೆಂಪು ಚೆಲುವಾಜಮ್ಮಣ್ಣಿ ಅವರ ಹೆಸರಿನ ಈ ಸಂಘ ಸ್ಥಾಪನೆಗೊಂಡು ಇಪ್ಪತ್ತೈದು ವರ್ಷವಾಗಿದ್ದು, ಬಡಾವಣೆಯ ಅಭಿವೃದ್ಧಿಗೆ ಎಲ್ಲಾ ನಿವಾಸಿಗಳ ಕೊಡುಗೆ ಮಹತ್ವದ್ದಾಗಿದೆ. ಗಿಡ–ಮರಗಳನ್ನು ಬೆಳೆಸಿ, ಉದ್ಯಾನವನಗಳ ಅಭಿವೃದ್ಧಿಯೊಂದಿಗೆ ಬಡಾವಣೆಗೆ ಹೊಸ ರೂಪ ನೀಡಲಾಗಿದ್ದು, ಉತ್ತಮ ವಾತಾವರಣವನ್ನು ಒಳಗೊಂಡಿದೆ ಎಂದರು.

ಪ್ರಗತಿಯೊಂದಿಗೆ ಪರಿಸರವನ್ನು ಉಳಿಸಿ–ಬೆಳೆಸಬೇಕಿದೆ. ಈ ನಿಟ್ಟಿನಲ್ಲಿ ಮೈಸೂರಿನ ಪ್ರತಿಯೊಬ್ಬರು ಕೈಜೋಡಿಸಬೇಕು ಎಂದು ಮನವಿ ಮಾಡಿದರಲ್ಲದೆ, ಕೆ.ಸಿ.ನಗರಕ್ಕೆ ಸ್ವಾಗತ ಕಮಾನು, ಪಾರ್ಕ್‌ನಲ್ಲಿ ಯೋಗ ಮಂಟಪ ಅಭಿವೃದ್ಧಿ ಹಾಗೂ ರಸ್ತೆ ಅಗಲೀಕರಣ ಸೇರಿದಂತೆ ಕೋರಿರುವ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಕೆಂಪು ಚೆಲುವಾಜಮ್ಮಣ್ಣಿ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೆಚ್.ಆರ್.ಯೋಗೇಂದ್ರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಇತಿಹಾಸಕಾರ ಧರ್ಮೇಂದ್ರ ಕುಮಾರ್, ಸಂಘದ ಪದಾಧಿಕಾರಿಗಳಾದ ಎಂ.ಚೌಡೇಗೌಡ, ಚನ್ನಕೇಶವ, ಟಿ.ಪಿ.ವಿಶ್ವನಾಥ್ ಮತ್ತಿತರರು ಉಪಸ್ಥಿತರಿದ್ದರು.




ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ 'ಕೆಂಪು ಚೆಲುವಾಜಮ್ಮಣ್ಣಿ ನಗರ(ಕೆ.ಸಿ.ನಗರ) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬೆಳ್ಳಿ ಹಬ್ಬದ ಸಮಾರಂಭ ಭಾನುವಾರ ನಡೆಯಿತು. ಸಂಸದ ಯದುವೀರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಇತಿಹಾಸಕಾರ ಧರ್ಮೇಂದ್ರಕುಮಾರ್, ಕೆಂಪು ಚೆಲುವಾಜಮ್ಮಣ್ಣಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೆಚ್.ಆರ್.ಯೋಗೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಹಲವೆಡೆ ವಿಶ್ವ ಪರಿಸರ ದಿನಾಚರಣೆ...



ಮೈಸೂರಿನ ಶ್ರೀರಾಂಪುರದಲ್ಲಿರುವ ಜೈನ್ ಸಂಸ್ಥೆಯ ಮಹಾವೀರ್ ವಿದ್ಯಾ ಮಂದಿರದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು ಮುಖ್ಯ ಅತಿಥಿಗಳಾಗಿ ಡೆಪ್ಯೂಟಿ ಡಿಸಿಎಫ್ ಎಸ್.ಗಿರೀಶ್ ಭಾಗವಹಿಸಿ ಗಿಡ ನೆಟ್ಟರು. ಸಂಸ್ಥೆಯ ಅಧ್ಯಕ್ಷ ಡಾ.ಬಾಹುಬಲಿಜಿ, ನಾಗಾವಿ, ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಕಂಠದತ್ತ, ಉಪಪ್ರಾಂಶುಪಾಲೆ ಸುಮ ಕೆ.ಸಿ. ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಕಡಕೊಳದ ಕೆವಿಬಿಇಎ ತರಬೇತಿ ಕೇಂದ್ರದಲ್ಲಿ ಪರಿಸರ ದಿನ ಅಂಗವಾಗಿ ವಿವಿಧ ಜಾತಿಯ 110 ಸಸಿಗಳನ್ನು ನೆಡಲಾಯಿತು. ಈ ವೇಳೆ ಕೇಂದ್ರದ ಪ್ರಾಂಶುಪಾಲ ಯೋಗೇಗೌಡ, ಕಾರ್ಯನಿರ್ವಾಹಕ ಇಂಜಿನಿಯರ್ ಮೋಹನ್‌ಶಂಕರ್, ವಲಯದ ಕಾರ್ಯದರ್ಶಿ ಜಿ.ರಾಮಚಂದ್ರರಾವ್, ಕೇಂದ್ರದ ಸಿಬ್ಬಂದಿಗಳಾದ ಮಂಜು, ಪರಮೇಶ್, ಮೂರ್ತಿ ಉಪಸ್ಥಿತರಿದ್ದರು.

600 ಮೀ. ಓಟದಲ್ಲಿ ಅಜಯ್ ಪೃಥ್ವಿರಾಜ್‌ಗೆ ಪ್ರಥಮ ಸ್ಥಾನ

ಮೈಸೂರು: ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ವರ್ಲ್ಡ್ ಕಿಡ್ಸ್ ಅಥ್ಲೆಟಿಕ್ಸ್ ಡೇ ಅಂಗವಾಗಿ ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಆಯೋಜಿಸಲಾಗಿದ್ದ 600 ಮೀಟರ್ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿದ್ದಾನೆ. ಮೈಸೂರಿನ ಐಡಿಯಲ್ ಜಾವಾ ರೋಟರಿ ಶಾಲೆಯಲ್ಲಿ 10ನೇ ತರಗತಿ ವ್ಯಾಸಾಂಗ ಮಾಡುತ್ತಿರುವ ಅಜಯ್ ಪೃಥ್ವಿರಾಜ್ ಗಾಯತ್ರಿ ಪುರಂನ ನಿವಾಸಿ ಎಂ.ಲಿಂಗರಾಜು ಹಾಗೂ ಸಂಗೀತ ದಂಪತಿ ಪುತ್ರ.



ತಾಂತ್ರಿಕ ತರಬೇತಿಗೆ ಅರ್ಜಿ

ಮೈಸೂರು, ಜೂ.7– ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ ಪಿಯುಸಿಯಲ್ಲಿ ಪಾಸಾಗಿ ಸಿ.ಇ.ಟಿ ಪರೀಕ್ಷೆ ಮುಗಿಸಿದ ವಿದ್ಯಾರ್ಥಿಗಳಿಗೆ ಒಂದು ತಿಂಗಳ ತಾಂತ್ರಿಕ ತರಬೇತಿ ನೀಡಲಾಗುತ್ತದೆ. ತರಬೇತಿಯಿಂದ ಬಿ.ಇಗೆ ಸೇರ ಬಯಸುವ ವಿದ್ಯಾರ್ಥಿಗಳಿಗೆ ಮುಂದಿನ ಬಿ.ಇ ವ್ಯಾಸಂಗಕ್ಕೆ ಅನುಕೂಲವಾಗುತ್ತದೆ. ಈ ಒಂದು ತಿಂಗಳ ತರಬೇತಿಯ ಅವಧಿಯಲ್ಲಿ ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಹಾಗೂ ಕಂಪ್ಯೂಟರ್ ವಿಷಯಗಳಲ್ಲಿ ಪ್ರಾಕ್ಟಿಕಲ್ ತರಬೇತಿಯನ್ನು ನೀಡಲಾಗುತ್ತದೆ. ಆಸಕ್ತರು ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ, #93,94 ಬೆಳಗೊಳ ಕೈಗಾರಿಕ ವಸಾಹತು ಕೆ.ಆರ್.ಎಸ್ ರಸ್ತೆ ಹಾಗೂ ದೂ.ಸಂ: 8088415824, 9980615384, 9980557220 ಸಂಪರ್ಕಿಸಿ.



ಅಭಿನಂದನೆ...

ಮೈಸೂರಿನ ಜಿಲ್ಲಾ ಆಡಳಿತ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ನಡೆದ ಶ್ರೀ ನಾಲ್ವಡಿ ಕೃಷ್ಣರಾಜ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಸ್ವೀಕರಿಸಿದ ಸಮಾಜ ಸೇವಕ ಎನ್.ಆರ್.ನಾಗೇಶ್ ಅವರನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿನಂದಿಸಿದರು.

ಮೈಸೂರಲ್ಲಿ ಪ್ರೊ.ಜಿ.ಟಿ.ನಾರಾಯಣರಾಯರಿಗೆ ನುಡಿನಮನ

ಮೈಸೂರು, ಜೂ.7(ಎಸ್‌ಪಿಎನ್)– ಪ್ರೊ.ಜಿ.ಟಿ.ನಾರಾಯಣರಾಯರು ಇಂಗ್ಲಿಷ್‌ನಿಂದ ಕನ್ನಡಕ್ಕೆ 60ಕ್ಕೂ ಅಧಿಕ ಕೃತಿಗಳ ಅನುವಾದಿಸಿ, ಕನ್ನಡ ಸಾರಸ್ವತಲೋಕಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದು ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರ ಗಾನ ಭಾರತೀ ವೀಣೆ ಶೇಷಣ್ಣ ಭವನದಲ್ಲಿ ಪ್ರೊ.ಜಿ.ಟಿ.ನಾರಾಯಣರಾಯರ ಜನ್ಮ ಶತಮಾನೋತ್ಸವ ಪ್ರಯುಕ್ತ ಜಿಟಿಎನ್ ನುಡಿನಮನ ಹಾಗೂ ವಿದುಷಿ ಪ್ರತಿಭಾ ರಾಮಸ್ವಾಮಿ ಮತ್ತು ವಿದುಷಿ ಜನನಿ ಮುರಳಿ ಅವರಿಂದ ವರಕವಿ ದ.ರಾ. ಬೇಂದ್ರೆ ವಿರಚಿತ ಕವನಗಳ ಆಧಾರಿತ 'ಪ್ರತಿಬಿಂಬ' ಕುರಿತ ವಿಶೇಷ ನೃತ್ಯ ಕಾರ್ಯಕ್ರಮದ ಅಧ್ಯಕ್ಷತೆ ಮಾತನಾಡಿದರು.

ಪ್ರೊ.ಜಿಟಿಎನ್ ಹೆಸರಾಂತ ಸಾಹಿತಿಗಳು. ಇವರು ಹಲವು ವೈಜ್ಞಾನಿಕ ಕೃತಿ ಹಾಗೂ ವಿಜ್ಞಾನ ಲೇಖನಗಳನ್ನು ಅನುವಾದಿಸಿದ್ದು, ಇವರು ಸುಮಾರು 60ಕ್ಕೂ ಅಧಿಕ ಕೃತಿಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ರಚಿಸಿದ್ದಾರೆ. ನವಕರ್ನಾಟಕ ಪ್ರಕಟಿತ 'ವಿಜ್ಞಾನ ಪದವಿವರಣ ಕೋಶ' ಪ್ರೊ.ಜಿಟಿಎನ್ ಸಂಪಾದಕತ್ವದಲ್ಲಿ ಪ್ರಕಟವಾಗಿದ್ದು, ಕನ್ನಡಿಗರು ಹೆಮ್ಮೆಪಡುವ ವಿಷಯ ಎಂದು ಹೇಳಿದರು.

ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಡಾ.ಸಿ.ವಿ.ರಾಮನ್ ಹಾಗೂ ಡಾ.ಎಸ್.ಚಂದ್ರಶೇಖರ್ ಅವರಿಬ್ಬರ ಬಗ್ಗೆ ವೈಜ್ಞಾನಿಕ ಜೀವನ ಚರಿತ್ರೆ ರಚಿಸಿ, ಕನ್ನಡಿಗರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ ಎಂದರು.

ಇವರು ರಾಮನ್ ಸಂದರ್ಶನ, ವಿಜ್ಞಾನ ಸಪ್ತರ್ಷಿಗಳು ಸೇರಿದಂತೆ ಇತರೆ ಕೃತಿಗಳನ್ನು ಬರೆದಿದ್ದಾರೆ. ಬಳಿಕ ವಿದುಷಿ ಪ್ರತಿಭಾ ರಾಮಸ್ವಾಮಿ ಮತ್ತು ವಿದುಷಿ ಜನನಿ ಮುರಳಿ ಅವರಿಂದ ವರಕವಿ ದ.ರಾ.ಬೇಂದ್ರೆ ರಚಿತ ಕವನಗಳ ಅಧಾರಿತ 'ಪ್ರತಿಬಿಂಬ' ನೃತ್ಯ ರೂಪಕ ನಡೆಸಿಕೊಟ್ಟು ಪ್ರೇಕ್ಷಕರ ಮನಗೆದ್ದರು. ಈ ವೇಳೆ ಗಾನಭಾರತೀ ಸಂಸ್ಥೆಯ ಹಿರಿಯ ಪೋಷಕರಾದ ಡಾ.ಸಿ.ಜಿ.ನರಸಿಂಹನ್, ಅಧ್ಯಕ್ಷ ಎಚ್.ಆರ್.ಸುದರ್ಶನ್, ಕಾರ್ಯದರ್ಶಿ ರವಿಶಂಕರ್, ಡಾ.ಟಿ.ಎನ್.ನಾಗರತ್ನ ಸೇರಿದಂತೆ ಇತರರಿದ್ದರು.





ಪ್ರೊ.ಜಿ.ಟಿ. ನಾರಾಯಣರಾಯರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ನುಡಿನಮನ ಸಲ್ಲಿಸಿದರು. ವಿದುಷಿ ಪ್ರತಿಭಾ ರಾಮಸ್ವಾಮಿ ಮತ್ತು ವಿದುಷಿ ಜನನಿ ಮುರಳಿ ಅವರಿಂದ ವರಕವಿ ದ.ರಾ.ಬೇಂದ್ರೆ ರಚಿತ ಕವನಗಳ ಆಧಾರಿತ 'ಪ್ರತಿಬಿಂಬ' ವಿಶೇಷ ನೃತ್ಯ ಕಾರ್ಯಕ್ರಮ ಜರುಗಿತು (ಬಲಚಿತ್ರ)

ಸ್ನೇಹಿತನ ಮಾತು ನಂಬಿ 20.31 ಲಕ್ಷ ರೂ. ಕಳೆದುಕೊಂಡ ರಿಯಲ್ ಎಸ್ಟೇಟ್ ಉದ್ಯಮಿ

ಮೈಸೂರು,ಜೂ.7(ಜಿಎ)–ಲಾಭಾಂಶದ ಆಸೆಯಿಂದ ಸ್ನೇಹಿತನ ಮಾತು ನಂಬಿ ರಿಯಲ್ ಎಸ್ಟೇಟ್ ಉದ್ಯಮಿ 20.31 ಲಕ್ಷರೂ ಕಳೆದುಕೊಂಡಿರುವ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2025ರಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗೆ ಕಾರ್ ಬ್ರೋಕರ್ ಒಬ್ಬ ಪರಿಚಯವಾಗಿ ಸ್ನೇಹಿತನಾಗಿದ್ದಾನೆ. ನಂತರ ಉದ್ಯಮಿಗೆ ಸಾಲ ಇರುವ ವಿಚಾರ ತಿಳಿದು ಕೊಂಡಿರುವ ಸ್ನೇಹಿತ ಇದನ್ನು ಸದುಪಯೋಗಪಡಿಸಿಕೊಂಡು ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಹೂಡಿಕೆ ಮಾಡಿದರೆ, ನಿನಗೆ ಮೂರರಷ್ಟು ಮಾಡಿ ಕೊಡುತ್ತೇನೆಂದು ನಂಬಿಸಿದ್ದಾನೆ. ಹಣದ ಅವಶ್ಯಕತೆ ಇರುವುದರಿಂದ ಟ್ರೇಡಿಂ ಗ್‌ಗೆ ಉದ್ಯಮಿ ಒಪ್ಪಿ ಕೊಂಡಿದ್ದಾನೆ.

ಮೊದಲು ಆರಂಭಿಕವಾಗಿ ಜ.1ರಂದು 11 ಸಾವಿರ ರೂ. ಸ್ನೇಹಿತ ನೀಡಿದ ಬ್ಯಾಂಕ್ ಖಾತೆಗೆ ಹಣವರ್ಗಾವಣೆ ಮಾಡುತ್ತಾನೆ. ಯಾವ ಸಂದರ್ಭದಲ್ಲಿ ಲಾಭಾಂಶ ಬರುತ್ತದೆ ಎಂದು ಉದ್ಯಮಿ ಪ್ರಶ್ನಿಸಿದ್ದಾಗ ನೀನು ಹಣ ಹಾಕುತ್ತ ಬಂದರೆ ಲಕ್ಷ ಗಟ್ಟಲೆ ಲಾಭಾಂಶ ನೀಡುತ್ತೇನೆ ಎಂದು ತಿಳಿಸಿದ್ದಾನೆ. ಮತ್ತೊಮ್ಮೆ ಆತನ ಮಾತು ನಂಬಿ ಮಾ.31ರವರೆಗೆ 20,31 ಲಕ್ಷ ರೂ.ವನ್ನು ವರ್ಗಾವಣೆ ಮಾಡಿದ್ದಾನೆ.


ಯಾವುದೇ ಲಾಭಾಂಶ ಬಾರದ ಹಿನ್ನೆಲೆಯಲ್ಲಿ ಮೇ.5ರಂದು ಉದ್ಯಮಿ ಸ್ನೇಹಿತನಿಗೆ ಕರೆ ಮಾಡಿ ಲಾಭಾಂಶ ಕೇಳಿದಾಗ ಆತ ಯಾವ ಲಾಭಾಂಶವನ್ನು ನೀಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾನೆ. ಉದ್ಯಮಿ ತನಗೆ ಮೋಸವಾಗಿರುವುದನ್ನು ಅರಿತು 1930ಗೆ ಕರೆ ಮಾಡಿ ದೂರು ಸಲ್ಲಿಸಿದ್ದಾರೆ.

ಹಿರಿಯ ಕಾಂಗ್ರೆಸ್ ಮುಖಂಡ ಗಣೇಶ್ ನಿಧನ



ಮೈಸೂರು,ಜೂ.7–ಮೈಸೂರಿನ ಹಿರಿಯ ಕಾಂಗ್ರೆಸ್ ಮುಖಂಡ, ಕೆ.ಆರ್.ಕ್ಷೇತ್ರದ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು, ಚಿಕ್ಕ ಆಂಜನೇಯಸ್ವಾಮಿ ದೇವಸ್ಥಾನದ ಉಪಾಧ್ಯಕ್ಷರಾದ ಗಣೇಶ್ ಅವರು ಭಾನುವಾರ ನಿಧನರಾದರು. ಮೃತರು ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ಪಾದದ ಬಳಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಮುಖಂಡ ಅಪ್ಪುಗೌಡ



ಮೈಸೂರಿನ ಕುರುಬಾರಹಳ್ಳಿಯ ಯಜಮಾನರು, ಮಾಜಿ ಸಿಎಂ ಸಿದ್ದರಾಮಯ್ಯನವರ ಆಪ್ತರಾದ ಕಾಂಗ್ರೆಸ್ ಮುಖಂಡ ಅಪ್ಪುಗೌಡ (71) ಭಾನುವಾರ ನಿಧನರಾದರು. ಮೃತರು ಪತ್ನಿ ಜಯಮ್ಮ, ನಾಲ್ವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಸಂಜೆ ಕುರುಬಾರಹಳ್ಳಿ ಗ್ರಾಮದ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಸಂತಾಪ : ಅಪ್ಪುಗೌಡರ ನಿಧನಕ್ಕೆ ಮಾಜಿ ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಯತೀಂದ್ರ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಮರೀಗೌಡ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮುಖಂಡ ಬಿ.ಎಂ.ರಾಮು, ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್, ನಗರಾಧ್ಯಕ್ಷ ಆರ್.ಮೂರ್ತಿ, ಸಿಟಿ ಕೋಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕುರುಬಾರಹಳ್ಳಿ ಪ್ರಕಾಶ್ ಸಂತಾಪ ಸೂಚಿಸಿದ್ದಾರೆ.

ಶತಾಯುಷಿ ಚೆನ್ನನಾಯಕ



ನಂಜನಗೂಡು ತಾಲೂಕಿನ ತಾಯೂರು ಗ್ರಾಮದ ನಿವಾಸಿ, ಆಕಾಶವಾಣಿ ಕಲಾವಿದ ಚೆನ್ನನಾಯಕ (100) ಭಾನುವಾರ ಸಂಜೆ ನಿಧನರಾದರು.ಮೃತರು ಓರ್ವ ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.06.2026 ಸೋಮವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪೂರ್ವಭಾದ್ರ ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಸೂತ್ರ ಆಯುರ್ಧಾಮ:** ಮೊಣಕಾಲು ನೋವಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಜೆಎಲ್‌ಬಿ ರಸ್ತೆ, ಚಾಮುಂಡಿಪುರಂ, ಸಂಜೆ 4 ರಿಂದ.

■ **ಧನ್ಯ ಸ್ಕೂಲ್ ಆಫ್ ಯೋಗ, ಮುದ್ರಾ ಪ್ರಾಣಾಯಾಮ ರಿಸರ್ಚ್ ಸೆಂಟರ್,ಮೈಸೂರು:** ಮುದ್ರಾಪ್ರಾಣಾಯಾಮ ಶಿಬಿರ, ಮಧುಮೇಹ, ರಕ್ತದೊತ್ತಡ, ಬೊಜ್ಜು, ಅಸ್ತಮಾ, ಅಲರ್ಜಿ, ಬೆನ್ನುನೋವು, ಸೊಂಟನೋವು, ಮಂಡಿನೋವು. ಅಸಿಡಿಟಿ, ಅಲ್ಸರ್, ಮಲಬದ್ಧತೆ, ಥೈರಾಯಿಡ್, ಸ್ತ್ರೀಯರ ಮಾಸಿಕ ಸಮಸ್ಯೆಗಳು, ಬಂಜೆತನ, ನಿದ್ರಾಹೀನತೆ, ಖಿನ್ನತೆ, ಕೋಪ, ಭಯ ಹಾಗೂ ಇನ್ನಿತರ ಮನೋದೈಹಿಕ ಸಮಸ್ಯೆಗಳಿಗೆ ಮುದ್ರಾರತ್ನ ಬಿ.ಧನ್ಯಕುಮಾರ್ ಗುರೂಜಿ ಅವರ ನೇತೃತ್ವದಲ್ಲಿ ಚಿಕಿತ್ಸಾ ಶಿಬಿರ, ಸ್ಥಳ: ಮಹಿಳಾ ಸಮಾಜ, ಜೆಎಲ್‌ಬಿ ರಸ್ತೆ, ಸಂಜೆ 5.30 ರಿಂದ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗೆ 9.30ರಿಂದ

■ **ದ ಆಕ್ಮೆ ಸ್ಕೂಲ್:** ವಿಶ್ವ ಪರಿಸರ ದಿನಾಚರಣೆ–2026, ಅಧ್ಯಕ್ಷತೆ: ವಿಜ್ಞಾನಿ ಶ್ರೀ ಯೋಗೇಂದ್ರ, ಉಪಸ್ಥಿತಿ: ಶಾಲೆಯ ಛೇರ್ಮನ್ ಡಾ.ಸಿ.ಶರತ್ ಕುಮಾರ್, ಕಾರ್ಯದರ್ಶಿ ಅರುಣ್ ಸಿಂಗ್, ಖಜಾಂಚಿ ಸುಭಾಷಿನಿ, ಸ್ಥಳ: ಆಕ್ಮೆ ಶಾಲೆ ನಿವೇದಿತಾ ನಗರ, ಮೈಸೂರು.

■ **ಭಾರತೀಯ ರಿಯಲ್ ಎಸ್ಟೇಟ್ ಡೆವಲಪರ್‌ಗಳ ಒಕ್ಕೂಟ (ಕ್ರೆಡೈ), ಮೈಸೂರು ಕೇಂದ್ರ, ಭಾರತೀಯ ಬಿಲ್ಡರ್‌ಗಳ ಸಂಘ (ಬಿಎಐ), ಮೈಸೂರು ಕೇಂದ್ರ ಮತ್ತು ಆದಾಯ ತೆರಿಗೆ ಇಲಾಖೆ:** ಹೊಸ ಆದಾಯ ತೆರಿಗೆ ಕಾಯ್ದೆ, 2025ರ ಅಡಿಯಲ್ಲಿ ರಿಯಲ್ ಎಸ್ಟೇಟ್ ಬಿಲ್ಡರ್‌ಗಳು ಮತ್ತು ಡೆವಲಪರ್‌ಗಳಿಗೆ ಸಂಬಂಧಿಸಿದ ಮೌಲ್ಯಮಾಪನ ಸಮಸ್ಯೆಗಳ' ಕುರಿತು ಸಂವಾದ ಅಧಿವೇಶನ, ಮುಖ್ಯ ಅತಿಥಿಗಳು: ಮೈಸೂರಿನ ಹೆಚ್ಚುವರಿ ಆದಾಯ ತೆರಿಗೆ ಆಯುಕ್ತರಾದ ಎಸ್. ವೆಂಕಟೇಶನ್, ಸಹಾಯಕ ಆದಾಯ ತೆರಿಗೆ ಆಯುಕ್ತರಾದ ಕಲ್ಪಲತಾ ರಾಜನ್, ಉಪಸ್ಥಿತಿ: ಕ್ರೆಡೈ ಅಧ್ಯಕ್ಷರಾದ ಹರೀಶ್ ಶೆಣೈ, ಕ್ರೆಡೈ ಕಾರ್ಯದರ್ಶಿ ನಾಗರಾಜ್ ಬೈರಿ, ಮೈಸೂರಿನ ಭಾರತೀಯ ಬಿಲ್ಡರ್‌ಗಳ ಸಂಘದ ಛೇರ್ಮನ್ ಪ್ರಭಾಕರ್ ರಾವ್, ಸ್ಥಳ: ಮೈಸೂರು ಬಿಲ್ಡರ್ಸ್ ಚಾರಿಟೇಬಲ್ (ಎಂಬಿಸಿಟಿ) ಸಭಾಂಗಣ, ವಿಶ್ವೇಶ್ವರನಗರ, ಸಂಜೆ 5 ರಿಂದ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಸಂಸ್ಥಾನ, ಉತ್ತರಾದಿ ಮಠ, ಮೈಸೂರು, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯಸಂತುಷ್ಟ ತೀರ್ಥರ ದಿವ್ಯ ಸನ್ನಿಧಾನ, ಪಂ. ಶ್ರೀ ವ್ಯಾಸತೀರ್ಥಾಚಾರ್ಯ ಅವರಿಂದ ಭರತನಾಟ್ಯ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ.5.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ, ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 'ಭಾಷಾ ಭಾರತಿ' ವಿಶೇಷ ಹಿಂದಿ ಬಾನುಲಿ ಪಾಠ ಸರಣಿ ಕುರಿತು ಸಂವಾದ. ಭಾಗವಹಿಸುತ್ತಾರೆ–ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರಾದ ಪ್ರೊ.ಬಸವರಾಜ ಕೊಡಗುಂಟಿ, ಸಹಾಯಕ ನಿರ್ದೇಶಕರಾದ ಡಾ.ಪಂಕಜ್ ದ್ವಿವೇದಿ. ನಡೆಸಿಕೊಡುತ್ತಾರೆ–ಹಿರಿಯ ಸಂಪನ್ಮೂಲ ಅಧಿಕಾರಿ ವಿಜಯಲಕ್ಷ್ಮಿ ಎಫ್.ಪಾಟೀಲ್, 7.45 ಚಿತ್ರಗೀತೆಗಳು, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 9.05–ಪ್ರಾಯೋಜಿತ ಕಾರ್ಯಕ್ರಮ–ಆಕಾಶವಾಣಿಗೆ 90 ಸಂದರ್ಭದಲ್ಲಿ ಬೆಂಗಳೂರು ಆಕಾಶವಾಣಿ ಕೇಂದ್ರ ಮೇ 30ರಂದು ಆಹ್ವಾನಿತ ಶ್ರೋತೃಗಳ ಸಮ್ಮುಖದಲ್ಲಿ ಬೆಂಗಳೂರು ಗಾಯನ ಸಮಾಜದ ಸಹಯೋಗದೊಂದಿಗೆ ಏರ್ಪಡಿಸಿದ್ದ 'ಸ್ವರಸ್ಮೃತಿ' ಸಂಗೀತ ಸಂಚಯ ಕಾರ್ಯಕ್ರಮದ ಧ್ವನಿ ಮುದ್ರಣದ ಪ್ರಸಾರ. ಪ್ರಾಯೋಜಕರು–ನಾರಾಯಣ ನೇತ್ರಾಲಯ, ಬೆಂಗಳೂರು. ವಿದ್ವಾನ್ ರಮಣ ಬಾಲಚಂದ್ರನ್ ಅವರ ವೀಣಾವಾದನ, ಅರ್ಜುನ್‌ಕುಮಾರ್ ಅವರಿಂದ ಮೃದಂಗ ಜಿ.ಗುರುಪ್ರಸನ್ನ ಅವರಿಂದ ಖಂಜಿರ, 10.05 ಕರ್ನಾಟಕ ಶಾಸ್ತ್ರೀಯ ಸಂಗೀತ–ಪುತ್ತೂರು ಗಣೇಶ್ ಅವರ ಸ್ಯಾಕ್ಸೊಫೋನ್ ವಾದನದಲ್ಲಿ ತ್ಯಾಗರಾಜರ ಕೃತಿಗಳು, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ. ಪ್ರಸ್ತುತಿ–ದಿಗ್ವಿಜಯ್.ಬಿ, ಮಧ್ಯಾಹ್ನ 12.05 ವನಿತಾ ವಿಹಾರ–ಲೇಖಕಿ ಹಾಗೂ ಅನುವಾದಕಿ ಸಪ್ನಾ ಕಟ್ಟಿ ಅವ ರೊಂದಿಗೆ ಸಂದರ್ಶನ. ಸಂದರ್ಶಕರು: ಮಂಜುಳಾ ಪುರಾಣಿಕ್, 12.35 ದೇವರನಾಮ–ವಿ.ಸಮೀಕ್ಷಾ, 12.45 ನಮ್ಮ ಆರೋಗ್ಯ–ಬ್ರೈನ್ ಟ್ಯೂಮರ್ ಅಂದರೆ ಮಿದುಳಿನ ಗೆಡ್ಡೆ–ಲಕ್ಷಣಗಳು, ಕಾರಣಗಳು ಹಾಗೂ ಚಿಕಿತ್ಸೆ ಈ ಕುರಿತು ನರರೋಗ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ರಾಜೇಶ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ಸುಶ್ಮಿತಾ.ಎಲ್.ಎನ್, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಮೋಹನ್ ಅವರ ಕ್ಲ್ಯಾರಿಯೋನೆಟ್ ವಾದನದಲ್ಲಿ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳು, 4.00 ಮಹಿಳಾರಂಗ–ಡಾಕ್ಟರ್ ಸಮಯ–ವಿಶ್ವ ರಕ್ತದಾನಿಗಳ ದಿನದ ಅಂಗವಾಗಿ ಮಹಿಳೆಯರಲ್ಲಿ ರಕ್ತಹೀನತೆ ಕುರಿತು ಹೆಮಟಾಲಜಿಸ್ಟ್ ಡಾ.ಶ್ರೀರಕ್ಷಾ ಗಾಣಿಗಾ ಅವರೊಂದಿಗೆ ಸಂದರ್ಶನ. ಪ್ರಸ್ತುತಿ–ಕೀರ್ತನಾ.ವಿ, 4.30 ಹಿಂದಿ ಚಿತ್ರಗೀತೆಗಳು, 4.45 'ಭಾಷಾ ಭಾರತಿ'–ವಿಶೇಷ ಹಿಂದಿ ಬಾನುಲಿ ಪಾಠ ಸರಣಿ ಕುರಿತು ಸಂವಾದ. ಭಾಗವಹಿಸುತ್ತಾರೆ–ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕರಾದ ಪ್ರೊ.ಬಸವರಾಜ ಕೊಡಗುಂಟಿ, ಸಹಾಯಕ ನಿರ್ದೇಶಕರಾದ ಡಾ.ಪಂಕಜ್ ದ್ವಿವೇದಿ. ನಡೆಸಿಕೊಡುತ್ತಾರೆ–ಹಿರಿಯ ಸಂಪನ್ಮೂಲ ಅಧಿಕಾರಿ ವಿಜಯಲಕ್ಷ್ಮಿ ಎಫ್.ಪಾಟೀಲ್, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಜಿಲ್ಲಾ ವಾರ್ತಾ ಪತ್ರ, 6.51 ಕೃಷಿರಂಗ: ಕೃಷಿ ದೀವಿಗೆ–ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಭತ್ತದ ತಳಿಗಳು ಹಾಗೂ ಸಸಿಮಡಿ ಸಿದ್ಧತೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ, ವಲಯ ಕೃಷಿ ಸಂಶೋಧನಾ ಕೇಂದ್ರದ ಸಹ ಪ್ರಾಧ್ಯಾಪಕರಾದ ಡಾ.ಸಿ.ಎ.ದೀಪಕ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಭಾರತದ ಪ್ರಮುಖ 4 ಮ್ಯಾರಥಾನ್‌ಗಳಲ್ಲಿ ಭಾಗವಹಿಸಿರುವ ಮೈಸೂರು ಜಿಲ್ಲೆ ನಂಜನಗೂಡಿನ ಹರ್ಷಿತಾ.ಎನ್.ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಕರ್ನಾಟಕ ಶಾಸ್ತ್ರೀಯ ಸಂಗೀತ–ವಿ.ವಿಜಯಲಕ್ಷ್ಮೀ ಅವರ ಹಾಡುಗಾರಿಕೆ, 10.00 'ಶ್ರೀ ವಿದ್ಯಾವಿಶಾರದ' ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಕೇಂದ್ರ ಸರ್ಕಾರ 12 ವರ್ಷಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಕೃಷಿಕರ ಸಶಕ್ತೀರಣ ವಿಷಯದ ಕುರಿತು ವಿಶೇಷ ದ್ವಿಭಾಷಾ ಕಾರ್ಯಕ್ರಮ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಅಂಜನಾನಂದನೋತ್ಸವ, ಡಾ.ಎನ್.ಕೆ.ರಾಮಶೇಷನ್ ಅವರಿಂದ ಶ್ರೀ ಸುಂದರಕಾಂಡ ಪ್ರವಚನ, ಸ್ಥಳ: ಶ್ರೀರಾಮ ಮಂದಿರ, ಶಿವರಾಂಪೇಟೆ, ಸಂಜೆ 6.30ರಿಂದ.

MYSORE travel mart 26
05 – 07th June, 2026

SKÅL INTERNATIONAL
Connecting Tourism Globally
MYSURU

ಮೈಸೂರು ಟ್ರಾವಲ್ ಮಾರ್ಟ್ 2026
ಟೂರಿಸಂ ಎಕ್ಸಲೆನ್ಸ್ ಅವಾರ್ಡ್ಸ್



Sri Jagannath Shenoy
Lifetime Achievement Award



Sri P V Giri
Hospitality Visionary Award



Radisson Blu Plaza
Luxury Hotel of Distinction



Southern Star
Business & MICE Hotel



Silent Shores Resort & Spa
Best Resort & Leisure Destination



Kapila Riverfront
Excellence in Homestay



Sri Guru Residency
Best Budget Hotel



Hotel Original Vinayaka Mylari
Best Restaurant



Indus Valley Ayurvedic Centre
Excellence in Wellness



Bharath International Travels
Outstanding Travel Agency



Mysore Palace
Destination Leadership Award
(Govt. Institution)



Sapa Bakery
Most Popular Cafe



Sri Raghupathi Bhat
Artisan of Distinction



Mr. N Suresh
Distinguished Guide Award



Mr. Bharat Shetty
Yoga Travel Experience



Mr. Mahesh Babu
Long-term Service Excellence Chauffeur



Mr. M L Shivaprakash Sandesh The Prince
Service Excellence Award



Mr. Sachin Bhandary
Outstanding Travel Influencer

Awards Partner
THE QUORUM HOTELS & RESORTS

ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : ಅಮ್ಮ ತಾಯಿ ನಾನು ಮೂಗ ಏನಾದ್ರು ಭಿಕ್ಷೆ ನೀಡಿ.
ಮಹಿಳೆ : ಮುಂದೆ ಹೋಗಪ್ಪ ನಾನು ಕಿವುಡಿ ನನಗೇನು ಕೇಳಲ್ಲ.

ಮೈಸೂರು ಮಿತ್ರ

ಸೋಮವಾರ, ಜೂನ್ 8, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತ ವಾಹಿನಿ..........

ಕಷ್ಟಗಳನ್ನು ಭೇಟಿಯಾದಾಗ ತಾಳ್ಮೆಗೆ ದಾರಿ ಸಿಗುತ್ತದೆ. ಅವಮಾನಗಳನ್ನು ಭೇಟಿಯಾದಾಗ ನಿರ್ಣಯಗಳಿಗೆ ದಾರಿ ಸಿಗುತ್ತದೆ. ಹಸಿವನ್ನು ಭೇಟಿಯಾದಾಗ ಅನ್ನದ ಬೆಲೆ ಗೊತ್ತಾಗುತ್ತದೆ. ಸೋಲನ್ನು ಭೇಟಿಯಾದಾಗ ಗೆಲುವಿನ ದಾರಿ ತಿಳಿಯುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಅಡುಗೆ ಮಾಡಿದವಳಿಗಿಂತ, ಬಡಿಸಿದವಳೇ ಮೇಲು.

ನಿಮ್ಮ ಪತ್ರಗಳು

ಅವೈಜ್ಞಾನಿಕ ಕಾಮಗಾರಿಯಿಂದ ದಿಗ್ಬಂಧನ



ಮಾನ್ಯರೆ,

ಮೈಸೂರಿನ ಹೆಬ್ಬಾಳಿನ ಸೂರ್ಯಬೇಕರಿ ವೃತ್ತದ ಬಳಿಯಲ್ಲಿರುವ ಎರಡನೇ ಅಡ್ಡರಸ್ತೆಯಲ್ಲಿ ಅವೈಜ್ಞಾನಿಕವಾಗಿ ಯು.ಜಿ.ಡಿ ಪೈಪ್‌ಲೈನ್ ಕಾಮಗಾರಿ ಭರದಿಂದ ಸಾಗಿದ್ದು, ಜನರ ಅನಾನುಕೂಲತೆಗೆ ಎಳ್ಳಷ್ಟು ಸ್ಪಂದಿಸದೆ, ಅಸಡ್ಡೆತನ ಮೆರೆಯುತ್ತಿದ್ದಾರೆ. ಒಂದು ಕಡೆ ಪೈಪ್‌ಲೈನ್‌ಗಾಗಿ ಆರು-ಏಳು ಅಡಿ ಆಳವಾದ ಗುಂಡಿ ಅಗೆದು ಅದರ ಮಣ್ಣನ್ನು ಬೆಟ್ಟದಂತೆ ಗುಡ್ಡೆ ಮಾಡಿ, ಓಡಾಡಲೂ ಹರಸಾಹಸ ಪಡಬೇಕಾಗುವ ದುಸ್ಥಿತಿ ಎದುರಾಗಿದೆ. ಮತ್ತೊಂದೆಡೆ ಕಾಂಕ್ರೀಟ್ ಸ್ಲ್ಯಾಬ್ ಹಾಕುತ್ತೇವೆಂಬ ನೆಪವೊಡ್ಡಿ ಮನೆಗಳ ಮುಂದಿದ್ದ ಚಪ್ಪಡಿ ಕಲ್ಲುಗಳನ್ನು ಕಿತ್ತೊಗೆದಿದ್ದಾರೆ. ಯಾವ ಕಡೆಗೂ ಹೋಗಲಾಗದೇ ತಮ್ಮ ಮನೆ ಮುಂದಿನ ತೆರೆದ ಗುಂಡಿಗೆ ಹೆದರಿ ಮನೆಯಲ್ಲೇ 'ದಿಗ್ಬಂಧನ'ದಲ್ಲಿರಬೇಕಾದ ಸಂದರ್ಭ ಬಂದೊದಗಿದೆ. ಈ ಅವೈಜ್ಞಾನಿಕ ಕೆಲಸಕ್ಕೆ ನಿವಾಸಿಗಳು ಪಾಲಿಕೆ ಅಧಿಕಾರಿಗಳಿಗೆ ಹಿಡಿಶಾಪ ಹಾಕಿ, ಮೂಕ ಪ್ರೇಕ್ಷಕರಂತೆ ಯಾತನೆ ಅನುಭವಿಸುತ್ತಿದ್ದಾರೆ. ಕಣ್ಮುಚ್ಚಿ ಕುಳಿತಿರುವ ಪಾಲಿಕೆ ಅಧಿಕಾರಿಗಳಿಗೆ ನಮ್ಮ ಧಿಕ್ಕಾರ! –ನೊಂದ ನಿವಾಸಿಗಳು, ಹೆಬ್ಬಾಳು, ಮೈಸೂರು.

ರಾಜಮನೆತನದ ಸೇವೆ ಸ್ಮರಣೆಯೊಂದಿಗೆ ನಗರ ಸಂರಕ್ಷಣೆ ಎಲ್ಲರ ಹೊಣೆ

ಮಾನ್ಯರೆ,

ಸಾಂಸ್ಕೃತಿಕ ನಗರ ಮೈಸೂರಿನ ಅಭಿವೃದ್ಧಿಗಾಗಿ ಹಿಂದೆ ಮೈಸೂರಿನ ರಾಜ ಮನೆತನದ ಅಪಾರ ಕೊಡುಗೆಯನ್ನು ಸದಾ ಸ್ಮರಿಸಬೇಕಾಗಿದೆ. ಸ್ವಚ್ಛತೆಯೊಂದಿಗೆ ಬೃಹತ್ ಆಸ್ಪತ್ರೆ ಕಟ್ಟಡಗಳು, ವಿಶಾಲ ರಸ್ತೆಗಳು, ಶಾಲಾ-ಕಾಲೇಜುಗಳು, ವಿಶ್ವವಿದ್ಯಾನಿಲಯ ಹಸಿರೀಕರಣದ ಜೊತೆಗೆ ನಮ್ಮ ಮೈಸೂರಿನ ಪರಿಸರ ಸಂರಕ್ಷಣೆ, ಸ್ವಚ್ಛತೆಗೆ ಕೊಡುಗೆ ಅಪಾರವಾಗಿದೆ ಎಂಬುದನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ.

ಆದರೆ, ಇಂದು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿತನ, ನಿರ್ಲಕ್ಷ್ಯತನದಿಂದ ರಸ್ತೆಗಳು, ಪಾದಚಾರಿ ಮಾರ್ಗಗಳು, ವ್ಯಾಪಾರ-ವಹಿವಾಟು ತಾಣಗಳಾಗುತ್ತಿದ್ದರೆ, ಶಾಲಾ-ಕಾಲೇಜುಗಳು, ಆಸ್ಪತ್ರೆಗಳು, ಹಾಗೂ ಉದ್ಯಾನವನಗಳ ಸುತ್ತ ಮುತ್ತಲು ಕೆಲವು ಬೀಡಿ ಸಿಗರೇಟು ಅಂಗಡಿಗಳು ತಲೆ ಎತ್ತುತ್ತಿವೆ. ಮೈಸೂರು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ, ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿದ್ದು, ಜನಸಂದಣಿಯು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆ ಸಾರ್ವಜನಿಕರು ಮತ್ತು ನಗರಪಾಲಿಕೆ ಆದ್ಯ ಕರ್ತವ್ಯ. ರಿಂಗ್‌ರೋಡ್ ಸೇರಿದಂತೆ ಅನೇಕ ರಸ್ತೆಯ ಸುತ್ತ ಮುತ್ತಲಿನ ಖಾಲಿ ಇರುವ ಜಾಗದಲ್ಲಿ ಕಸ ಬಿಸಾಡುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಪಾಲಿಕೆ ಅಧಿಕಾರಿಗಳು ಸ್ವಚ್ಛತಾ ಅಭಿಯಾನದ ಜೊತೆಗೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಎಂಡಿಎನಲ್ಲಿ ಗೋಲ್‌ಮಾಲ್!

ಮಾನ್ಯರೆ,

ಮೊನ್ನೆ ಮಧ್ಯರಾತ್ರಿ 12 ಗಂಟೆಯ ಸುಮಾರಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಮಧ್ಯವರ್ತಿಗಳು ಮಧ್ಯರಾತ್ರಿಯ ಅಭಿವೃದ್ಧಿ ಕಾರ್ಯ ಮಾಡುತ್ತಿರುವುದು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಪತ್ರಿಕೆ ವರದಿಗಾರರು, ಛಾಯಾಗ್ರಾಹಕರು, ತಮ್ಮ ಪ್ರಾಣದ ಹಂಗನ್ನು ತೊರೆದು ಸರಿರಾತ್ರಿಯಲ್ಲಿ ಪ್ರಾಧಿಕಾರಕ್ಕೆ ಹೋಗಿ ವರದಿ ಮಾಡಿರುವುದು ಅವರ ಧೈರ್ಯಮೆಚ್ಚಲೇಬೇಕು. ಪ್ರಾಧಿಕಾರದ ಕೆಲವು ಅಧಿಕಾರಿಗಳು ಹಗಲು ಹೊತ್ತಿನಲ್ಲೇ ಕಛೇರಿಯಲ್ಲಿ ಇರುವುದಿಲ್ಲ. ಇನ್ನೂ ರಾತ್ರಿ ವೇಳೆ ಅದು ಮಧ್ಯ ರಾತ್ರಿಯಲ್ಲಿ ಕೆಲಸ ಮಾಡಲು ಮುಂದಾಗಿರುವುದು ಸಾರ್ವಜನಿಕರಲ್ಲಿ ತೀವ್ರ ಅನುಮಾನ ಮೂಡಿಸುತ್ತಿದೆ. ಪ್ರಾಧಿಕಾರದ ಹಾಲಿ ಆಯುಕ್ತರನ್ನು ದಕ್ಷ ಅಧಿಕಾರಿ ಎಂದೇ ಸಾರ್ವಜನಿಕರು ಹೇಳುತ್ತಿದ್ದರು. ಈಗ ಇವರ ಮೇಲೂ ಸಾರ್ವಜನಿಕರಿಗೆ ಅನುಮಾನ ಮೂಡುತ್ತಿದೆ. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದರೆ, ಪ್ರಾಧಿಕಾರದಲ್ಲಿ ಏನೋ ಗೋಲ್‌ಮಾಲ್ ನಡೆಯುತ್ತಿದೆ ಎಂದು ಸಾರ್ವಜನಿಕರೇ ಮಾತಾಡಿಕೊಳ್ಳುವಂತಾಗಿದೆ. ಏನೇ ಆಗಲಿ ಸಾರ್ವಜನಿಕರು ತಮ್ಮ ಆಸ್ತಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ರಾಜ್ಯ ಸರ್ಕಾರದಿಂದ ಆಶಾದಾಯಕ ನಿರ್ಧಾರ

ಮಾನ್ಯರೆ,

ಸರ್ಕಾರದ ಹೊಸ ನಿರ್ಧಾರಗಳು ಆಶಾದಾಯಕವಾಗಿವೆ. ಹೆಣ್ಣುಮಕ್ಕಳೊಂದಿಗೆ ಶಾಲಾ-ಕಾಲೇಜುಗಳ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ಸೌಲಭ್ಯ ವಿಸ್ತರಿಸಿರುವುದು ಶಿಕ್ಷಣಕ್ಕೆ ಉತ್ತೇಜಿಸುವುದರ ಜೊತೆಗೆ ಶಿಕ್ಷಣದ ವೆಚ್ಚ ತಗ್ಗಿಸುವ ಅತ್ಯುತ್ತಮ ನಿರ್ಧಾರವಾಗಿದೆ. ಹಾಗೆಯೇ ಗ್ರಾಮೀಣ ಭಾಗದ ಯುವಜನರಿಗಾಗಿ 10 ಸಾವಿರ 'ಭಾರತ ಜೋಡೋ' ಯುವಕ ಸಂಘಗಳ ರಚನೆ ಹಾಗೂ ಪ್ರತಿ ಸಂಘಕ್ಕೆ 10 ಲಕ್ಷ ರೂ. ಅನುದಾನ ನೀಡುವ ಆಲೋಚನೆ ಯುವಶಕ್ತಿಯ ನಾಯಕತ್ವ ಗುಣವನ್ನು ಖಂಡಿತವಾಗಿಯೂ ಪ್ರೋತ್ಸಾಹಿಸುತ್ತದೆ. ಜೊತೆಗೆ, ಬೆಂಗಳೂರಿನ ಬಿ ಖಾತೆಯಿಂದ ಎ ಖಾತೆ ಪರಿವರ್ತನಾ ಯೋಜನೆ ಮತ್ತು ಗ್ರಾಮೀಣ ನಿವೇಶನಗಳ ನಿಯಮಿತಗೊಳಿಸುವಿಕೆ ಜನಸಾಮಾನ್ಯರ ಆಸ್ತಿ ಹಕ್ಕನ್ನು ಬಲಪಡಿಸುತ್ತದೆ.

ಆದರೆ, ಇಂತಹ ಬೃಹತ್ ಯೋಜನೆಗಳ ನೈತಿಕ ಯಶಸ್ಸು ಕೇವಲ ಘೋಷಣೆಗಳಲ್ಲಲ್ಲ ಭ್ರಷ್ಟಾಚಾರ ರಹಿತ ಮತ್ತು ಪಾರದರ್ಶಕ ಅನುಷ್ಠಾನದಲ್ಲಿದೆ. ಕೇವಲ ಉಚಿತ ಸೌಲಭ್ಯಗಳಿಂದಲೇ ಸರ್ವಾಂಗೀಣ ಪ್ರಗತಿ ಸಾಧ್ಯವಿಲ್ಲ. ಕೌಶಲ ತರಬೇತಿ ಮತ್ತು ನೈಜ ಖಾಸಗಿ ಉದ್ಯೋಗ ಸೃಷ್ಟಿ ಅತ್ಯಗತ್ಯ. ಸರ್ಕಾರವು ಆಡಳಿತಾತ್ಮಕ ವಿಳಂಬವನ್ನು ತಪ್ಪಿಸಿ ಗ್ರಾಮೀಣ ಮಟ್ಟದಲ್ಲಿ ಈ ಯೋಜನೆಗಳು ಅರ್ಹರಿಗೆ ತಲುಪುವಂತೆ ನೋಡಿಕೊಳ್ಳಬೇಕಿದೆ. ಸಾರ್ವಜನಿಕರ ತೆರಿಗೆ ಹಣದ ಪ್ರತಿ ರೂಪಾಯಿಯೂ ದುರುಪಯೋಗವಾಗದೆ ಜನಕಲ್ಯಾಣಕ್ಕೆ ಬಳಕೆಯಾದಾಗ ಮಾತ್ರ ಪ್ರಗತಿ ಸಾಧ್ಯ.

–ಡಾ.ವಿಜಯಕುಮಾರ್ ಹೆಚ್.ಕೆ., ಮೈಸೂರು



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ನಕ್ಕರೆ ಅದೇ ಸ್ವರ್ಗ...



ಮಾನವ ಜೀವನದಲ್ಲಿ 'ನಗು' ಪ್ರಕೃತಿಯೇ ನೀಡಿದ ಅಮೂಲ್ಯ ವರ. ಹಣ, ಅಧಿಕಾರ, ಆಸ್ತಿ-ಪಾಸ್ತಿ ಇವೆಲ್ಲವೂ ಜೀವನಕ್ಕೆ ಅಗತ್ಯವಾದರೂ, ಮನಸ್ಸಿಗೆ ನೆಮ್ಮದಿ ಮತ್ತು ಸಂತೋಷವನ್ನು ನೀಡುವುದು ನಗುವೇ. ನಗುವಿನಿಂದ ಮನಸ್ಸಿನ ಭಾರ ಕಡಿಮೆಯಾಗುತ್ತದೆ, ದುಃಖಗಳು ದೂರವಾಗುತ್ತವೆ ಮತ್ತು ಬದುಕಿನ ಬಗ್ಗೆ ಹೊಸ ಉತ್ಸಾಹ ಮೂಡುತ್ತದೆ. ಆದ್ದರಿಂದಲೇ 'ನಕ್ಕರೆ ಅದೇ ಸ್ವರ್ಗ' ಮಾತು ಜನಪ್ರಿಯವಾಗಿದೆ.

ಇಂದಿನ ಯಾಂತ್ರಿಕ ಮತ್ತು ಒತ್ತಡಭರಿತ ಜೀವನದಲ್ಲಿ ಜನರು ಸಂತೋಷವನ್ನು ಹೊರಗೆ ಹುಡುಕುತ್ತಾ ತಮ್ಮೊಳಗಿನ ನಗುವನ್ನೇ ಮರೆತಿದ್ದಾರೆ. ಆದರೆ ಒಂದು ಮುಗುಳ್ನಗೆ ಸ್ನೇಹವನ್ನು ಬೆಳೆಸಬಲ್ಲದು, ಸಂಬಂಧಗಳನ್ನು ಗಟ್ಟಿಗೊಳಿಸಬಲ್ಲದು ಹಾಗೂ ಹೃದಯಗಳ ನಡುವಿನ ಅಂತರವನ್ನು ಕಡಿಮೆ ಮಾಡಬಲ್ಲದು. ನಗು ಕೇವಲ ಮುಖದ ಅಲಂಕಾರವಲ್ಲ; ಅದು ಆರೋಗ್ಯದ ಕೀಲಿಕೈ, ಆತ್ಮವಿಶ್ವಾಸದ ಪ್ರತೀಕ ಮತ್ತು ಮಾನವೀಯತೆಯ ಅಭಿವ್ಯಕ್ತಿಯಾಗಿದೆ.

ನಗುವಿನ ಮೂಲಕ ಜೀವನದ ಕಷ್ಟಗಳನ್ನು ಸುಲಭವಾಗಿ ಎದುರಿಸಬಹುದು. ಸಂಕಷ್ಟಗಳ ಮಧ್ಯೆಯೂ ನಗುತ್ತಾ ಬದುಕುವ ವ್ಯಕ್ತಿಯ ಮನೋಬಲ ದೃಢವಾಗಿರುತ್ತದೆ. ನಗು ಸೋಂಕಿನಂತೆ ಒಬ್ಬರಿಂದ ಮತ್ತೊಬ್ಬರಿಗೆ ಹರಡಿ ಸುತ್ತಮುತ್ತಲಿನ ವಾತಾವರಣವನ್ನೇ ಸಂತೋಷಮಯವಾಗಿಸುತ್ತದೆ. ಆದ್ದರಿಂದ ನಗುವಿನ ಮಹತ್ವವನ್ನು ಅರಿತು, ನಿತ್ಯ ಸಂತೋಷದಿಂದ ನಗುತ್ತಾ ಬದುಕುವುದು ಜೀವನವನ್ನು ಸ್ವರ್ಗದಂತಾಗಿಸುತ್ತದೆ. 'ನಕ್ಕರೆ ಅದೇ ಸ್ವರ್ಗ' ವಿಷಯವು ನಗುವಿನ ಮಹತ್ವ, ಅದರ ಆರೋಗ್ಯಕರ ಪರಿಣಾಮಗಳು ಹಾಗೂ ಜೀವನವನ್ನು ಸುಂದರಗೊಳಿಸುವ ಶಕ್ತಿಯನ್ನು ತಿಳಿಸುವ ಮಹತ್ವದ ಸಂದೇಶವಾಗಿದೆ.

ನಗು ಎಂಬುದು ಮನುಷ್ಯನಿಗೆ ದೊರೆತ ವರ. ಸಂಬಂಧ ಗಟ್ಟಿಯಾಗಿ ಉಳಿಯಬೇಕೆಂದರೆ ನಗು ಅಗತ್ಯ. ನಕ್ಕಾಗ ಸಿಗುವ ತೃಪ್ತಿಯನ್ನು ಮತ್ಯಾವುದರಿಂದಲೂ ಅನುಭವಿಸಲು ಸಾಧ್ಯವಿಲ್ಲ. ಮನುಷ್ಯನ ಮುಖದಲ್ಲಿನ ಒಂದು ಸಣ್ಣ ಮಂದಹಾಸ ಎಂತಹ ಕಷ್ಟಗಳನ್ನು, ನೋವುಗಳನ್ನು ಮರೆಯಾಗಿಸಬಹುದು. ನಗುವು ಮನುಷ್ಯನ ಚೈತನ್ಯದ ಚಿಲುಮೆಯೂ ಹೌದು, ಪರಸ್ಪರ ಬಾಂಧವ್ಯವನ್ನು ಬೆಸೆಯುವ ಭಾವಕೊಂಡಿಯು ಹೌದು. ಇದನ್ನು ಗಮನಿಸಿಯೇ ಏನೋ ನಮ್ಮ ಕನ್ನಡ ಕವಿಗಳಾದ ಡಿವಿಜಿ ಮತ್ತು ಬೇಂದ್ರೆ ಅವರು ನಗುವಿನ ಕುರಿತಾಗಿ ಈ ಕವನಗಳನ್ನು ಬರೆದಿದ್ದಾರೆ.

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯದ ಧರ್ಮ
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ
ಮಿಗೆ ನೀನು ಬೇಡಿಕೊಳೊ ಮಂಕುತಿಮ್ಮ॥ –ಡಿವಿಜಿ.

ನಕ್ಕ ಸಾಯ್ರೋ,
ನಕ್ಕ ಸಾಯ್ರಿ,
ನಕ್ಕ ಸತ್ರ ನಕ್ಷತ್ರ ಅಕ್ಕೀರಿ –ದ.ರಾ.ಬೇಂದ್ರೆ

ನಗು ಮನುಷ್ಯನ ಬದುಕಿಗೆ ದಾರಿದೀಪವಾಗಬಲ್ಲ, ಬಾಳ ಬೆಳಗಬಲ್ಲ ದಿವ್ಯೌಷಧವಿದ್ದಂತೆ. ನಕ್ಕಾಗ ಬರಿ ಸ್ನಾಯುಗಳಿಗಷ್ಟೇ ವ್ಯಾಯಾಮ ವಾಗುವುದಲ್ಲದೇ ಮನಸ್ಸಿಗೂ ತೃಪ್ತಿ ದೊರೆಯುತ್ತದೆ. ಆದರೆ ನಮ್ಮ ನಗುವಿನಿಂದ ಮತ್ತೊಬ್ಬರಿಗೆ ತೊಂದರೆಯಾಗಬಾರದು, ಯಾರನ್ನೂ ನೋಯಿಸಬಾರದಷ್ಟೇ.

ನಗುವಿನ ವಿಧಗಳು

ನಗುವಿನಲ್ಲೂ ನಾನಾ ಬಗೆಯ ವಿಧಗಳನ್ನು ಗುರುತಿಸಬಹುದು.

ಕೃತಕ ನಗು: ನಗು ಬಾರದಿದ್ದರೂ ನಕ್ಕಂತೆ ನಟಿಸುವುದನ್ನು ಕೃತಕ ನಗುವೆಂದು ಕರೆಯಬಹುದು. ಇಂತಹ ನಗುವಿನ ಹಿಂದೆ ಯಾವುದೇ ಘನವಾದ ಉದ್ದೇಶವಿರುವುದಿಲ್ಲ. ಕೇವಲ ನಗು ಬಂದಂತೆ ತೋರಿಸಿಕೊಳ್ಳಬೇಕೆಂಬ ನಿಟ್ಟಿನಿಂದ ಬರುವ ನಗು ಇದಾಗಿದ್ದು ಇಂತಹ ನಗುವಿನಿಂದ ಯಾವುದೇ ಸಂಬಂಧಗಳು ಹೆಚ್ಚು ಕಾಲ ಉಳಿಯಲು ಸಾಧ್ಯವಾಗದು. ಕೃತಕ ನಗು ಬಹುಬೇಗ ಮರೆಯಾಗುವುದು. ಅದರಿಂದ ಯಾವುದೇ ಉಪಯೋಗ ಯಾರಿಗೂ ಆಗದು, ಜೊತೆಗೆ ಇಂತಹ ನಗುವನ್ನು ತಕ್ಷಣ ಪತ್ತೆ ಹಚ್ಚಲು ಸಾಧ್ಯವಿದೆ.

ಕುಹಕ ನಗು: ಮತ್ತೊಬ್ಬರನ್ನು ಆಡಿಕೊಂಡು, ವ್ಯಂಗ್ಯ ಮಾಡಿ ಅವರ ಮನಸ್ಸಿಗೆ ವಾಸಿಯಾಗಲಾರದ ನೋವನ್ನುಂಟು ಮಾಡುವುದು ಕುಹಕ ನಗು. ಹೇಗಾದರೂ ಸರಿ ಅದರಿಂದ ನಮಗೇನು ಲಾಭವಾಗದಿದ್ದರೂ ಮತ್ತೊಬ್ಬರಿಗೂ ನೋವುಂಟು ಮಾಡಲೇಬೇಕೆಂಬ ಹಠ ತೊಟ್ಟು ನಗುವಂತಹ ನಗು ಇದಾಗಿದ್ದು ಇಂತಹ ನಗುವಿನಿಂದ ಸಂಬಂಧಗಳಲ್ಲಿ ಮನಸ್ತಾಪ, ಬಿರುಕುಗಳು ಉಂಟಾಗುತ್ತದೆ. ಇದನ್ನು ವ್ಯಂಗ್ಯ ನಗು, ಕ್ರೂರ ನಗು ಎಂಬ ಹೆಸರುಗಳಿಂದ ಕರೆಯ ಬಹುದಾಗಿದ್ದು, ಇಂತಹ ನಗುವಿನಿಂದ ಬೇಸರ, ನೋವು ಉಂಟು ಮಾಡಿದಂತಾಗುತ್ತದೆ ವಿನಃ ಬೇರೆ ಯಾವುದೇ ಬಗೆಯ ಪ್ರಯೋಜನವಿರುವುದಿಲ್ಲ.

> ನಗುವಿನ ಮೂಲಕ ಜೀವನದ ಕಷ್ಟಗಳನ್ನು ಸುಲಭವಾಗಿ ಎದುರಿಸಬಹುದು. ಸಂಕಷ್ಟಗಳ ಮಧ್ಯೆಯೂ ನಗುತ್ತಾ ಬದುಕುವ ವ್ಯಕ್ತಿಯ ಮನೋಬಲ ದೃಢವಾಗಿರುತ್ತದೆ. ನಗು ಸೋಂಕಿನಂತೆ ಒಬ್ಬರಿಂದ ಮತ್ತೊಬ್ಬರಿಗೆ ಹರಡಿ ಸುತ್ತಮುತ್ತಲಿನ ವಾತಾವರಣವನ್ನೇ ಸಂತೋಷಮಯವಾಗಿಸುತ್ತದೆ. ಆದ್ದರಿಂದ ನಗುವಿನ ಮಹತ್ವವನ್ನು ಅರಿತು, ನಿತ್ಯ ಸಂತೋಷದಿಂದ ನಗುತ್ತಾ ಸಾಗುವುದು ಜೀವನವನ್ನು ಸ್ವರ್ಗದಂತಾಗಿಸುತ್ತದೆ.

ಔಪಚಾರಿಕ ನಗು: ಮನಸ್ಸಿನಿಂದ ಬಾರದೇ ಕೇವಲ ತೋರ್ಪಡಿಕೆಯ ದೃಷ್ಟಿಯಿಂದ ನಗುವಂತಹ ನಗು ಇದಾಗಿದ್ದು, ಒತ್ತಾಯದಿಂದ ಅಥವಾ ಒಲ್ಲದ ಮನಸ್ಸಿನಿಂದ ಬರುವ ಇದರಿಂದಲೂ ಸಹ ಯಾವುದೇ ಉಪಯೋಗ, ಯಾರಿಗೂ ಇರಲಾರದು.

ಮುಗುಳು ನಗು: ಮಂದಹಾಸದ ನಗು, ಸ್ಮಿತ ನಗು ಎಂಬಿತ್ಯಾದಿ ಹೆಸರುಗಳಿಂದ ಕರೆಯುವ ನಗುವಾಗಿದ್ದು ಇದು ಮನಸ್ಸಿನ ಸಂತೋಷ, ತೃಪ್ತಿಯನ್ನು ಸೂಚಿಸುತ್ತದೆ. ಇಂತಹ ನಗುವು ಬಹುಬೇಗನೆ ಎಲ್ಲರನ್ನೂ ಸೆಳೆಯುತ್ತದೆ. ಸಂಬಂಧಗಳನ್ನು ಮತ್ತಷ್ಟು ಗಟ್ಟಿಯಾಗಿಸುತ್ತದೆ. ಈ ನಗುವಿನಲ್ಲಿ ಆತ್ಮೀಯತೆಯ ಭಾವ ಅಡಕವಾಗಿರುತ್ತದೆ.

ತುಂಟನಗು: ನಮಗಿಷ್ಟವಾದವರನ್ನು ನೋಡಿದಾಗ, ಪರಸ್ಪರ ಅನುರಾಗ, ಪ್ರೀತಿಯ ಭಾವನೆಗಳನ್ನು ವ್ಯಕ್ತಪಡಿಸುವಾಗ, ಮುಖ್ಯವಾಗಿ ಪ್ರೇಮಿಗಳ, ದಂಪತಿಗಳ ಬಾಂಧವ್ಯವನ್ನು ಹೆಚ್ಚಿಸುವ ನಗುವಾಗಿದ್ದು ಹೆಸರೇ ಸೂಚಿಸುವಂತೆ ತುಂಟತನದಿಂದ ಕೂಡಿರುವ ನಗುವಾಗಿರುತ್ತದೆ.

ಮುಗ್ಧನಗು: ಇದನ್ನು ನಿಶ್ಕಲ್ಮಶ ನಗು ಎಂದು ಬೇಕಾದರೂ ಕರೆಯಬಹುದಾದ ನಗು ಇದಾಗಿದ್ದು ಇಂತಹ ನಗುವಿನ ಹಿಂದೆ ಯಾವುದೇ ಬಗೆಯ ಲಾಭ, ನಷ್ಟದ ಲೆಕ್ಕಾಚಾರಗಳಿಲ್ಲದೇ ಮನಃಪೂರ್ವಕವಾಗಿ ಬರುವಂತಹ ನಗುವಾಗಿರುತ್ತದೆ. ಮಕ್ಕಳ ನಗುವನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಇಂತಹ ನಗುಗೆ ಮನಸೋಲದವರೇ ಇಲ್ಲವೆನ್ನಬಹುದು. ಎಂತಹ ಕಠಿಣ ಹೃದಯವುಳ್ಳವರನ್ನು ಸಹ ತನ್ನಡೆಗೆ ಸೆಳೆಯಬಲ್ಲ ಅಯಸ್ಕಾಂತದ ಗುಣ ಈ ನಗುವಿಗಿದೆ.

ಸಾಂಕ್ರಾಮಿಕ ನಗು: ಕೆಲವೊಮ್ಮೆ ಹೇಗೆ ರೋಗಗಳು ಸಾಂಕ್ರಾಮಿಕವಾಗಿ ಹರಡುತ್ತದೋ ಹಾಗೆ ನಗುವು ಕೂಡ ಸಾಂಕ್ರಾಮಿಕವಾಗಿ ಹರಡುತ್ತದೆ. ಇಂತಹ ನಗುವನ್ನು ಸಾಂಕ್ರಾಮಿಕ ನಗು ಎಂದು ಕರೆಯಲಾಗುತ್ತದೆ.ನಗು ಬರದಿದ್ದರೂ ಉಳಿದವರ ನಗುವಿನ ಶೈಲಿಗೆ ಮರುಳಾಗಿ ನಗುವಿನ ವಾತಾವರಣವನ್ನು ಉಂಟುಮಾಡಬಲ್ಲ ನಗು ಇದಾಗಿದೆ. ಹಾಸ್ಯ ಕಾರ್ಯಕ್ರಮಗಳಲ್ಲಿ ಇಂತಹ ನಗುವನ್ನು ಕಾಣಬಹುದು.

ನಗುವಿನಿಂದಾಗುವ ಪ್ರಯೋಜನಗಳು

ಮನುಷ್ಯನ ಬದುಕು ಅಂದುಕೊಂಡಂತೆ ನಡೆಯದೇ ಹೊಂದಿಕೊಂಡು ಬಾಳುವಂತೆ ನಡೆಯುವದಾಗಿದ್ದು ಕೆಲವೊಮ್ಮೆ ನಾವಂದುಕೊಂಡಿದ್ದಕ್ಕಿಂತ ಪ್ರತಿಕೂಲ ಪರಿಸ್ಥಿತಿಗಳು ಉಂಟಾಗಿ ಸುಖಕ್ಕಿಂತ ದುಃಖಗಳೇ ಹೆಚ್ಚಾಗಿ ನಗುವುದನ್ನೇ ಮರೆತಂತೆ ಜೀವಿಸಬೇಕಾಗಿರುತ್ತದೆ. ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ ಎಂಬ ಅಲ್ಲಮಪ್ರಭುವಿನ ವಚನದಂತೆ ಈ ಬದುಕಿನಲ್ಲಿ ದುಃಖಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ ನಗಲೇಬೇಕಾದ, ನಗುತ್ತಲೇ ಕಷ್ಟಗಳನ್ನು ಎದುರಿಸಬೇಕಾದ ಅಗತ್ಯವಿದೆ. ನಗುವಿನಿಂದ ಅನೇಕ ಪ್ರಯೋಜನಗಳು ಉಂಟಾಗುತ್ತವೆ. ಅದನ್ನು ಅರ್ಥಮಾಡಿಕೊಂಡಾಗ ನಗುವಿನ ಮಹತ್ವ ಅರಿವು ನಮ್ಮದಾಗುತ್ತದೆ.

ಒತ್ತಡ ಕಡಿಮೆ ಮಾಡುತ್ತದೆ

ಒತ್ತಡದ ಬದುಕಿನಲ್ಲಿ ನಮ್ಮ ಬಗ್ಗೆ ಯೋಚಿಸುವುದಕ್ಕಿಂತ ಬೇರೆಯವರ ದೃಷ್ಟಿಯಲ್ಲಿ ನಾವು ಹೇಗೆ ಕಾಣಬೇಕೆಂಬ ಅವಸರದಲ್ಲಿಯೇ ಜೀವನ ನಡೆಸುತ್ತ ಇರುತ್ತೇವೆ. ಹಣ, ಆಸ್ತಿ, ಅಧಿಕಾರ, ಪದವಿ, ತೋರ್ಪಡಿಕೆಯ ಜೀವನ, ಮತ್ತೊಬ್ಬರ ಮೆಚ್ಚುಗೆಯ ಮಾತುಗಳಿಗೆ ಬದುಕನ್ನು ಸೀಮಿತವಾಗಿರಿಸಿಕೊಂಡು ಅದರ ಜಂಜಾಟದಲ್ಲಿಯೇ ಬಿದ್ದು ನರುಳುತ್ತೇವೆ. ಮನುಷ್ಯರ ಒತ್ತಡವನ್ನು ನಿವಾರಿಸುವ, ಕಡಿಮೆ ಮಾಡುವ ಶಕ್ತಿ ನಗುವಿಗಿದೆ. ನಗುವಂತಹ ಸಂದರ್ಭವನ್ನು ಬಿಟ್ಟು ಉದ್ಯಾನವನಗಳಲ್ಲಿ ಹೋಗಿ ಗುಂಪಿನಲ್ಲಿ ನಗು ಬರದಿದ್ದರೂ ನಗುವಂತಹ ಸಮೂಹವನ್ನು ನೋಡಿದಾಗ ಅಯ್ಯೋ ಎಂದೆನಿಸುತ್ತದೆ. ನಮ್ಮ ಅಕ್ಕಪಕ್ಕ ನಡೆಯುವ ಸಣ್ಣ ಪುಟ್ಟ ವಿಷಯಗಳಲ್ಲಿಯೇ ನಗುವನ್ನು ಕಾಣಬಹುದು, ನಕ್ಕು ಮನಸ್ಸನ್ನು ಹಗುರವಾಗಿಸಿಕೊಳ್ಳಬಹುದು. ನನಗೆ ಇದನ್ನು ಹೇಳುವಾಗ ಒಂದು ಸಣ್ಣ ಘಟನೆ ನೆನಪಾಗುತ್ತದೆ.

ಘಟನೆ: ಆಸ್ಪತ್ರೆಗೆ ಬಂದ ಮಹಿಳೆಯೊಬ್ಬರು ಒತ್ತಡ, ದುಃಖದಿಂದ ವೈದ್ಯರಿಗೆ ಹೀಗೆ ಹೇಳಿದರಂತೆ. ಡಾಕ್ಟರ್ ನಮ್ಮ ಮಗುವಿಗೆ ಆಮಶಂಕೆ (ಭೇದಿ)ಯಾಗಿದೆ, ನಮ್ಮ ಮನೆಯವರು ಅದನ್ನೇ ಹಣೆಗೆ ಹಚ್ಚಿಕೊಂಡಿದ್ದಾರೆ. ಬೇಗನೇ ಮಗುವನ್ನು ನೋಡಿ ಎಂದು ಒಂದೇ ಸಮನೆ ಗೋಳಾಡಿದರಂತೆ. ವೈದ್ಯ ಮಹಾಶಯ ತಾಯಿಯ ನೋವನ್ನು ಕಂಡು ಸಂತೈಸುವ ಬದಲು ಅಲ್ಲಮ್ಮ ನಿಮ್ಮ ಮನೆಯವರು ಅದನ್ನು ಯಾಕೆ ಹಣೆಗೆ ಹಚ್ಚಿಕೊಂಡರು, ಮೊದಲು ಹಣೆ ತೊಳೆದುಕೊಂಡು ಬರಲು ಹೇಳಿ ಎಂದರಂತೆ. ವೈದ್ಯರ ಮಾತು ಕೇಳಿ ಮಹಿಳೆಗೆ ಕ್ಷಣ ಕಾಲ ಏನು ತೋಚದೇ ಅದರ ಹಿಂದಿರುವ ಹಾಸ್ಯಮನೋಭಾವನೆ ಯನ್ನು ಗ್ರಹಿಸಿ ನಕ್ಕಳಂತೆ. ಈ ಮೇಲಿನ ಘಟನೆಯಲ್ಲಿ ಉತ್ಪ್ರೇಕ್ಷೆ ಏನೇ ಇದ್ದರೂ, ಸತ್ಯಾಸತ್ಯತೆ ಏನೇ ಇದ್ದರೂ ಎಂತಹ ಪರಿಸ್ಥಿತಿಯಲ್ಲಿಯೂ ಎದೆಗುಂದದೆ ಒತ್ತಡವನ್ನು ನಿವಾರಿಸಬೇಕೆಂಬ ಆಶಾಭಾವನೆ ಇದೆ ಎಂದು ಗ್ರಹಿಸಬಹುದು. ಒತ್ತಡದ ಬದುಕಿನಲ್ಲಿ ನಗು ಅತ್ಯಮೂಲ್ಯವಾದದು.

ಮನಸ್ತಾಪ ದೂರವಾಗುತ್ತದೆ

ಜಗಳದ ಮಾತು ಸಂಬಂಧಗಳಲ್ಲಿ ಬಿರುಕನ್ನುಂಟು ಮಾಡಿದರೆ ನಗುವಿನ ಮಾತು ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ನಗುವಿನ ಮೊಗ, ನಗುವಿನಿಂದ ಕೂಡಿದ ಸಲುಗೆ ಮನಸ್ತಾಪಗಳನ್ನು ನಿವಾರಿಸುತ್ತದೆ. ಪರಸ್ಪರ ಎದುರಾಗುವ ಮನಸ್ತಾಪಗಳನ್ನು ಬಿಟ್ಟು ನಕ್ಕು ಮುನ್ನಡೆಯುವ ಗುಣ ನಮ್ಮದಾದರೆ ಸಂಬಂಧಗಳಲ್ಲಿ ಮನಸ್ತಾಪಗಳು ಉಂಟಾಗದು. ಹೇಳಬೇಕಾದ ವಿಚಾರವನ್ನೇ ನಗುತ್ತ, ಮನಸ್ಸಿಗೆ ತಾಕುವಂತೆ, ನೋವಾಗದಂತೆ ಹೇಳುವ ಮನೋಭಾವ ರೂಢಿಸಿಕೊಂಡರೆ ಬಹುತೇಕ ಸಂಬಂಧಗಳಲ್ಲಿ ಮನಸ್ತಾಪ ಉಂಟಾಗದಂತೆ ನೋಡಿಕೊಳ್ಳಬಹುದು.

ತೃಪ್ತಿ ದೊರೆಯುತ್ತದೆ

ನಗು ಮನುಷ್ಯನ ಆರೋಗ್ಯವನ್ನು ವೃದ್ಧಿಸುವುದಲ್ಲದೇ ಮೊಗದ ಮೇಲಿನ ಬಹು ಬೇಡಿಕೆಯ, ಮೌಲ್ಯದ ಆಭರಣವಾಗಿ ಕಾರ್ಯ ನಿರ್ವಹಿಸಬಲ್ಲದು. ನಕ್ಕು ಹಗುರಾಗುವುದರಿಂದ ಮನಸ್ಸಿಗೆ ತೃಪ್ತಿ ಸಿಗುತ್ತದೆ. ಮತ್ಸರ, ಹೊಟ್ಟೆಕಿಚ್ಚುಗಳ ಸೆಲೆಯಲ್ಲಿ ಸಿಲುಕಿ ಒದ್ದಾಡಿ ನರಳುವುದಕ್ಕಿಂತ ಮನಸಾರೆ ನಕ್ಕು ತೃಪ್ತಿಯನ್ನು ಅನುಭವಿಸಿ ಬಾಳುವುದನ್ನು ಕಲಿಯಬೇಕು.

ಕಷ್ಟಗಳ ಎದುರಿಸುವ ಶಕ್ತಿ ನೀಡುತ್ತದೆ

ಎಷ್ಟೇ ಕಷ್ಟಗಳು ಬಂದರೂ ಅದನ್ನು ಎದುರಿಸಿ ನಿಲ್ಲುವ ಶಕ್ತಿಯನ್ನು ನಗು ನೀಡುತ್ತದೆ. ಕಷ್ಟಗಳಿಗೆ ಹೆದರದೇ ನಗುವುದ ಕಲಿತಾಗ ಕಷ್ಟವೇ ಹಿಮದಂತೆ ಕರಗಿ ನೀರಾಗುತ್ತದೆ. ಜೀವನದಲ್ಲಿ ಅಲ್ಪಸ್ವಲ್ಪ ಏರುಪೇರಾದರೂ ಆಕಾಶವೇ ಕಳಚಿ ಬಿದ್ದಂತೆ ಪರಿತಪಿಸುವ ನಾವು ನಗುವಿನಿಂದ ಏನೇ ಅಡೆತಡೆಗಳು ಬಂದರೂ ಅದನ್ನು ಧೈರ್ಯದಿಂದ ಎದುರಿಸಿ ನಿಲ್ಲುವ ಶಕ್ತಿಯನ್ನು ನಗು ನಮಗೆ ನೀಡುತ್ತದೆ.

ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ

ಆರೋಗ್ಯದ ವೃದ್ಧಿಗೆ ನಗು ಪ್ರಮುಖವಾದ ಅಸ್ತ್ರವಾಗಿದ್ದು ಆರೋಗ್ಯದ ಸುಧಾರಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಗುವುದರಿಂದ ಮುಖದಲ್ಲಿನ ಸ್ನಾಯುಗಳಿಗೆ ವ್ಯಾಯಾಮ ವಾಗುವುದಲ್ಲದೇ ಆರೋಗ್ಯದಲ್ಲಿ ಹೊಸ ಚೈತನ್ಯವನ್ನು ನಗು ಉಂಟು ಮಾಡಬಲ್ಲದಾಗಿರುತ್ತದೆ. ವೈದ್ಯರ ನಗು ಮುಖ, ರೋಗಿಯ ಗುಣಮುಖ' ಎಂಬ ಮಾತೇ ನಗುವಿಗಿರುವ ಮಹತ್ವದ ಗುಣವನ್ನು ತಿಳಿಸುತ್ತದೆ. ಆರೋಗ್ಯಯುತ ಜೀವನಕ್ಕೆ ನಗು ರಾಮ ಬಾಣವಿದ್ದಂತೆ. ನಗು ನಗುತ್ತಾ ಆರೋಗ್ಯವನ್ನು ಕಾಪಾಡಿಕೊಳ್ಳೋಣ, ನಕ್ಕು ಹಗುರಾಗೋಣ.

ಒಂದು ಸಣ್ಣ ಕಿರುನಗೆ ಇಡೀ ಸನ್ನಿವೇಶವನ್ನು ಬದಲಿಸಬಲ್ಲದು, ಹೊಸ ಚಿಂತನೆಯನ್ನು ಮೂಡಿಸಬಲ್ಲದು, ಸ್ನೇಹ, ಪ್ರೀತಿ ಬಾಂಧವ್ಯಗಳನ್ನು ಬೆಳೆಸಬಲ್ಲದು. ಒತ್ತಡ ಮುಕ್ತವಾದ ಬದುಕಿಗೆ ನಗು ಪ್ರಧಾನವಾದುದು, ಪ್ರಮುಖವಾದುದು. ನಗೋಣ, ನಕ್ಕು ನಗಿಸುತ್ತಾ ಕಷ್ಟಗಳನ್ನು ಮರೆತು ನಿಶ್ಚಿಂತೆಯಿಂದ ಬದಕುವುದನ್ನು ಕಲಿಯೋಣ. ನಗು ಮಾನವನ ಬದುಕಿಗೆ ಪ್ರಕೃತಿಯೇ ನೀಡಿರುವ ಅಮೂಲ್ಯ ವರವಾಗಿದೆ. ಹಣ, ಆಸ್ತಿ, ಅಧಿಕಾರ ಇವೆಲ್ಲವೂ ಕ್ಷಣಿಕ ಸಂತೋಷವನ್ನು ನೀಡಬಹುದು; ಆದರೆ ಹೃದಯದಿಂದ ಮೂಡುವ ಒಂದು ನಗು ಮನಸ್ಸಿಗೆ ನೆಮ್ಮದಿ, ಆತ್ಮಕ್ಕೆ ಸಂತೃಪ್ತಿ ಮತ್ತು ಬದುಕಿಗೆ ಹೊಸ ಚೈತನ್ಯವನ್ನು ನೀಡುತ್ತದೆ. ನಗುವಿನಲ್ಲಿ ನೋವನ್ನು ಮರೆಸುವ ಶಕ್ತಿ ಇದೆ, ಸಂಬಂಧಗಳನ್ನು ಬೆಸೆಯುವ ಸಾಮರ್ಥ್ಯ ಇದೆ ಮತ್ತು ಕಠಿಣ ಸಂದರ್ಭಗಳನ್ನೂ ಸುಲಭವಾಗಿ ಎದುರಿಸುವ ಧೈರ್ಯ ನೀಡುತ್ತದೆ. ಆದ್ದರಿಂದ ಜೀವನದಲ್ಲಿ ಎಷ್ಟೇ ಸಮಸ್ಯೆಗಳು, ಸವಾಲುಗಳು ಮತ್ತು ಸಂಕಷ್ಟಗಳು ಎದುರಾದರೂ ನಗುವನ್ನು ಕಳೆದುಕೊಳ್ಳಬಾರದು. ನಮ್ಮ ನಗುವಿನಿಂದ ಇತರರ ಮುಖದಲ್ಲಿಯೂ ಸಂತಸದ ಕಿರಣ ಮೂಡಿಸಬಹುದು. ನಗುವು ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಮಾನವೀಯತೆಯನ್ನು ಬೆಳೆಸುವ ಮಹತ್ತರ ಸಾಧನವೂ ಆಗಿದೆ. ನಗುವಿರುವಲ್ಲಿ ಸ್ನೇಹವಿದೆ, ಪ್ರೀತಿಯಿದೆ, ನೆಮ್ಮದಿಯಿದೆ ಮತ್ತು ಸಂತೋಷವಿದೆ.

ಹೀಗಾಗಿ 'ನಕ್ಕರೆ ಅದೇ ಸ್ವರ್ಗ' ಮಾತು ಕೇವಲ ನುಡಿಯಲ್ಲ, ಬದುಕಿನ ಸತ್ಯವಾಗಿದೆ. ಪ್ರತಿದಿನ ನಗುತ್ತಾ, ಇತರರನ್ನೂ ನಗಿಸುತ್ತಾ, ಸಂತೋಷವನ್ನು ಹಂಚಿಕೊಳ್ಳುವ ಮೂಲಕ ನಮ್ಮ ಜೀವನವನ್ನೇ ಸ್ವರ್ಗವನ್ನಾಗಿ ರೂಪಿಸೋಣ. ನಗು ನಮ್ಮ ತುಟಿಗಳಲ್ಲಿ ಸದಾ ಅರಳಿದಾಗ ಬದುಕು ಸುಂದರವಾಗುತ್ತದೆ. ಸಮಾಜ ಸೌಹಾರ್ದಯುತವಾಗುತ್ತದೆ ಮತ್ತು ಮಾನವ ಜನ್ಮ ಸಾರ್ಥಕವಾಗುತ್ತದೆ.

ನಕ್ಕು ಹಗುರಾಗಿ
ನಗಿಸುತ್ತಾ ಹತ್ತಿರವಾಗಿ
ನಕ್ಕು ಆರೋಗ್ಯವಂತರಾಗಿ
ನಮಗಾಗಿ, ನಮ್ಮವರಿಗಾಗಿ
ನಕ್ಕು, ನಲಿಯುತ್ತ ದುಃಖವ ಮರೆತು ಬಾಳೋಣ.

ಕವನ ಬರೆಯಲು ಮನಸ್ಸಿನ ಭಾವನೆ ಮುಖ್ಯವಾಗುತ್ತದೆ

ಪುಷ್ಪಲತಾ ಫಣಿರಾಜ್‌ರ 'ಹೂವಿನ ಬುಟ್ಟಿ' ಕವನ ಸಂಕಲನ ಬಿಡುಗಡೆಗೊಳಿಸಿ ಅಂಕಣಕಾರ ಡಾ.ವಿ.ರಂಗನಾಥ್ ಅಭಿಮತ

ಮೈಸೂರು, ಜೂ.7(ಜಿಎ)–ಕವನ ಬರೆಯಲು ಮನಸ್ಸಿನ ಭಾವನೆ ಮುಖ್ಯವಾಗುತ್ತದೆ. ಇದು ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಕರ್ನಾಟಕ ಸಂಪರ್ಕ ಪ್ರಮುಖರು ಹಾಗೂ 'ಮೈಸೂರು ಮಿತ್ರ' ಅಂಕಣಕಾರರಾದ ಡಾ.ವಿ.ರಂಗನಾಥ್ ಅವರ ಅಭಿಪ್ರಾಯ.

ಮೈಸೂರಿನ ವಿಜಯ ವಿಠ್ಠಲ ಪದವಿ ಪೂರ್ವ ಕಾಲೇಜಿನಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮ ಪುಷ್ಪಲತಾ ಫಣಿರಾಜ್ ವಿರಚಿತ 'ಹೂವಿನ ಬುಟ್ಟಿ' ಕವನ ಸಂಕಲನವನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಪರಿಷದ್‌ನಲ್ಲಿರುವ ಸಾಕಷ್ಟು ಮಂದಿಗೆ ಕವನ, ಲೇಖನ ಬರೆಯುವ ಆಸಕ್ತಿ ಇದೆ. ಒಬ್ಬರು ಕನಿಷ್ಠ ಒಂದು ಪುಸ್ತಕ ಬರೆಯಬೇಕು. ಎಲ್ಲರೂ ಒಂದು ಕೃತಿ ಬರೆದರೆ ಉತ್ತಮ. ಕಳೆದ ಬಾರಿ ಕವಿತೆ ರಚನೆಯಿಂದಲೇ ಸದಸ್ಯತ್ವದ ಸಂಖ್ಯೆ ಹೆಚ್ಚಳವಾಗಿದೆ. ಈ ಬಾರಿ 1300 ಸದಸ್ಯರ ಗುರಿ ಹೊಂದಲಾಗಿದೆ ಎಂದರು.



ಮೈಸೂರಿನ ವಿಜಯ ವಿಠ್ಠಲ ಪದವಿ ಪೂರ್ವ ಕಾಲೇಜಿನಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮ ಪುಷ್ಪಲತಾ ಫಣಿರಾಜ್ ವಿರಚಿತ 'ಹೂವಿನ ಬುಟ್ಟಿ' ಕವನ ಸಂಕಲನವನ್ನು ಡಾ.ವಿ.ರಂಗನಾಥ್ ಲೋಕಾರ್ಪಣೆಗೊಳಿಸಿದರು.

ಹೂವಿನ ಬುಟ್ಟಿಯಲ್ಲಿ ಹೇಗೆ ವಿವಿಧ ರೀತಿಯ ಹೂಗಳು ಇರುತ್ತದೆ. ಹಾಗೇ ಪುಷ್ಪಲತಾ ಫಣಿರಾಜ್ ವಿರಚಿತ 'ಹೂವಿನ ಬುಟ್ಟಿ' ಕವನ ಸಂಕಲನದಲ್ಲಿಯೂ ಚುಟುಕು ಕವನ ಸೇರಿದಂತೆ 84 ಕವಿತೆಗಳಿವೆ. ಒಂದಕ್ಕಿಂತ ಒಂದು ವಿಭಿನ್ನವಾಗಿದೆ. ಕಥೆ ಬರೆದ ಹಾಗೇ ಕವನಗಳನ್ನು ಬರೆಯಲು ಸಾಧ್ಯವಿಲ್ಲ. ಕವನ ಬರೆಯಲು ಮನಸ್ಸಿನ ಭಾವನೆ ಮುಖ್ಯವಾಗುತ್ತದೆ. ಅದಕ್ಕೆ ತಕ್ಕ ಪ್ರಾಸ, ರಾಗವೂ ಬೇಕಿದೆ ಎಂದು ತಿಳಿಸಿದರು.

ಸಾಕಷ್ಟು ಕನ್ನಡ ಪದಗಳು ಇಂದು ಬಳಕೆಗೆ ಇಲ್ಲ. ಅವುಗಳನ್ನು ಕಾವ್ಯದಲ್ಲಿ ಬಳಸಬೇಕು. ಶಬ್ಧ ಭಂಡಾರ ಬೆಳೆಸಿಕೊಂಡರೆ ಕವನಗಳು ಕಳೆಗಟ್ಟುತ್ತದೆ. ಬಳಕೆಗೆ ಬಾರದ ಸಾಕಷ್ಟು ಕನ್ನಡದ ಪದಗಳಿವೆ. ಅದನ್ನು ತಿಳಿದುಕೊಳ್ಳಬೇಕು. ಇದರಿಂದ ಕವಿತೆಗಳ ಮೌಲ್ಯ ಹೆಚ್ಚಲಿದೆ. ಸಾಹಿತ್ಯಕ್ಕಾಗಿ ಓದು ಬರಹ ಇರಬೇಕು. ಪದ ಭಂಡಾರ ಹೆಚ್ಚಿಸಿಕೊಳ್ಳಬೇಕು. ಒಮ್ಮೆ ಬರೆದ ಕವನ ಅಂತಿಮವಲ್ಲ. ಅದಕ್ಕೆ ಸಾಕಷ್ಟು ತಿದ್ದುಪಡಿ ಮಾಡಬೇಕು. ಲೋಕಾರ್ಪಣೆ ಮಾಡಬೇಕಾದ ಸಂದರ್ಭದಲ್ಲಿ ಮತ್ತೊಮ್ಮೆ ಓದಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಎಸ್.ಸುಬ್ರಮಣ್ಯ, ಮೈಸೂರು ಆರ್ಟ್ಸ್ ಗ್ಯಾಲರಿ ಕಾರ್ಯದರ್ಶಿ ಡಾ.ಜಮುನಾ ರಾಣಿ ವಿ.ಮಿರ್ಲೆ, ಲೇಖಕಿ ಪುಷ್ಪಲತಾ ಫಣಿರಾಜ್ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಕಾರಂಜಿಕೆರೆ ಆವರಣದಲ್ಲಿ ನಿರ್ಮಾಣವಾಗುತ್ತಿದೆ 'ಎಕೋ ಟವರ್', ಜಿಪ್‌ಲೈನ್

- 18 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಮಗಾರಿ
- ಚಟುವಟಿಕೆಗಳ ತಾಣವಾಗಲಿರುವ 'ಕಾರಂಜಿಕೆರೆ'
- ಪರಿಸರಕ್ಕೆ ಧಕ್ಕೆಯಾಗದಂತೆ ಕಾಮಗಾರಿ ನಡೆಸಲು ಕ್ರಮ
- ಸ್ವದೇಶಿ ದರ್ಶನ್ 2.0 ಯೋಜನೆಯಡಿ ಅಭಿವೃದ್ಧಿ



ಕಾರಂಜಿಕೆರೆ ಆವರಣದಲ್ಲಿ ನಿರ್ಮಿಸಲುದ್ದೇಶಿಸಿರುವ ಎಕೋ ಟವರ್.

ಕಾಮಗಾರಿ ಆರಂಭಿಸಲಾಗಿದೆ



"ಸ್ವದೇಶಿ ದರ್ಶನ್ 2.0 ಯೋಜನೆಯಡಿ ಕಾರಂಜಿಕೆರೆಯಲ್ಲಿ 18 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಮಗಾರಿ ನಡೆಸಲಾಗುತ್ತಿದೆ. ಅದರಲ್ಲಿ 21 ಮೀಟರ್ ಎತ್ತರದ ಎಕೋ ಟವರ್, ಜಿಪ್‌ಲೈನ್, ಲೇಕ್ ಮತ್ತು ಕೆನೋಪಿ ವಾಕ್, ರೋಪ್ ಬ್ರಿಡ್ಜ್, ವಾಕಿಂಗ್ ಪಾಥ್, ಫುಡ್ ಜೋನ್ ಒಳಗೊಂಡಿದೆ. ನಿಗದಿತ ಅವಧಿಯೊಳಗೆ ಎಲ್ಲಾ ಕಾಮಗಾರಿ ಪೂರ್ಣಗೊಳ್ಳಲಿದೆ. ಕಾಮಗಾರಿಯ ಗುಣಮಟ್ಟವನ್ನು ಆಗಾಗ ಪರಿಶೀಲಿಸಲಾಗುತ್ತಿದೆ.

–ಡಾ.ವಿ.ಎಂ.ಪ್ರಭುಸ್ವಾಮಿ, ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ



ಮೈಸೂರಿನ ಕಾರಂಜಿಕೆರೆ ಆವರಣದಲ್ಲಿ ಎಕೋ ಟವರ್ ಕಾಮಗಾರಿ ಭರದಿಂದ ಸಾಗಿದೆ.

ಮೈಸೂರು, ಜೂ.7(ಎಂಟಿವೈ)– ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಕೇಂದ್ರದ ಸ್ವದೇಶಿ ದರ್ಶನ್ 2.0 ಯೋಜನೆಯಡಿ 18 ಕೋಟಿ ರೂ. ವೆಚ್ಚದಲ್ಲಿ ಮೈಸೂರಿನ ಕಾರಂಜಿಕೆರೆ ಆವರಣದಲ್ಲಿ ಎಕೋ ಟವರ್, ಜಿಪ್‌ಲೈನ್, ಲೇಕ್‌ವಾಕ್, ಕೆನೋಪಿ ವಾಕ್ ಸೇರಿದಂತೆ ವಿವಿಧ ಚಟುವಟಿಕೆ ನಡೆಸಲು ನಿರ್ಧರಿಸಲಾಗಿದ್ದು, ಕಾಮಗಾರಿ ಭರದಿಂದ ಸಾಗಿದೆ.

ಮೈಸೂರು ಮೃಗಾಲಯದ ವ್ಯಾಪ್ತಿಗೆ ಒಳಪಡುವ ಕಾರಂಜಿಕೆರೆಯಲ್ಲಿ ಪ್ರವಾಸೋದ್ಯಮ ಇಲಾಖೆ ವಿವಿಧ ಕಾಮಗಾರಿ ಕೈಗೆತ್ತಿಕೊಂಡಿದ್ದು, ಮೃಗಾಲಯ ಪ್ರಾಧಿಕಾರ ಪರಿಸರಕ್ಕೆ ಧಕ್ಕೆಯಾಗದಂತೆ ಕಟ್ಟೆಚ್ಚರ ವಹಿಸುವ ಷರತ್ತಿನೊಂದಿಗೆ ಕಾಮಗಾರಿ ನಡೆಸಲು ಅನುಮತಿ ನೀಡಿದೆ. ಈಗಾಗಲೇ ಕಾರಂಜಿಕೆರೆಯಲ್ಲಿ ಕಾಮಗಾರಿ ಆರಂಭಿಸಲಾಗಿದ್ದು, ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ ಮುಂದಿನ ವರ್ಷದೊಳಗೆ ಕಾರಂಜಿಕೆರೆಗೆ ಬರುವ ಪ್ರವಾಸಿಗರು ಜಿಪ್‌ಲೈನ್, ಎಕೋ ಟವರ್ ಸೇರಿದಂತೆ ವಿವಿಧ ಚಟುವಟಿಕೆಗಳ ಅನುಭವ ಪಡೆಯಬಹುದಾಗಿದೆ.

ತಲೆ ಎತ್ತಲಿದೆ ಎಕೋ ಟವರ್: ಕಾರಂಜಿಕೆರೆ ಆವರಣದಲ್ಲಿ ಥಂಡಿ ಸಡಕ್ ರಸ್ತೆಗೆ ಹೊಂದಿಕೊಂಡಂತೆ ಎಕೋ ಟವರ್ ನಿರ್ಮಿಸಲಾಗುತ್ತಿದೆ. 21 ಮೀಟರ್ ಎತ್ತರದಲ್ಲಿ 7 ಅಂತಸ್ತಿನಲ್ಲಿ ಎಕೋ ಟವರ್ ನಿರ್ಮಿಸಲಾಗುತ್ತಿದೆ. ಈ ಟವರ್ ಏರಲು ವೃತ್ತಾಕಾರದಲ್ಲಿ ರ್‍ಯಾಂಪ್ ಮಾದರಿಯಲ್ಲಿ ಪ್ರವಾಸಿಗರು ಮೇಲೆ ಬರಲು ಮಾರ್ಗದ ವ್ಯವಸ್ಥೆ ಮಾಡಲಾಗುತ್ತದೆ. ಈ ಟವರ್ ನಿರ್ಮಾಣಕ್ಕೆ 24 ಮೀಟರ್ ಅಗಲದ ಅಡಿಪಾಯ ಹಾಕಲಾಗುತ್ತಿದ್ದು, ಟವರ್ ಅಗಲ 17.25 ಮೀಟರ್ ಇರುತ್ತದೆ. ಇದರಿಂದ ಏಕಕಾಲಕ್ಕೆ ನೂರಾರು ಮಂದಿ ಎಕೋ ಟವರ್ ಮೇಲೆ ನಿಂತುಕೊಂಡು ಮೈಸೂರಿನ ಸೌಂದರ್ಯವನ್ನು ವೀಕ್ಷಿಸಬಹುದಾಗಿದೆ. ಈ ಟವರ್ ಪಕ್ಷಿ ವೀಕ್ಷಣೆಗೂ ಸಹಕಾರಿಯಾಗಲಿದೆ. ದಕ್ಷಿಣ ಕರ್ನಾಟಕದಲ್ಲಿ ಇದು ಮೊದಲ ಟವರ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

3 ಕಿ.ಮಿ ವಾಕ್ ಪಾಥ್: ಕಾರಂಜಿ ಕೆರೆಯಲ್ಲಿ ಮುಖ್ಯದ್ವಾರ ಟಿಕೆಟ್ ಕೌಂಟರ್‌ನಿಂದ ಎಕೋ ಟವರ್‌ವರೆಗೆ 3 ಕಿ.ಮೀ ವಾಕಿಂಗ್ ಪಾಥ್ ನಿರ್ಮಿಸಲಾಗುತ್ತದೆ. ಈಗಾಗಲೇ ಪ್ರವಾಸಿಗರಿಗೆ ವಾಕಿಂಗ್ ಪಾಥ್ ಇದ್ದು, ಅದನ್ನು ಸ್ವದೇಶಿ ದರ್ಶನ್ 2.0 ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ.

ಜಿಪ್‌ಲೈನ್ ನಿರ್ಮಾಣ: ಕಾರಂಜಿಕೆರೆ ಆವರಣದಲ್ಲಿ ಥಂಡಿ ಸಡಕ್ ರಸ್ತೆಗೆ ಹೊಂದಿಕೊಂಡಂತೆ 450 ಮೀಟರ್ ಉದ್ದ ಜಿಪ್‌ಲೈನ್ ಮಾರ್ಗ ನಿರ್ಮಿಸಲಾಗುತ್ತಿದೆ. ಎಕೋ ಟವರ್ ಬಳಿಯಿಂದ ಜಿಪ್‌ಲೈನ್‌ನಲ್ಲಿ ಬಂದು, ಲಲಿತಮಹಲ್ ಮುಖ್ಯ ರಸ್ತೆ ಕಾರಂಜಿಕೆರೆ ಪ್ರವೇಶ ದ್ವಾರದ ಸಮೀಪ ಇಳಿಯಬಹುದಾಗಿದೆ. ಕೆರೆ ಮೇಲೆ ಜಿಪ್‌ಲೈನ್ ಪ್ರಯಾಣಿಸುವುದರಿಂದ ಕೆರೆ ಪರಿಸರ ವೀಕ್ಷಣೆಗೆ ಅವಕಾಶ ದೊರೆತಂತಾಗುತ್ತದೆ.

ಲೇಕ್ ಮತ್ತು ಕೆನೋಪಿ ವಾಕ್: ಕಾರಂಜಿ ಕೆರೆಯಲ್ಲಿ ಎಕೋ ಟವರ್ ಬಳಿ ಯಿಂದ ಲೇಕ್ ಮತ್ತು ಕೆನೋಪಿ ವಾಕ್ ಮಾಡುವ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆ. 350 ಮೀಟರ್ ಉದ್ದದ ಈ ಲೇಕ್ ಮತ್ತು ಕೆನೋಪಿ ವಾಕ್ ಹೊಸ ಅನುಭವ ನೀಡಲಿದೆ. ಟವರ್‌ಗೆ ಹೊಂದಿಕೊಂಡಂತೆ ಕೆಳಗೆ ಲೇಕ್‌ವಾಕ್‌ಗೆ ಸೇತುವೆ ಮಾದರಿಯಲ್ಲಿ ವ್ಯವಸ್ಥೆ ಕಲ್ಪಿಸಿದರೆ, ಅದರ ಮೇಲೆ ಕೆನೋಪಿ ವಾಕ್‌ಗೆ ಸೇತುವೆ ಮಾದರಿಯಲ್ಲಿ ವ್ಯವಸ್ಥೆ ಮಾಡಲಾಗುತ್ತದೆ. ಇದರಿಂದ ನೀರಿನ ಮೇಲೆ ನಡಿಗೆ ಮಾಡಿದಂತಾಗಲಿದ್ದು, ಕೆರೆ ಪರಿಸರ ವೀಕ್ಷಿಸುವ ಅನುಭವ ಪಡೆಯಬಹುದಾಗಿದೆ.

ಮಕ್ಕಳಿಗೆ ರೋಪ್ ಬ್ರಿಡ್ಜ್: ಪ್ರವಾಸಿಗರೊಂದಿಗೆ ಕಾರಂಜಿಕೆರೆಗೆ ಬರುವ ಮಕ್ಕಳಿಗಾಗಿ 30 ಮೀಟರ್ ಉದ್ದದ ರೋಪ್ ಬ್ರಿಡ್ಜ್ ನಿರ್ಮಿಸಲಾಗುತ್ತದೆ. ಹಗ್ಗ ಮತ್ತು ರೋಪ್‌ನಿಂದ ನಿರ್ಮಿಸಲಾಗುವ ಈ ಬ್ರಿಡ್ಜ್ ತೂಗು ಸೇತುವೆಯಂತೆ ಮಕ್ಕಳಿಗೆ ಅನುಭವ ನೀಡಲಿದೆ.

ಫುಡ್ ಜೋನ್: ಕಾರಂಜಿಕೆರೆಗೆ ಬರುವ ಪ್ರವಾಸಿಗರಿಗೆ ತಿಂಡಿ, ತಿನಿಸು ಸಿಗುತ್ತಿಲ್ಲ. ಇದರಿಂದ 3 ಕಿ.ಮಿ ದೂರ ನಡೆದುಕೊಂಡು ಬರುವ ಪ್ರವಾಸಿಗರು ಧಣಿದು, ಆಯಾಸವಾದರೆ ತಿನ್ನಲು ತಿಂಡಿ ಹಾಗೂ ಕುಡಿಯಲು ನೀರಿನ ಬಾಟಲ್ ಸಿಗುವುದಿಲ್ಲ. ಈ ಹಿನ್ನೆಲೆಯಲ್ಲಿ ಫುಡ್ ಕಿಯಾಸ್ಕ್ ನಿರ್ಮಾಣ ಮಾಡಿ, ಅದರಲ್ಲಿ ಎರಡು ಕಂಟೇನರ್ ಇಡಲಾಗುತ್ತದೆ. ಇದರಲ್ಲಿ ನೀರು, ಪಾನೀಯ, ಚಾಟ್ಸ್, ತಿಂಡಿ ಮಾರಾಟದ ಚಿಕ್ಕ ಚಿಕ್ಕ ಮಳಿಗೆ ಇರಲಿದ್ದು, ಅವುಗಳನ್ನು ಮೃಗಾಲಯ ನಿರ್ವಹಿಸಲಿದೆ.

ಎರಡು ತಿಂಗಳು ಕಾಮಗಾರಿಗೆ ತಡೆಯಾಗಿತ್ತು: ಕಾರಂಜಿಕೆರೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ವಿವಿಧ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗಿತ್ತು. ಆದರೆ, ಕಾಮಗಾರಿಗೆ ಕರ್ನಾಟಕ ಮೃಗಾಲಯ ಪ್ರಾಧಿಕಾರದಿಂದ ಅನುಮತಿ ಪಡೆದಿಲ್ಲ ಎಂದು ಮೃಗಾಲಯದ ಅಧಿಕಾರಿಗಳು ತಡೆ ಹಿಡಿದಿದ್ದರು. ಇದೀಗ ಮೃಗಾಲಯ ಪ್ರಾಧಿಕಾರ ಅನುಮತಿ ನೀಡಿದ್ದು, ಇದೀಗ ಎಕೋ ಟವರ್ ಸೇರಿದಂತೆ ವಿವಿಧ ಕಾಮಗಾರಿ ಆರಂಭಿಸಲಾಗಿದೆ. ಈಗಾಗಲೇ ಎಕೋ ಟವರ್‌ಗೆ ಬೃಹತ್ ಆಕಾರದ ಪಿಲ್ಲರ್ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಈ ಹಿಂದೆಯೇ ಪಿಲ್ಲರ್‌ಗೆ ಅಡಿಪಾಯ ಹಾಕುವ ಕಾಮಗಾರಿ ನಡೆಸಿ, ಕ್ಯೂರಿಂಗ್ ಮಾಡಲಾಗಿತ್ತು. ಇದೀಗ ಟವರ್ ನಿರ್ಮಾಣಕ್ಕೆ ಬೇಕಾದ ಕಬ್ಬಿಣದ ಕೆಲಸ ಆರಂಭವಾಗಿದೆ.

ವರ್ಷದೊಳಗೆ ಪೂರ್ಣ: ಎಲ್ಲಾ ಕಾಮಗಾರಿಗಳನ್ನು 9 ತಿಂಗಳೊಳಗೆ ಪೂರ್ಣಗೊಳಿಸುವಂತೆ ಷರತ್ತು ಹಾಕಲಾಗಿತ್ತು. ಆದರೆ, 2 ತಿಂಗಳು ಕಾಮಗಾರಿಗೆ ತಡೆಯೊಡ್ಡಿದ್ದರಿಂದ ಇದೀಗ ಪಿಲ್ಲರ್ ಕಾಮಗಾರಿ ಆರಂಭಿಸಲಾಗಿದೆ. ಇದರಿಂದ ವರ್ಷದೊಳಗೆ ಕಾರಂಜಿಕೆರೆಯಲ್ಲಿ ಎಕೋ ಟವರ್, ಜಿಪ್‌ಲೈನ್, ರೋಪ್ ಬ್ರಿಡ್ಜ್, ಕೆನೋಪಿ, ಲೇಕ್ ವಾಕ್, ಫುಡ್ ಜೋನ್ ನಿರ್ಮಾಣಗೊಂಡು ಪ್ರವಾಸಿಗರ ಸೇವೆಗೆ ಲಭ್ಯವಾಗಲಿದೆ.






ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ್ 2.0 ಯೋಜನೆಯಡಿ ಸುಮಾರು 18 ಕೋಟಿ ರೂ. ವೆಚ್ಚದಲ್ಲಿ ಮೈಸೂರಿನ ಕಾರಂಜಿಕೆರೆ ಆವರಣದಲ್ಲಿ ಕೆನೋಪಿ ವಾಕ್, ರೋಪ್ ವೇ, ರೋಪ್ ಬ್ರಿಡ್ಜ್, ಜಿಪ್‌ಲೈನ್ ಕಾಮಗಾರಿಯ ನಕ್ಷೆಯನ್ನು ಚಿತ್ರದಲ್ಲಿ ಕಾಣಬಹುದು.

ತನ್ವೀರ್ ಸೇಠ್‌ಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ಪ್ರತಿಭಟನೆ



ಗಾಂಧಿನಗರದ ಅಂಬೇಡ್ಕರ್ ವೃತ್ತದಲ್ಲಿ ತನ್ವೀರ್ ಸೇಠ್‌ಗೆ ಸಚಿವ ಸ್ಥಾನ ನೀಡಬೇಕೆಂದು ಗಾಂಧಿನಗರ ನಿವಾಸಿಗಳು ಪ್ರತಿಭಟಿಸಿದರು.


ಮೈಸೂರು, ಜೂ.7(ವಿವಿಹೆಚ್)– ನರಸಿಂಹರಾಜ ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವ ತನ್ವೀರ್ ಸೇಠ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಗಾಂಧಿನಗರ ನಿವಾಸಿಗಳು, ಜಿಲ್ಲಾ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ಗಾಂಧಿನಗರದ ಅಂಬೇಡ್ಕರ್ ಸರ್ಕಲ್‌ನಲ್ಲಿ ಜಮಾವಣೆಗೊಂಡ ನೂರಾರು ಮಂದಿ, ಶಾಸಕ ತನ್ವೀರ್ ಸೇಠ್ ಪರವಾಗಿ ಜೈಕಾರ ಕೂಗಿ, ಸಚಿವ ಸಂಪುಟ ಸ್ಥಾನಮಾನ ನೀಡುವಂತೆ ಒತ್ತಾಯಿಸಿದರು.

ನರಸಿಂಹರಾಜ ಕ್ಷೇತ್ರದ ಹಿರಿಯ ಶಾಸಕರಾಗಿ, ಸಚಿವರಾಗಿ ಅಪಾರ ರಾಜಕೀಯ ಸೇವಾನುಭದ ಜೊತೆಗೆ ಕ್ಷೇತ್ರದ ನಾಡಿಮಿಡಿತವನ್ನು ತಿಳಿದಿರುವ ಹಾಗೂ ಮೈಸೂರಿನ ಅಭಿವೃದ್ಧಿಗೆ ತಮ್ಮದೆ ಕೊಡುಗೆ ನೀಡಿರುವ ತನ್ವೀರ್ ಸೇಠ್ ಅವರಿಗೆ ಮಂತ್ರಿ ಸ್ಥಾನ ನೀಡದಿರುವುದು ವಿಷಾದನೀಯ.

ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತರಾಗಿ ಸದಾ ಕ್ಷೇತ್ರದ ಜನರೊಂದಿಗೆ ಇದ್ದು, ಜನಪರ ಕಾರ್ಯ ಮಾಡಿರುವ ತನ್ವೀರ್ ಸೇಠ್ ಅವರಿಂದಾಗಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿವೆ. ಕೋಮು ದ್ವೇಷಕ್ಕೆ ಅವಕಾಶ ನೀಡದೆ ಎಲ್ಲರನ್ನೂ ಒಗ್ಗಟ್ಟಾಗಿ ಒಂದಾಗಿ ಕಾಣುವ ಹಿರಿಯ ಶಾಸಕರಿಗೆ ಸಿಎಂ ಡಿ.ಕೆ.ಶಿವಕುಮಾರ್ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಕೋರಿದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ಸದಸ್ಯ ಮಾದೇಗೌಡ ಸೇರಿದಂತೆ ಗಾಂಧಿನಗರ ನಿವಾಸಿಗಳು, ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಅಪರಿಚಿತ ಕಾರು ಡಿಕ್ಕಿ : ಜಿಂಕೆ ಸಾವು



ಚಾಮರಾಜನಗರ, ಜೂ.7–ರಸ್ತೆ ದಾಟುತ್ತಿದ್ದ ಜಿಂಕೆಗೆ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಜಿಂಕೆ ಅಸು ನೀಗಿರುವ ಘಟನೆಯೊಂದು ನಗರದ ಹೊರವಲಯದಲ್ಲಿ ಸಂಭವಿಸಿದೆ.

ನಗರದ ಹೊರವಲಯದ ಮೈಸೂರು ಚಾಮರಾಜನಗರ ಹೆದ್ದಾರಿ ರಸ್ತೆಯಲ್ಲಿರುವ ಮಕಾವ್ ಹೋಟೆಲ್ ಸಮೀಪ ರಾತ್ರಿ ಜಿಂಕೆ ರಸ್ತೆ ದಾಟುತ್ತಿದ್ದಾಗ ಅಪರಿಚಿತ ಕಾರು ಡಿಕ್ಕಿ ಹೊಡೆದಿದೆ. ಸುದ್ದಿ ತಿಳಿದ ಪೊಲೀಸರು, ಅರಣ್ಯ ಇಲಾಖೆ ಸ್ಥಳಕ್ಕೆ ಸಿಬ್ಬಂದಿ ಭೇಟಿ ನೀಡಿ ಜಿಂಕೆಯ ಕಳೇಬರವನ್ನು ಸ್ಥಳಾಂತರಿಸಿ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ರಾತ್ರಿ ವೇಳೆ ವನ್ಯಜೀವಿಗಳಿಗೆ ಸೂಕ್ತ ರಕ್ಷಣೆ ಒದಗಿಸುವಂತೆ ಪ್ರಾಣಿಪ್ರಿಯರು ಮನವಿ ಮಾಡಿಕೊಂಡಿದ್ದಾರೆ.

ಮೈಸೂರು ಅಭಿವೃದ್ಧಿ, ಪ್ರಜಾಪ್ರಭುತ್ವ, ವನ್ಯಜೀವಿಗಳ ಉಳಿವಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಹಿರಿಯ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜೂ.7(ಎಂಕೆ)– ಮೈಸೂರು ಅಭಿವೃದ್ಧಿ, ಪ್ರಜಾಪ್ರಭುತ್ವ ಮತ್ತು ನಾಡಿನ ವನ್ಯಜೀವಿಗಳ ಉಳಿವಿಗೆ ಆಗ್ರಹಿಸಿ ಹಿರಿಯ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಜಮಾವಣೆಗೊಂಡ ಪ್ರತಿಭಟನಾಕಾರರು ಮೈಸೂರಿನ ಅಭಿವೃದ್ಧಿ, ಪ್ರಜಾಪ್ರಭುತ್ವ ಮತ್ತು ನಾಡಿನ ವನ್ಯಜೀವಿಗಳನ್ನು ಉಳಿಸುವಂತೆ ಘೋಷಣೆಗಳನ್ನು ಕೂಗಿ ಒತ್ತಾಯಿಸಿದರು. ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ವಾಟಾಳ್ ನಾಗರಾಜ್, ಕಾಡು ಪ್ರಾಣಿ ಮತ್ತು ಮಾನವ ಸಂಘರ್ಷ ಹೆಚ್ಚಾಗುತ್ತಿದೆ. ಇದನ್ನು ತಡೆಯಲು ಸರಕಾರ ಮುಂದಾಗಬೇಕು. ಮೈಸೂರಿನ ಸಮಗ್ರ ಅಭಿವೃದ್ಧಿ ಸೇರಿದಂತೆ ನಾನಾ ಬೇಡಿಕೆಗಳನ್ನು ಈಡೇರಿಸಲು ಸರಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ನೂತನ ರಾಜ್ಯ ಸರ್ಕಾರದಲ್ಲಿ ಒಮ್ಮತವಿಲ್ಲದೆ ರಾಜಕೀಯ ಕಿತ್ತಾಟ ನಡೆಯುತ್ತಿದೆ. ಖಾತೆ ಕಿತ್ತಾಟದಿಂದ ಜನರ ಅಭಿವೃದ್ಧಿ ಕಡೆ ಜನಪ್ರತಿನಿಧಿಗಳು ಗಮನ ಹರಿಸುತ್ತಿಲ್ಲ. ಇದೇ ರೀತಿ ಮುಂದುವರೆದರೆ ಅಭಿವೃದ್ಧಿ ಕೆಲಸಗಳು ಆಗುವುದಿಲ್ಲ. ಜನರು ಮತ ಚಲಾಯಿಸಿ ವಿಧಾನಸೌಧಕ್ಕೆ ಕಳುಹಿಸಿರುವುದು ಕಿತ್ತಾಟ ಮಾಡುವುದ್ದಕ್ಕೆ? ಎಂದು ಪ್ರಶ್ನಿಸಿದರು.

ಸರ್ವ ಜನಾಂಗದ ಶಾಂತಿಯ ತೋಟ: ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ಬಳಿಕ, ವಿಧಾನಸೌಧದಲ್ಲಿ ವಿಶೇಷ ಪೂಜೆ, ಹೋಮ–ಹವನ ಮಾಡಿಸಿದ್ದು ಸರಿಯಲ್ಲ. ವಿಧಾನಸೌಧ ಸರ್ವ ಜನಾಂಗದ ಶಾಂತಿಯ ತೋಟ ಇದ್ದಂತೆ. ಎಲ್ಲರಿಗೂ, ಎಲ್ಲಾ ಧರ್ಮದವರಿಗೂ ಸೇರಿದ್ದು. ಆದರೆ, ಪೂಜೆ–ಪುನಸ್ಕಾರ, ಹೋಮ ಹವನ ಮಾಡಿಸಿರುವುದು ಸರಿಯಲ್ಲ. ಅವರು ಬೇಕಿದ್ದರೆ ಅವರ ಮನೆಯಲ್ಲಿ ಮಾಡಿಸಿಕೊಳ್ಳಲಿ ಎಂದು ಕಿಡಿಕಾರಿದರು.

ಕನ್ನಡ ಬಾವುಟ ಪಕ್ಷ: 2028ರ ಚುನಾವಣೆಯಲ್ಲಿ ಕನ್ನಡ ಬಾವುಟ ಪಕ್ಷವನ್ನು ಕಟ್ಟಿ, ಚುನಾವಣೆಗೆ ಬರುತ್ತೇವೆ. ರಾಜ್ಯದ ಉದ್ದಲಗಕ್ಕೂ ಯುವ ಜನಾಂಗವನ್ನು ಸಂಪರ್ಕಿಸಿ, ರೂಪರೇಷೆ ನೀಡುವಂತೆ ಕೇಳುತ್ತೇನೆ. ಇದಕ್ಕೆ ಕಾನೂನು ಸಲಹೆ ನೀಡಲು ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಅವರನ್ನು ಕೇಳಿದ್ದೇವೆ ಎಂದರು.

ಪ್ರತಿಭಟನೆಯಲ್ಲಿ ಹೋರಾಟಗಾರರಾದ ಮೂಗೂರು ನಂಜುಂಡಸ್ವಾಮಿ, ಪಾರ್ಥಸಾರಥಿ, ಲೋಕೇಶ್ ತೇಜಸ್‌ಗೌಡ, ಮುನ್ನಾ, ಸಿಂಧುವಳ್ಳಿ ಶಿವಕುಮಾರ್, ಕುಮಾರ್‌ಗೌಡ, ಬಸವರಾಜು, ತ್ಯಾಗರಾಜ್, ದರ್ಶನಗೌಡ, ರವೀಶ್ ಮತ್ತಿತರರಿದ್ದರು.

ಪ್ರಕೃತಿ ಉಳಿದರೆ ಮನುಕುಲದ ಭವಿಷ್ಯ ಸುರಕ್ಷಿತ

ಹಿರಿಯ ಸಾಹಿತಿ ಹಾಗೂ ಶಿಕ್ಷಣ ತಜ್ಞ ಪ್ರೊ.ಕೆ. ಕಾಳಚೆನ್ನೇಗೌಡ ಅಭಿಮತ



ಮೈಸೂರಿನ ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ 8ನೇ ವರ್ಷದ ವನಮಹೋತ್ಸವ ಕಾರ್ಯಕ್ರಮ ನಡೆಸಲಾಯಿತು.

ಮೈಸೂರು, ಜೂ.7–ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಪ್ರಕೃತಿಯನ್ನು ಉಳಿಸುವ ಮೂಲಕವೇ ಮನು ಕುಲದ ಭವಿಷ್ಯವನ್ನು ಸುರಕ್ಷಿತಗೊಳಿಸಲು ಸಾಧ್ಯ ಎಂದು ಹಿರಿಯ ಸಾಹಿತಿ ಹಾಗೂ ಶಿಕ್ಷಣ ತಜ್ಞ ಪ್ರೊ.ಕೆ. ಕಾಳಚೆನ್ನೆಗೌಡ ಅಭಿಪ್ರಾಯಪಟ್ಟರು.

ನಗರದ ವಿಜಯನಗರ 2ನೇ ಹಂತದಲ್ಲಿರುವ ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 8ನೇ ವರ್ಷದ ವನಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಕೃತಿ ಮತ್ತು ಪರಿಸರ ಮಾನವನ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ವ್ಯಕ್ತಿಯ ಬೆಳವಣಿಗೆಗೆ ಕುಟುಂಬದ ಜೊತೆಗೆ ಉತ್ತಮ ಪರಿಸರವೂ ಅಗತ್ಯವಾಗಿದೆ. ಆಹಾರ ಉತ್ಪಾದನೆ, ಶುದ್ಧ ಗಾಳಿ, ನೀರು ಸೇರಿದಂತೆ ಬದುಕಿಗೆ ಬೇಕಾದ ಎಲ್ಲ ಸಂಪನ್ಮೂಲಗಳನ್ನು ಪ್ರಕೃತಿಯೇ ಒದಗಿಸುತ್ತಿದೆ. ಸುಮಾರು 430 ಕೋಟಿ ವರ್ಷಗಳ ಇತಿಹಾಸ ಹೊಂದಿರುವ ಭೂಮಿಯನ್ನು ಕಾಪಾಡುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದೆ ಎಂದು ಹೇಳಿದರು.

ಮೈಸೂರು ಮಹಾನಗರ ಪಾಲಿಕೆಯ ಆರೋಗ್ಯ ಪರಿವೀಕ್ಷಕ ಯೋಗೇಶ್ ಮಾತನಾಡಿ, ಪರಿಸರದ ಬಗ್ಗೆ ಪ್ರತಿಯೊಬ್ಬ ನಾಗರಿಕನಲ್ಲೂ ಜಾಗೃತಿ ಮೂಡಬೇಕಿದೆ. ಭೂಮಿ ಮತ್ತು ಪ್ರಕೃತಿಯ ಮೇಲೆ ನಿರಂತರ ಒತ್ತಡ ಹೆಚ್ಚಾದರೆ ಮುಂದಿನ ಪೀಳಿಗೆಗಳು ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯಿಂದ ಸಸಿ ನೆಡುವ ಕಾರ್ಯಕ್ರಮ, ಸಾವಿರಕ್ಕೂ ಹೆಚ್ಚು ವಿವಿಧ ಜಾತಿಯ ಸಸಿಗಳ ಉಚಿತ ವಿತರಣೆ, ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಜಾಥಾ, ವಿದ್ಯಾರ್ಥಿಗಳಿಂದ ಪರಿಸರ ಗೀತೆಗಳ ಗಾಯನ ನಡೆಯಿತು. ನಿವೃತ್ತ ಮುಖ್ಯೋಪಾಧ್ಯಾಯರಾದ ಶುಭಮಣಿ, ಪರಿಸರ ಪ್ರೇಮಿ ಶಿವಕುಮಾರ್ ಮಾತನಾಡಿದರು. ಈ ವೇಳೆ ಸಮಾಜ ಸೇವಕ ಚೆನ್ನಬಸಪ್ಪ ಸಮರ್ಥನಂ ಸಂಸ್ಥೆಯ ಮೈಸೂರು ವಿಭಾಗದ ಮುಖ್ಯಸ್ಥ ಎಂ.ಶಿವರಾಜು, ರಾಜೇಂದ್ರ ಸುಬ್ರಮಣಿ, ಮಂತೇಶ್, ಭ್ರಮಾರಂಭ, ಚೈತ್ರಕುಮಾರಿ, ಪದ್ಮ, ಬೃಂದಾಬಾಯಿ, ವಿದ್ಯಾವತಿ, ಸ್ಪರ್ಶ, ಎಸ್.ಲತಾ, ಪವನ್ ಸೇರಿದಂತೆ ಸಂಸ್ಥೆಯ ಸಿಬ್ಬಂದಿ, ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಜಗದೀಶ್ ಹಿರೇಮನಿಗೆ ನುಡಿನಮನ



ಬಿಜೆಪಿ ಮಾಜಿ ರಾಜ್ಯ ಕಾರ್ಯದರ್ಶಿ ದಿವಂಗತ ಜಗದೀಶ ಹಿರೇಮನಿ ಅವರ ಭಾವಚಿತ್ರಕ್ಕೆ ಕೇಂದ್ರದ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಇತರರು ಪುಷ್ಪಾರ್ಚನೆ ಮಾಡಿ ಶ್ರದ್ಧಾಂಜಲಿ ಸಲ್ಲಿಸಿದರು.

ಮೈಸೂರು,ಜೂ.7(ಎಸ್‌ಪಿಎನ್)– ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ, ಬಿಜೆಪಿ ಮಾಜಿ ರಾಜ್ಯ ಕಾರ್ಯದರ್ಶಿ ಜಗದೀಶ ಹಿರೇಮನಿ ಅವರ ನಿಧನಕ್ಕೆ ಕೇಂದ್ರದ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ನೇತೃತ್ವದಲ್ಲಿ ನುಡಿನಮನ ಸಲ್ಲಿಸಲಾಯಿತು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಬಿಜೆಪಿ ಮೈಸೂರು ನಗರ ಮತ್ತು ಜಿಲ್ಲಾ ಘಟಕದಿಂದ ಆಯೋಜಿಸಿದ್ದ ದಿವಂಗತ ಜಗದೀಶ ಹಿರೇಮನಿ ಶ್ರದ್ಧಾಂಜಲಿ ಸಭೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನುಡಿನಮನ ಸಲ್ಲಿಸಿದರು.

ಬಳಿಕ ಕೇಂದ್ರ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ನುಡಿನಮನ ಸಲ್ಲಿಸುತ್ತಾ, ನಿಷ್ಠಾವಂತ ಕಾರ್ಯಕರ್ತರೇ ನಮ್ಮ ಪಕ್ಷದ ಬಂಡವಾಳ. ಅವರ ಆರೋಗ್ಯ, ರಕ್ಷಣೆ ಅತೀಮುಖ್ಯ. ತಳ ಸಮುದಾಯದಲ್ಲಿ ಬಂದಿರುವ ಜಗದೀಶ ಹಿರೇಮನಿ ಅವರು, ನಮ್ಮ ಪಕ್ಷದಲ್ಲಿ ಹಂತಹಂತವಾಗಿ ಬೆಳೆದು ವಿವಿಧ ಹುದ್ದೆಗಳ ಅಲಂಕರಿಸಿದ್ದರು.

ಕಳೆದ ಮೂರು ದಶಕಗಳಿಂದ ಬಿಜೆಪಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿರುವ ಅವರು, ಅಧಿಕಾರದ ಯಾವುದೇ ಆಸೆ ಇಲ್ಲದೆ ಪಕ್ಷದ ಬೆಳವಣಿಗೆಗಾಗಿ, ಹಿಂದುತ್ವ ಉಳಿವಿಗಾಗಿ ಶ್ರಮಿಸಿದ್ದರು. ವೈಯಕ್ತಿಕ ಜೀವನದ ಕಷ್ಟಗಳನ್ನು ಯಾರ ಮುಂದೆಯೂ ತೋರ್ಪಡಿಸಿಕೊಳ್ಳದೇ ಪಕ್ಷದ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದ ಘಟನೆಗಳನ್ನು ವಿವರಿಸಿದರು.

ವಿಧಾನಪರಿಷತ್ ಮುಖ್ಯ ಸಚೇತಕ ಎನ್.ರವಿಕುಮಾರ್ ಮಾತನಾಡಿ, ಜಗದೀಶ್ ಹಿರೇಮನಿ ಅವರು ಎಬಿವಿಪಿ ಕಾರ್ಯಕರ್ತರಾಗಿ ವಿದ್ಯಾರ್ಥಿ ಚಳವಳಿಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದರು. ಬಳಿಕ ಬಿಜೆಪಿಯಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ಜಗದೀಶ ಅವರ ಸಂಘಟನಾ ಸಾಮರ್ಥ್ಯ, ಸರಳತೆ ಮತ್ತು ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗುವ ಗುಣಗಳು ಇತರೆ ಕಾರ್ಯಕರ್ತರಿಗೆ ಮಾದರಿಯಾಗಿದ್ದವು ಎಂದರು.

ಶ್ರದ್ಧಾಂಜಲಿ ಸಭೆಯಲ್ಲಿ ಆರ್‌ಎಸ್‌ಎಸ್ ಮುಖಂಡ ಮಾ.ವೆಂಕಟರಾವ್, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಬಿಜೆಪಿ ರಾಜ್ಯ ಉಪಾಧ್ಯಕ್ಷ, ಮಾಜಿ ಸಚಿವ ಎನ್.ಮಹೇಶ್, ಮಾಜಿ ಎಂಎಲ್‌ಸಿ ಸಿದ್ದರಾಜು, ಮಾಜಿ ಮೇಯರ್‌ಗಳಾದ ಶಿವಕುಮಾರ್, ಸಂದೇಶ್ ಸ್ವಾಮಿ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಕುಬ್ರಳ್ಳಿ ಸುಬ್ಬಣ್ಣ, ಮಾಜಿ ನಗರಾಧ್ಯಕ್ಷ ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಂಜುನಾಥ್, ಬಿಜೆಪಿ ಮುಖಂಡರಾದ ಅರುಣ್‌ಕುಮಾರ್, ಕೆ.ವಸಂತ್ ಕುಮಾರ್, ಅಪ್ಪಣ್ಣ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಗೋಕುಲ್ ಗೋವರ್ಧನ್, ಸಾಮಾಜಿಕ ಕಾರ್ಯಕರ್ತ ವಾದಿರಾಜ್, ಸೋಮಸುಂದರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಆಧುನಿಕ ಭಾರತದ ಶಿಲ್ಪಿ ನಾಲ್ವಡಿ ಕೃಷ್ಣರಾಜ ಒಡೆಯರ್

ಡಾ.ಈ.ಸಿ.ನಿಂಗರಾಜ್ ಗೌಡ ಬಣ್ಣನೆ



ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸಲಾಯಿತು.

ಮಂಡ್ಯ, ಜೂ.7– ತಮ್ಮ ಜನಪರ ಅಭಿವೃದ್ಧಿ ಕೆಲಸದ ಮೂಲಕವೇ ರಾಜರ್ಷಿ ಎಂಬ ಬಿರುದು ಪಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಆಧುನಿಕ ಭಾರತದ ಶಿಲ್ಪಿ ಎಂದು ಮೈಸೂರು ವಿಭಾಗೀಯ ಬಿಜೆಪಿ ಪ್ರಭಾರಿ ಡಾ.ಈ.ಸಿ. ನಿಂಗರಾಜ್ ಗೌಡ ಬಣ್ಣಿಸಿದರು.

ಡಾ.ಜೀಶಂಪ ಸಾಹಿತ್ಯ ವೇದಿಕೆಯಿಂದ ಭಾನುವಾರ ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಅಖಿಲ ಕರ್ನಾಟಕ ಪ್ರಥಮ ಮಹಿಳಾ ಕನ್ನಡ ಅಕ್ಷರ ಜಾತ್ರೆ ವಿವಿಧ ಪ್ರಶಸ್ತಿ ಪ್ರದಾನ ಮತ್ತು ಕವಿಗೋಷ್ಠಿ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನದ ಅತ್ಯಂತ ಪ್ರಸಿದ್ಧ ಮತ್ತು ಜನಪರ ರಾಜರಲ್ಲಿ ಒಬ್ಬರು. ಅವರನ್ನು ರಾಜರ್ಷಿ ಎಂದು ಕರೆಯಲಾಗುತ್ತಿತ್ತು. ಏಕೆಂದರೆ ಅವರು ರಾಜನಾಗಿದ್ದರೂ ಋಷಿಯಂತೆ ಸರಳತೆ, ಧರ್ಮನಿಷ್ಠೆ ಮತ್ತು ಜನಸೇವೆ ಪಾಲಿಸುತ್ತಿದ್ದರು. ಅವರ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನವು ಭಾರತದ ಅತ್ಯಂತ ಅಭಿವೃದ್ಧಿ ಶೀಲ ಸಂಸ್ಥಾನಗಳಲ್ಲಿ ಒಂದಾಗಿ ಪ್ರಸಿದ್ಧಿಯಾಯಿತು ಎಂದರು.

ಚಾಮರಾಜ ಒಡೆಯರ್ ಅವರು ಬೇಗ ನಿಧನರಾದ ಕಾರಣ ಅವರ ಮಗ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬಾಲ್ಯದಲ್ಲೇ ರಾಜ್ಯದ ಉತ್ತರಾಧಿಕಾರಿಯಾದರು. ಆರಂಭದಲ್ಲಿ ತಾಯಿ ಕೆಂಪ ನಂಜಮ್ಮಣಿ ರಾಜ್ಯದ ಆಡಳಿತ ನೋಡಿಕೊಂಡರು. ಅವರ ಕಾಲವನ್ನು ಮೈಸೂರು ಸಂಸ್ಥಾನದ ಸುವರ್ಣ ಯುಗ ಎನ್ನುತ್ತಾರೆ ಎಂದು ಸ್ಮರಿಸಿದರು.

ನಾಲ್ವಡಿ ಅವರು ಶಿಕ್ಷಣ ಕ್ಷೇತ್ರದ ಅಭಿವೃದ್ಧಿ, 1916ರಲ್ಲಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಗೆ ಕಾರಣರಾದರು. ಮಹಿಳಾ ಶಿಕ್ಷಣಕ್ಕೆ ಉತ್ತೇಜನ ನೀಡಿದರು. ಶಾಲೆಗಳು, ಕಾಲೇಜುಗಳು ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು ಎಂದು ಶ್ಲಾಘಿಸಿದರು.

ಕೈಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿ ನಡೆಸಿ ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ, ಮೈಸೂರು ಸಿಲ್ಕ್ ಇಂಡಸ್ಟ್ರಿ, ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಸ್ಥಾಪಿಸಿ ವಿದ್ಯುತ್ ಉತ್ಪಾದನೆಗಾಗಿ ಶಿವನಸಮುದ್ರ ಜಲ ವಿದ್ಯುತ್ ಯೋಜನೆಗೆ ಉತ್ತೇಜನ ನೀಡಿದರು. ಮೈಸೂರು ಸಂಸ್ಥಾನವನ್ನು ಕೈಗಾರಿಕಾ ದೃಷ್ಟಿಯಿಂದ ಭಾರತದ ಮಾದರಿ ರಾಜ್ಯವನ್ನಾಗಿ ರೂಪಿಸಿದರು ಎಂದು ಬಣ್ಣಿಸಿದರು.

ಕೃಷ್ಣರಾಜ ಸಾಗರ ಅಣೆಕಟ್ಟು ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿದರು. ಇದರ ಯೋಜನೆಯಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಪ್ರಮುಖ ಪಾತ್ರವಹಿಸಿದರು. ಈ ಅಣೆಕಟ್ಟು ಕೃಷಿ, ಕುಡಿಯುವ ನೀರು ಮತ್ತು ವಿದ್ಯುತ್ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಿತು ಎಂದರು.

ಒಡೆಯರ್ ಅವರು ತಮ್ಮ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ಉತ್ತಮ ರಸ್ತೆ, ಆರೋಗ್ಯ ಸೇವೆ ಮತ್ತು ನೀರಾವರಿ ವ್ಯವಸ್ಥೆ ಅಭಿವೃದ್ಧಿ ಪಡಿಸಿದರು. ದಲಿತರು ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕ್ರಮ ಕೈಗೊಂಡರು. ಸರ್ಕಾರಿ ಸೇವೆಗಳಲ್ಲಿ ಸ್ಥಳೀಯರಿಗೆ ಅವಕಾಶ ನೀಡಿದರು. ಕಲೆ ಮತ್ತು ಸಂಗೀತಕ್ಕೆ ಪ್ರೋತ್ಸಾಹ ನೀಡಿದ ಒಡೆಯರ್ ಅವರು, ಸಂಗೀತ, ಸಾಹಿತ್ಯ ಮತ್ತು ಚಿತ್ರಕಲೆಗೆ ಅಪಾರ ಪ್ರೋತ್ಸಾಹ ನೀಡಿದರು. ಮೈಸೂರು ಚಿತ್ರಕಲಾ ಶೈಲಿ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸಿದರು ಎಂದರು.


ಕೈಗಾರಿಕೆಗಳು, ಶಿಕ್ಷಣ ಸಂಸ್ಥೆಗಳು, ಅಣೆಕಟ್ಟುಗಳು, ಬ್ಯಾಂಕುಗಳು ಸೇರಿದಂತೆ ಸಾರ್ವಜನಿಕ ಯೋಜನೆಗಳನ್ನು ನೀಡಿದರು. ಅಂಗವಿಕಲರು, ದಲಿತರು, ಮಹಿಳೆಯರು, ಕಾರ್ಮಿಕರ ಏಳ್ಗೆಗೆ ಶ್ರಮಿಸಿದ ಅವರ ಆಡಳಿತ ಕಾಲವನ್ನು ಮೈಸೂರು ಸಂಸ್ಥಾನದ ಸುವರ್ಣ ಯುಗ ಎಂದು ಇತಿಹಾಸದಲ್ಲಿ ದಾಖಲಿಸಲಾಗಿದೆ ಎಂದು ತಿಳಿಸಿದರು.

ಇತ್ತೀಚೆಗಷ್ಟೇ ಪರಿಸರ ದಿನಾಚರಣೆ ಆಚರಿಸಲಾಗಿದೆ. ಪ್ರಧಾನಿ ಮೋದಿ ಅವರು ಗಿಡಗಳನ್ನು ನೆಡುವುದಲ್ಲ ಬೆಳೆಸಬೇಕೆಂದು ಕರೆ ಕೊಟ್ಟಿದ್ದರು. ಅದರಂತೆ ದೇಶ ನಿವಾಸಿಗಳು ಗಿಡ ನೆಟ್ಟು ಮೋದಿ ಕರೆ ಬೆಂಬಲಿಸಿದರು. ಕೇವಲ ಪರಿಸರ ದಿನಾಚರಣೆ ಸಂದರ್ಭ ಮಾತ್ರವಲ್ಲದೇ ಪ್ರತಿಯೊಬ್ಬರೂ ಶುಭ ಸಮಾರಂಭಗಳಲ್ಲಿ ಗಿಡ ನೆಟ್ಟು ಪ್ರೋತ್ಸಾಹಿಸಬೇಕೆಂದು ಕರೆ ನೀಡಿದರು.

ಖ್ಯಾತ ಕವಿ ಹಾಗೂ ವೈದ್ಯ ಡಾ.ಚಂದ್ರಶೇಖರ್ ಮಾತನಾಡಿದರು. ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಕರ್ನಾಟಕ ಸೇವಾ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಮಾರಂಭದಲ್ಲಿ ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಸಿದ್ದಲಿಂಗಯ್ಯ, ಸಮಾಜ ಸೇವಕರಾದ ಆನಂದ್ ತಿರುಮಲ, ನವೀದ್ ಮುಲ್ಲಾ, ಆಧ್ಯಾತ್ಮ ಚಿಂತಕಿ ಡಾ.ಪೂರ್ಣಿಮಾ, ಹೊಸಪೇಟೆ–ತೋರಣಗಲ್ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಆರ್.ಯೋಗಾನಂದ, ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ, ಪದಾಧಿಕಾರಿಗಳಾದ ಮಂಗಲ ಶಿವಣ್ಣ, ನಾಗೇಶ್, ನಾರಾಯಣ ಸ್ವಾಮಿ, ಹೇಮಾ, ಎಲ್ಲರೊಳಗೊಂದಾಗು ಮಂಕು ತಿಮ್ಮ ಟ್ರಸ್ಟ್‌ನ ವಿನಯ್ ಕುಮಾರ್ ಉಪಸ್ಥಿತರಿದ್ದರು.

ರಾಜತ್ವದಲ್ಲೂ ಪ್ರಜಾಪ್ರಭುತ್ವ ಮೆರೆದವರು ನಾಲ್ವಡಿ



ಮಂಡ್ಯ: ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ರಾಜನಂತಿರದೆ ರಾಜತ್ವದಲ್ಲಿದ್ದು ಕೊಂಡು ಪ್ರಜಾಪ್ರಭುತ್ವ ಮೆರೆದು ಜನಾನುರಾಗಿಯಾದವರು. ಇಂತಹ ರಾಜ ಮತ್ತೊಬ್ಬರು ಇರಲಿಲ್ಲ. ರಾಜರೆಂದರೆ ಹೇಗಿರಬೇಕು ಎಂದು ದೇಶಕ್ಕೆ ತೋರಿಸಿಕೊಟ್ಟವರು ನಾಲ್ವಡಿಯವರು ಎಂದು ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷೆ ಹಾಗೂ ಕವಯಿತ್ರಿ ಬಿ.ಆರ್.ಉಮಾ ಶ್ಲಾಘಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಸೂರು ರಾಜ್ಯದ ಭಾಗ್ಯದಾತರೆನಿಸಿ ತಮ್ಮ ಅಸಾಧಾರಣ ಕೊಡುಗೆ, ಪರಿಶ್ರಮದಿಂದಲೇ ವಿಶ್ವ ಭೂಪಟ ದಲ್ಲಿ ಮೈಸೂರು ಗುರುತಿಸಿಕೊಳ್ಳು ವಂತೆ ಮಾಡಿದರು. ಬೇರೆಲ್ಲಾ ರಾಜರು ಕಿರೀಟ ಧರಿಸಿದರೆ, ಇವರು ಪೇಟ ಧರಿಸುತ್ತಿದ್ದರು. ಜನ ಸೇವೆಯನ್ನೇ ಮುಖ್ಯ ಗುರಿಯನ್ನಾಗಿಸಿ ಕೊಂಡ ಇವರಿಗೆ ಮಹಾತ್ಮ ಗಾಂಧೀಜಿ ಅವರು ರಾಜರ್ಷಿ ಎಂದು ಬಿರುದು ನೀಡಿದರೆ, ಸರ್ದಾರ್ ವಲ್ಲಭ ಬಾಯಿ ಪಟೇಲ್ ಅವರು ಇಂತಹ ರಾಜರಿದ್ದರೆ ಪ್ರಜಾಪ್ರಭುತ್ವವೇ ಬೇಕಿಲ್ಲ ಎಂದಿದ್ದರು. ಅಲ್ಲದೆ, ಬ್ರಿಟಿಷ್ ಅಧಿಕಾರಿ ಲಾರ್ಡ್ ಶಾಮಿಯಲ್ ಇವರನ್ನು ಅಶೋಕ ಚಕ್ರವರ್ತಿಗೆ ಹೋಲಿಸಿದ್ದರು. ವಿದೇಶಿ ಪತ್ರಿಕೆಗಳಂತೂ ಒಡೆಯರ್ ಅವರನ್ನು ಆಧುನಿಕ ಜನಕ ರಾಜರೆಂದು ಕೊಂಡಾಡಿದ್ದವು ಎಂದು ಸ್ಮರಿಸಿದರು. ಇಂದು ಪ್ರತಿ ಮನೆಯಲ್ಲೂ ಉರಿಯುತ್ತಿರುವ ಬಲ್ಬ್ ನಾಲ್ವಡಿಯವರ ಕೊಡುಗೆ. ಅವರು ಕೊಡುಗೆ ನೀಡದ ಕ್ಷೇತ್ರಗಳೇ ಇಲ್ಲ. ಮಹಿಳೆಯರಿಗೆ ಶಿಕ್ಷಣ, ದೇವದಾಸಿ ಪದ್ಧತಿ, ಬಾಲ್ಯ ವಿವಾಹ, ಗೆಜ್ಜೆ ಪೂಜೆ ಗಳಂಥ ಅನಿಷ್ಟ ಪದ್ಧತಿಗಳನ್ನು ನಿಷೇಧಿಸಿದರು. ಹೆಣ್ಣು ಮಕ್ಕಳಿಗಾಗಿ ಶಾಲಾ ಶಿಕ್ಷಣ, ವಯಸ್ಕರ ಶಿಕ್ಷಣ, ಗ್ರಾಪಂಗಳನ್ನು ಜಾರಿಗೆ ತಂದರು. ಅಂದಿನ ಕಾಲದಲ್ಲೇ ಅಸ್ಪೃಶ್ಯತೆಯನ್ನು ಕ್ರಿಮಿನಲ್ ಅಪರಾಧವೆಂದು ಘೋಷಿಸಿದ್ದರು ಎಂದು ತಿಳಿಸಿದರು.

ಪರಿಸರ ನಾಶದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ



ಸಾರ್ವಜನಿಕರಿಗೆ ಸಸಿಗಳನ್ನು ಪರಿಸರ ಜಾಗೃತಿ ವೇದಿಕೆಯ ತಾಲೂಕು ಅಧ್ಯಕ್ಷ ಅಣ್ಣೂರು ಸತೀಶ್ ವಿತರಿಸಿದರು.

ಭಾರತೀನಗರ, ಜೂ.7– ಪರಿಸರ ರಕ್ಷಿಸದ ಪರಿಣಾಮ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಪರಿಸರ ಜಾಗೃತಿ ವೇದಿಕೆ ತಾಲೂಕು ಅಧ್ಯಕ್ಷ ಅಣ್ಣೂರು ಸತೀಶ್ ತಿಳಿಸಿದರು.

ಇಲ್ಲಿನ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಸಾರ್ವಜನಿಕರಿಗೆ ಸಸಿಗಳನ್ನು ವಿತರಿಸಿ ಮಾತನಾಡಿದ ಅವರು, ಭೂಮಿ ಎಂಬ ಪುಸ್ತಕ ಮತ್ತು ನಮ್ಮ ಬದುಕಿಗೆ ಆಸರೆಯಾಗಿರುವ ಭೂಮಿ ಮತ್ತು ಪರಿಸರದ ಮೇಲೆ ಮನುಷ್ಯನ ನಿರಂತರ ಅಕ್ರಮಣ, ದುಬ್ಬಾಳಿಕೆ-ದೌರ್ಜನ್ಯ ನಡೆಯುತ್ತಿರುವುದರಿಂದ ಜಾಗತಿಕ ತಾಪಮಾನದಲ್ಲಿ ವ್ಯತ್ಯಯ ಉಂಟಾಗುತ್ತಿದೆ. ಭೂ ಮಾಲಿನ್ಯ, ಜಲ ಮಾಲಿನ್ಯ, ವಾಯು ಮಾಲಿನ್ಯವನ್ನು ತಡೆಗಟ್ಟಬೇಕಾದರೆ ಪರಿಸರ ಸಂರಕ್ಷಣೆ ಅಗತ್ಯವಾಗಿದೆ ಎಂದರು.

ಆಸ್ಪರ್ ಜಿ.ಮಾದೇಗೌಡ ಆಸ್ಪತ್ರೆ ಆಡಳಿತಾಧಿಕಾರಿ ಗಣೇಶ್ ಪ್ರಭು ಮಾತನಾಡಿ, ಮಾನವನ ದುರಾಸೆಯಿಂದಾಗಿ ಕಾಡು ಅವಸಾನದ ಅಂಚು ತಲುಪಿ ಕಾಡು ಪ್ರಾಣಿಗಳು ನಾಡಿನತ್ತ ಮುಖ ಮಾಡುತ್ತಿರುವುದು ಆತಂಕಕಾರಿ ವಿಚಾರ. ಕಾಡು ಕಣ್ಮರೆಯಾದಂತೆ ಪ್ರಕೃತಿ ವಿಕೋಪದಂತಹ ಘಟನೆಗಳು ಮರುಕಳಿಸಿ ಅಪಾರ ಪ್ರಮಾಣದ ಸಾವು ನೋವು ಸಂಭವಿಸುತ್ತಿರುವ ಉದಾಹರಣೆಗಳಿದ್ದು ಇದನ್ನರಿತು ಪ್ರತಿಯೊಬ್ಬರೂ ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕೆಂದರು.

ನಿವೃತ್ತ ಪ್ರಾಧ್ಯಾಪಕ ಬಿ.ಎಸ್. ಬೋರೇಗೌಡ ಮಾತನಾಡಿ, ಕಾಡನ್ನು ಕಡಿದು ಬೃಹತ್ ಕಟ್ಟಡಗಳು, ರಸ್ತೆ, ನಗರೀಕರಣವನ್ನಾಗಿ ಮಾಡುವ ಮೂಲಕ ಮಾನವ ತನ್ನದೇ ಆದ ಅಲೋಚನೆಯಲ್ಲಿ ಮುಖ ಮಾಡಿದ್ದು, ಇದರಿಂದಾಗಿ ಅರಣ್ಯ ವಿನಾಶದತ್ತ ಮುಖ ಮಾಡಿದೆ ಎಂದರು. ಸ್ಫೂರ್ತಿ ಲಯನ್ಸ್ ಸಂಸ್ಥೆಯ ಅಧ್ಯಕ್ಷ ಕೆ.ಎಲ್.ಶಿವರಾಮು ಮಾತನಾಡಿದರು. ಇದೇ ವೇಳೆ ಡಾ.ಮೌರ್ಯ, ನಿವೃತ್ತ ಶಿಕ್ಷಕ ಪುಟ್ಟರಾಮರಾಜೇ ಅರಸು, ಚನ್ನಶೆಟ್ಟಿ, ಚಿಕ್ಕಹುಚ್ಚೇಗೌಡ, ರಘು ವೆಂಕಟೇಗೌಡ, ನಂದೀಶ್ ಸೇರಿದಂತೆ ಹಲವರಿದ್ದರು.

ಜೂ.22, ತಾಲೂಕು ಮಟ್ಟದ ಬೃಹತ್ ಜೆಡಿಎಸ್ ಕಾರ್ಯಕರ್ತರ ಸಮಾವೇಶ



ಸಭೆಯಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಎಂ.ಮೋಹನ್ ಮಾತನಾಡಿದರು.

ಕೆ.ಆರ್.ಪೇಟೆ, ಜೂ.7– ಶಾಸಕ ಹೆಚ್.ಟಿ.ಮಂಜು ಅವರನ್ನು ಮುಂಬರುವ 2028ರ ಚುನಾವಣೆಯಲ್ಲಿ ಗೆಲ್ಲಿಸುವ ಮೂಲಕ ಮತ್ತೊಮ್ಮೆ ಶಾಸಕರನ್ನಾಗಿ ಮಾಡುವುದು ತಾಲೂಕಿನ ನಿಷ್ಠಾವಂತ ಜೆಡಿಎಸ್ ಕಾರ್ಯಕರ್ತರ ಗುರಿಯಾಗಿದೆ. ಹೀಗಾಗಿ ಈಗಿನಿಂದಲೇ ಪಕ್ಷ ಸಂಘಟಿಸುವ ಸಲುವಾಗಿ ಜೂ.22ರಂದು ಪಟ್ಟಣದ ಪುರಸಭಾ ಆವರಣದ ಮೈದಾನದಲ್ಲಿ ತಾಲೂಕು ಮಟ್ಟದ ಬೃಹತ್ ಜೆಡಿಎಸ್ ಕಾರ್ಯಕರ್ತರ ಸಮಾವೇಶ ಆಯೋಜಿಸಲಾಗಿದೆ ಎಂದು ತಾಲೂಕು ಜೆಡಿಎಸ್ ಅಧ್ಯಕ್ಷ ಮಲ್ಲೇನಹಳ್ಳಿ ಎಂ.ಮೋಹನ್ ತಿಳಿಸಿದರು.

ಪಟ್ಟಣದ ಜೆಡಿಎಸ್ ಕಚೇರಿ ಆವರಣದಲ್ಲಿ ನಡೆದ ಜೆಡಿಎಸ್ ಕಾರ್ಯಕರ್ತರ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಾವೇಶವನ್ನು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ. ರಮೇಶ್, ಶಾಸಕರಾದ ಜಿ.ಡಿ.ಹರೀಶ್ ಗೌಡ, ಸಿ.ಎನ್.ಬಾಲಕೃಷ್ಣ ಸ್ವರೂಪ್ ಪ್ರಕಾಶ್, ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ, ಡಾ.ಕೆ.ಅನ್ನದಾನಿ ಸೇರಿದಂತೆ ವಿವಿಧ ಗಣ್ಯರು ಭಾಗವಹಿಸುವರು. ಪ್ರತಿ ಗ್ರಾಮದಿಂದ 100 ಮಂದಿ ಕಾರ್ಯಕರ್ತರಂತೆ 400 ಹಳ್ಳಿಗಳಿಂದ 40 ಸಾವಿರ ಮಂದಿ ಭಾಗವಹಿಸಲಿದ್ದಾರೆ. ಆಗಮಿಸುವ ಎಲ್ಲರಿಗೂ ಸಸ್ಯಹಾರ, ಮಾಂಸಹಾರ ಊಟದ ವ್ಯವಸ್ಥೆ ಮಾಡಲಾಗುವುದು. ಅಲ್ಲದೇ ಸಮಾವೇಶದಲ್ಲಿ ರೈತರಿಗೆ ತೆಂಗಿನ ಹಾಗೂ ವಿವಿಧ ಬಗೆಯ ಹೂ ಮತ್ತು ಹಣ್ಣಿನ ಸಸಿಗಳನ್ನು ವಿತರಿಸಲಾಗುವುದು. ಸಮಾವೇಶವನ್ನು ಮುಂಬರುವ ಜಿಪಂ, ತಾಪಂ, ಗ್ರಾಪಂ, ಪುರಸಭೆ ಸೇರಿದಂತೆ 2028ರ ವಿಧಾನಸಭಾ ಚುನಾವಣೆ ಗಮನದಲ್ಲಿ ಇಟ್ಟುಕೊಂಡು ಆಯೋಜಿಸಲಾಗಿದೆ ಎಂದರು.

ಸಭೆಯಲ್ಲಿ ತಾಲೂಕು ಜೆಡಿಎಸ್ ಕಾರ್ಯಾಧ್ಯಕ್ಷ ಮಹಾದೇವೇಗೌಡ, ಗೌರವಾಧ್ಯಕ್ಷ ತೋಟಪ್ಪಶೆಟ್ಟಿ, ಜೆಡಿಎಸ್ ರಾಜ್ಯ ಪರಿಷತ್ ಸದಸ್ಯ ರಘು, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕೆ.ಬಿ.ನಾಗೇಶ್, ಜಿಲ್ಲಾ ದಿಶಾ ಕಮಿಟಿ ಸದಸ್ಯ ನರಸನಾಯಕ್, ಎಪಿಎಂಸಿ ಮಾಜಿ ಅಧ್ಯಕ್ಷ ಮಲ್ಲೇಶ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹೆಚ್.ಕೆ. ಅಶೋಕ್, ಚಂದ್ರೇಗೌಡ, ರಾಮಚಂದ್ರು, ನಂಜಪ್ಪ, ತಾಲೂಕು ಜೆಡಿಎಸ್ ರೈತ ಮೋರ್ಚಾ ಅಧ್ಯಕ್ಷ ಹುಲ್ಲೇಗೌಡ, ತಾಲೂಕು ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ವಿ.ಎಸ್.ಧನಂಜಯಕುಮಾರ್, ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಎಂ.ಆರ್.ಮನು, ತಾಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ಉಪಾಧ್ಯಕ್ಷೆ ಲತಾ, ನಿರ್ದೇಶಕರಾದ ಎಸ್.ಎಲ್.ಮೋಹನ್, ಎನ್.ಕೆ.ದಿಲೀಪ್ ಕುಮಾರ್, ಕೆ.ಬಿ.ಮಧು, ಹೆಚ್.ಟಿ.ಲೋಕೇಶ್, ದಿನೇಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಧನಂಜಯ, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರೇಖಾ, ಪ್ರಧಾನ ಕಾರ್ಯದರ್ಶಿ ರತಿ, ತಾಲೂಕು ಜೆಡಿಎಸ್ ಎಸ್‌ಸಿ. ಘಟಕದ ಅಧ್ಯಕ್ಷ ನರಸಿಂಹ, ಪ್ರಧಾನ ಕಾರ್ಯದರ್ಶಿ ಆರ್.ಟಿ.ಉಮೇಶ್, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಮೀಸೆ ಮಹಾದೇವೇಗೌಡ, ಹೋಬಳಿ ಘಟಕಗಳ ಜೆಡಿಎಸ್ ಅಧ್ಯಕ್ಷ ರವಿಕುಮಾರ್ ಭಾಗವಹಿಸಿದ್ದರು.

ಒಂದನೇ ಪುಟದಿಂದ

ನಾನು ಎರಡೇ ವರ್ಷ ಸಿಎಂ ಆಗಿರಬೇಕೇ...!?

ಸಿಎಂ ಮನೆ ಸಮೀಪ ಮಾಟ–ಮಂತ್ರ ಮಾಡಿರುವ ಶಂಕೆ

ಬೆಂಗಳೂರು, ಜೂ.7– ಸದಾಶಿವನಗರದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮನೆಯ ಸಮೀಪದಲ್ಲಿ ಕಿಡಿಕೇಡಿಗಳು ಮಾಟ, ಮಂತ್ರ ಮಾಡಿರುವ ಶಂಕೆ ವ್ಯಕ್ತವಾಗಿದೆ. ಮುಖ್ಯಮಂತ್ರಿಗಳ ನಿವಾಸದ ಹಿಂಭಾಗದಲ್ಲಿರುವ ಜಿಬಿಎ ಮೈದಾನದ ಮುಂಭಾಗ ಮಾಟ–ಮಂತ್ರಕ್ಕೆ ಬಳಸುವ ಸಾಮಗ್ರಿಗಳು ಕಂಡುಬಂದಿವೆ. ವೃತ್ತಾಕಾರ ಹಾಕಿ, ಕೋಳಿ ಕೊಯ್ದು, ನಿಂಬೆಹಣ್ಣುಗಳನ್ನು ಇಟ್ಟು ಹೋಗಲಾಗಿದೆ. ವಾಮಾಚಾರ ನಡೆಸಿರುವ ಅನುಮಾನ ವ್ಯಕ್ತವಾಗಿದ್ದು, ಜನರು ಓಡಾಡುವ ಜಾಗದಲ್ಲಿಯೇ ದುಷ್ಕರ್ಮಿಗಳು ಈ ಕೃತ್ಯವೆಸಗಿದ್ದಾರೆ. ಹಾಗಾಗಿ ಇಲ್ಲಿ ಜನ ಓಡಾಡಲು ಆತಂಕಪಡುವ ಸನ್ನಿವೇಶ ಸೃಷ್ಟಿಯಾಗಿದೆ.

ಕೃತಜ್ಞತಾ ಯಾತ್ರೆ: ಮುಖ್ಯಮಂತ್ರಿಯಾಗಿ ಮೊದಲ ಬಾರಿಗೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರನ್ನು ಮೊದಲಿಗೆ ಹಾರೋಹಳ್ಳಿಯಲ್ಲಿ ಶಾಸಕ ಇಕ್ಬಾಲ್ ಹುಸೇನ್, ಮಾಜಿ ಶಾಸಕ ಕೆ.ರಾಜು ಸೇರಿದಂತೆ ಮುಖಂಡರು ಸ್ವಾಗತಿಸಿದರು. ಅಲ್ಲಿಂದ ತೆರೆದ ವಾಹನದಲ್ಲಿ ಕೃತಜ್ಞತಾ ಯಾತ್ರೆ ಆರಂಭಿಸಿದ ಡಿಕೆಶಿಗೆ ಮಾರ್ಗದುದ್ದಕ್ಕೂ ಹೂಮಳೆ ಸುರಿಸಿ, ಕನಕಪುರದ ತುಂಗಣಿ ಗೇಟ್ ಬಳಿ ಬೃಹತ್ ಸೇಬು ಹಾರಗಳನ್ನು ಹಾಕಿ, ಅದ್ದೂರಿಯಾಗಿ ಅಭಿನಂದಿಸಲಾಯಿತು.

ವೈದ್ಯಕೀಯ ಕಾಲೇಜು: ಈ ವೇಳೆ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕನಕಪುರ ತಾಲೂಕಲ್ಲಿ ಮೆಡಿಕಲ್ ಕಾಲೇಜು ಮಾಡಬೇಕೆಂಬ ಆಸೆ ನನ್ನದು. ಇದು ಸದ್ಯದಲ್ಲೇ ಸಾಕಾರಗೊಳ್ಳಲಿದೆ. ತಾಲೂಕು ಮಟ್ಟದಲ್ಲಿ ಮೆಡಿಕಲ್ ಕಾಲೇಜ್ ಸ್ಥಾಪನೆಯಾಗುತ್ತಿರುವುದು ಇದೇ ಮೊದಲು. ಇಂತಹ ಐತಿಹಾಸಿಕ ಕಾರ್ಯಕ್ಕೆ ಇಂದು ನನ್ನ ಕೈಯಲ್ಲೇ ಭೂಮಿ ಪೂಜೆ ಆಗಿದೆ. ನಮ್ಮ ಜನರಿಗೆ ಆಶ್ರಯ, ಆರೋಗ್ಯ, ಅಕ್ಷರ ಸಿಗಬೇಕು. ಬೆಂಗಳೂರಿಗೆ ವಲಸೆ ಹೋಗುವುದನ್ನು ತಪ್ಪಿಸಬೇಕು. ಎಲ್ಲರ ತಲೆ ಮೇಲೆ ಸೂರಿರಬೇಕು. ಹಾರೋಹಳ್ಳಿಯಲ್ಲಿ ಇಂಡಸ್ಟ್ರಿಯಲ್ ಟೌನ್ ಇದೆ. ಖಾಸಗಿ ಕಂಪನಿಗಳು ಸ್ಥಳೀಯರಿಗೆ ಉದ್ಯೋಗ ನೀಡಬೇಕು. ಆದರೆ ಯಾರೂ ಯೂನಿಯನ್ ಮಾಡಿಕೊಂಡು ಅನಗತ್ಯವಾಗಿ ಪ್ರತಿಭಟನೆ ಮಾಡುವ ಮೂಲಕ ವ್ಯವಸ್ಥೆಯನ್ನು ಹದಗೆಡಿಸಬಾರದು ಎಂದು ಹೇಳಿದರು.

ನುಡಿದಂತೆ ನಡೆದಿದ್ದಾರೆ: ಸಿದ್ದರಾಮಯ್ಯ ಅವರು ನುಡಿದಂತೆ ನಡೆದಿದ್ದಾರೆ. ಬಹಳ ಸರಳತೆಯಿಂದ ಅಧಿಕಾರ ಬಿಟ್ಟುಕೊಟ್ಟಿದ್ದಾರೆ. ನಾವಿಬ್ಬರೂ ಒಟ್ಟಾಗಿ ಕೆಲಸ ಮಾಡಿ 2028 ರಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಬೇಕು. ನನಗೆ ಜಾತಿ, ಧರ್ಮದ ಬಗ್ಗೆ ನಂಬಿಕೆ ಇಲ್ಲ. ನಿಮ್ಮ ಪ್ರೀತಿ, ವಿಶ್ವಾಸವೇ ಮುಖ್ಯ. ಎಲ್ಲರನ್ನೂ ಸಮಾನವಾಗಿ ನೋಡುತ್ತೇನೆ. ಆದರೆ ನೀವು ಕ್ಷುಲ್ಲಕ ವಿಚಾರಗಳಿಗೆ ಗಲಾಟೆ ಮಾಡಿಕೊಳ್ಳಬೇಡಿ. ಎಲ್ಲರು ತಾಳ್ಮೆಯಿಂದ, ಸಮಾನತೆಯಿಂದ ಒಟ್ಟಿಗೆ ಮುಂದು ವರಿಯಬೇಕು. ನಮ್ಮ ಸರ್ಕಾರದ ಪಂಚ ಗ್ಯಾರಂಟಿಯನ್ನು ವಿಶ್ವವೇ ಹೊಗಳುತ್ತಿದೆ. ಎಸ್‌ಐಆರ್ ಪ್ರಕಾರ ಅರ್ಜಿ ಹಾಕಿ ಮತದಾರರ ಪಟ್ಟಿಗೆ ಸೇರಿಸಬೇಕು. ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದರೂ ಕನಕಪುರದಲ್ಲಿ ಮತದಾನದ ಹಕ್ಕು ಉಳಿಸ್ಕೊಳ್ಳಿ ಎಂದು ತಿಳಿಸಿದರು.

ನಿಮ್ಮ ಪ್ರಾರ್ಥನೆ ಫಲಿಸಿದೆ: ಇದಕ್ಕೂ ಮುನ್ನ ಹಾರೋಹಳ್ಳಿಯಲ್ಲಿ ಮಾತನಾಡಿದ ಸಿಎಂ ಡಿಕೆಶಿ, ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿಯ ಮೂಲಕ ಯಾತ್ರೆ ಶುರು ಮಾಡಿದ್ದೇನೆ. ಮೊದಲು ಕನಕಪುರ ತಾಲೂಕು ಭಾಗವಾಗಿದ್ದ ಹಾರೋಹಳ್ಳಿ ಈಗ ಪ್ರತ್ಯೇಕವಾಗಿದೆ. ಇಲ್ಲಿನ ತಾಯಿ ಚಾಮುಂಡೇಶ್ವರಿ ಪಾದಗಳಿಗೆ ನಮಸ್ಕರಿಸಿದ್ದೇನೆ. ಚಾಮುಂಡೇಶ್ವರಿ ನಮ್ಮ ನಾಡಿನ ದೇವತೆ. ನಾನು ಇನ್ನೊಂದು ದಿನ ಮೈಸೂರಿನ ಚಾಮುಂಡೇಶ್ವರಿ ದರ್ಶನ ಪಡೆಯುತ್ತೇನೆ. ಇಂದು ಇಲ್ಲಿನ ಚಾಮುಂಡಿಯ ದೇವಸ್ಥಾನಕ್ಕೆ ಹೋಗಿ ಯಾತ್ರೆಯನ್ನು ಆರಂಭಿಸಿದ್ದೇನೆ. ಈ ಜಿಲ್ಲೆಯ ಮಗನಾಗಿ ನಿಮ್ಮ ಮುಂದೆ ನಿಂತಿದ್ದೇನೆ. ನೀವೆಲ್ಲಾ ಪ್ರಾರ್ಥನೆ ಮಾಡಿದ್ದೀರಿ, ಹರಕೆ ಹೊತ್ತಿದ್ದೀರಿ, ನೋವು ಪಟ್ಟಿದ್ದೀರಿ. ಚಾಮುಂಡಿ ಬೆಟ್ಟದಲ್ಲಿ ನಿಂತು ಪ್ರಯತ್ನ ವಿಫಲವಾಗಬಹುದು, ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದಿದ್ದೆ. ನೀವೆಲ್ಲಾ ನನ್ನನ್ನು ವಿಧಾನಸೌಧದ ಮೂರನೇ ಮಹಡಿಯಲ್ಲಿ ಕೂರಿಸಲು ಪ್ರಾರ್ಥನೆ ಮಾಡಿದ್ದಿರಿ. ಆ ಪ್ರಾರ್ಥನೆಯು ಫಲವಾಗಿ ನಾನು ಮುಖ್ಯಮಂತ್ರಿ ಆಗಿ ಆಯ್ಕೆಯಾಗಿದ್ದೇನೆ ಎಂದು ಧನ್ಯವಾದ ಸಮರ್ಪಿಸಿದರು.

ವ್ಯವಸಾಯ ಬಿಡಬೇಡಿ: ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮಾಡಿದಾಗ ಎಲ್ಲರೂ ನಗುತ್ತಿದ್ದರು. ಆದರೆ ಜಿಲ್ಲೆಯ ಹೆಸರು ಬದಲಾದ ಮೇಲೆ ಇಲ್ಲಿನ ಜಮೀನಿನ ಬೆಲೆಯೂ ಹೆಚ್ಚಾಯಿತು. ನಾನು ಹೊಸದಾಗಿ ಏನೂ ಮಾಡಿಲ್ಲ. ದೊಡ್ಡ ಆಲಹಳ್ಳಿ ಕೆಂಪೇಗೌಡ ಶಿವಕುಮಾರ್ ಹೆಸರನ್ನು ಬದಲಾಯಿಸಲು ಆಗುತ್ತಾ. ನಾವೆಲ್ಲರೂ ಬೆಂಗಳೂರು ಜಿಲ್ಲೆಯವರು, ಹೀಗಾಗಿ ಆ ಹೆಸರನ್ನು ಮರು ನಾಮಕಾರಣ ಮಾಡಿದ್ದೇನೆ. ನಾನು ವೈದ್ಯಕೀಯ ಶಿಕ್ಷಣ ಸಚಿವನಾಗಿದ್ದಾಗ ಇಲ್ಲಿಗೆ ದಯಾನಂದ್ ಸಾಗರ್ ಮೆಡಿಕಲ್ ಕಾಲೇಜು ತಂದೆ. ಈಗ ತುಂಗಣಿ ಬಳಿ ಸರಕಾರಿ ಮೆಡಿಕಲ್ ಕಾಲೇಜು ಆರಂಭಿಸುತ್ತಿದ್ದೇವೆ. ಎಲ್ಲಾ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡುತ್ತಿದ್ದೇವೆ. ಯಾರು ವ್ಯವಸಾಯ ಬಿಡಬೇಡಿ. ತರಕಾರಿ, ಹೂಗಳನ್ನು ಬೆಳೆಯಬೇಕು. ನಮ್ಮ ರೈತರಿಗೆ ಸಂಬಳ ಇಲ್ಲ, ಪಿಂಚಣಿ ಇಲ್ಲ. ಸಿಲ್ಕ್ ಮತ್ತು ಮಿಲ್ಕ್ ನಮ್ಮ ತಾಲೂಕಿನ ದೊಡ್ಡ ಶಕ್ತಿ. ಕೈಗಾರಿಕೆ ಕೂಡ ಇಲ್ಲಿ ಬೆಳೆಯುತ್ತಿದೆ. ಬೆಂಗಳೂರಿನಲ್ಲಿ ಸಿಗುವಂತಹ ಶಿಕ್ಷಣವೇ ನಮ್ಮ ಮಕ್ಕಳಿಗೂ ಸಿಗುವಂತೆ ಯೋಜನೆಗಳನ್ನು ಮಾಡುತ್ತಿದ್ದೇನೆ ಎಂದರು.

ಅಧಿಸೂಚನೆ: ಜೂ.8ರಿಂದ ಅರ್ಜಿ ಸಲ್ಲಿಕೆ

ಒಂದು ಬಾರಿಗೆ ವಯೋಮಿತಿ ಸಡಿಲಿಕೆ: ಪಿಯುಸಿ ಅಥವಾ ಸಿಬಿಎಸ್‌ಇ, ಐಎಸ್‌ಸಿ, ಎನ್‌ಐಓಎಸ್ ಹಾಗೂ ಮೂರು ವರ್ಷಗಳ ಡಿಪ್ಲೊಮಾ ಸೇರಿದಂತೆ ಸರ್ಕಾರದ ನಿಯಮಾವಳಿಗಳನ್ವಯ ತತ್ಸಮಾನ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಜನ್ಮ ದಿನಾಂಕದ ಆಧಾರದ ಮೇಲೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಸರ್ಕಾರವು ಒಂದು ಬಾರಿಗೆ ಅನ್ವಯ ವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆ ನೀಡಿದ್ದು, ಇದರನ್ವಯ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ 33 ವರ್ಷ, ಎಸ್‌ಸಿ/ಎಸ್‌ಟಿ ಮತ್ತು ಹಿಂದು ಳಿದ ವರ್ಗಗಳ ಅಭ್ಯರ್ಥಿಗಳಿಗೆ 35 ವರ್ಷ ಹಾಗೂ ಬುಡಕಟ್ಟು ಅಭ್ಯರ್ಥಿಗಳಿಗೆ ಗರಿಷ್ಠ 38 ವರ್ಷಗಳ ವಯೋ ಮಿತಿಯನ್ನು ನಿಗದಿಪಡಿಸಲಾಗಿದೆ.

ಜೂನ್ 8 ರಿಂದ ಅರ್ಜಿ ಸಲ್ಲಿಕೆ: ಅರ್ಜಿ ಸಲ್ಲಿಕೆ ಪ್ರಕ್ರಿಯೆಯು ಜೂ.8ರಿಂದ ಅಧಿಕೃತವಾಗಿ ಪ್ರಾರಂಭವಾಗಲಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜುಲೈ 3 ಕೊನೆಯ ದಿನಾಂಕವಾಗಿರುತ್ತದೆ. ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್ https://cetonline.karnataka.gov.in/kea/ ಲಿಂಕ್ ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬೇಕಿದ್ದು, ಹೆಚ್ಚಿನ ಮಾಹಿತಿ ಹಾಗೂ ತಾಂತ್ರಿಕ ನೆರವಿಗಾಗಿ ಪ್ರಾಧಿಕಾರದ ಮಾಹಿತಿ ಕೇಂದ್ರದ ದೂರವಾಣಿ ಸಂಖ್ಯೆ:080–23460460 ಅನ್ನು ಸಂಪರ್ಕಿಸಬಹುದು ಅಥವಾ ಅಧಿಕೃತ 'ಎಕ್ಸ್' ಖಾತೆ @KEA_KAR NATAKA ವೀಕ್ಷಿಸಬಹುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದ್ದಾರೆ.

ಸಿಲಿಂಡರ್ ದರ 29 ರೂ. ಹೆಚ್ಚಳ

ಜಾಗತಿಕ ಇಂಧನ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಹೊಸ ದರಗಳು ಜೂನ್ 7 ರಿಂದಲೇ ಜಾರಿಗೆ ಬಂದಿವೆ. ದೆಹಲಿ ಯಲ್ಲಿ ಸಿಲಿಂಡರ್ ದರ 942 ರೂ.ಗೆ ತಲುಪಿದೆ. ಇಷ್ಟಾದರೂ ತೈಲ ಕಂಪನಿಗಳಿಗೆ ಪ್ರತಿ ಸಿಲಿಂಡರ್ ಮೇಲೆ ಇನ್ನು 700 ರೂ. ನಷ್ಟವಾಗುತ್ತಿದೆ ಎಂದು ಪೆಟ್ರೋಲಿಯಂ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದ್ದಾರೆ.

ಮೈಸೂರಿನ ಯುವತಿ ಬಲಿ

ಬೆಳಿಗ್ಗೆ 6.30ರ ಸಮಯದಲ್ಲಿ ಸ್ನಾನ ಮಾಡಲು ಬಾತ್ ರೂಮಿಗೆ ತೆರಳಿದ್ದ ಸಂದರ್ಭ ದಲ್ಲಿ ಗ್ಯಾಸ್ ಗೀಸರ್‌ನಿಂದ ವಿಷಾನಿಲ ಸೋರಿಕೆಯಾಗಿ ಅವರು ಸ್ಥಳದಲ್ಲಿಯೇ ಸಾವಿಗೀಡಾಗಿದ್ದಾರೆ. ಬಾತ್ ರೂಮ್‌ನಲ್ಲಿ ವೆಂಟಿಲೇಷನ್ ಕಿಟಕಿ ಇಲ್ಲದಿರುವುದೇ ಈ ಅವಘಡಕ್ಕೆ ಕಾರಣ ಎಂದು ಹೇಳಲಾಗುತ್ತಿದೆ. ಮೃತಳ ತಂದೆ ಎಸ್.ಜಗನ್ನಾಥ್ ಅವರು ನೀಡಿದ ದೂರನ್ನು ಆಧರಿಸಿ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸೋಮವಾರಪೇಟೆ ಸರಕಾರಿ ಆಸ್ಪತ್ರೆಯಲ್ಲಿ ಮರಣೋ ತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಯಿತು.

ರೌಡಿ ಸ್ಕ್ವಾಡ್ ರಚನೆ

'ಜೀರೋ ಟಾಲರೆನ್ಸ್' ನೀತಿ : ರೌಡಿಸಂ ಹಾಗೂ ಸಮಾಜ ವಿರೋಧಿ ಚಟುವಟಿಕೆಗಳ ವಿರುದ್ಧ 'ಜೀರೋ ಟಾಲರೆನ್ಸ್' ನೀತಿ ಅನುಸರಿಸುವಂತೆ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಬೆದರಿಕೆ, ಸುಲಿಗೆ, ಗ್ಯಾಂಗ್ ಚಟುವಟಿಕೆ ಸೇರಿದಂತೆ ಯಾವುದೇ ಕಾನೂನುಬಾಹಿರ ಕೃತ್ಯಗಳ ವಿರುದ್ಧ ತ್ವರಿತ ಹಾಗೂ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಲಾಗಿದೆ.

ಈಗಾಗಲೇ ನಮ್ಮ ವ್ಯಾಪ್ತಿಗೆ ಬರುವ 90 ಮಂದಿ ಕುಖ್ಯಾತ ರೌಡಿ ಚಲನವಲನದ ಬಗ್ಗೆ ನಿಗಾವಹಿಸಲಾಗಿದೆ. ನಗರ ಅಪರಾಧ ವಿಭಾಗದಲ್ಲಿರುವ ರೌಡಿ ಪ್ರತಿಬಂಧಕ ದಳ ತೀವ್ರ ನಿಗಾ ವಹಿಸಿದೆ. ಎಲ್ಲಾ ಠಾಣೆಗಳಲ್ಲಿ ರೌಡಿ ಸ್ಕ್ವಾಡ್ ಆರಂಭಿಸುವುದರಿಂದ ಅನುಕೂಲಕರವಾಗಲಿದೆ.



-ಮೊಹಮ್ಮದ್ ಶರೀಫ್ ರಾವುತರ್, ಎಸಿಪಿ, ನಗರ ಅಪರಾಧ ವಿಭಾಗ

ಪೊಲೀಸರು...!!

ಯಾರೋ ನಾಗರಿಕರು ಪಾಲಿಕೆಯ ಕಸದ ವಾಹನಕ್ಕೆ ಮಣ್ಣು ತುಂಬಿದ್ದ ಈ ಪ್ಲಾಸ್ಟಿಕ್ ಚೀಲವನ್ನು ಹಾಕಿದ್ದರು. ರಸ್ತೆಯಲ್ಲಿ ವಾಹನ ಚಲಿಸುವಾಗ ಅದು ಹೇಗೋ ಜಾರಿ ರಸ್ತೆಗೆ ಬಿದ್ದಿದೆ. ಆ ಮನೆಯವರು ಸಂಜೆ ವೇಳೆಗೆ ಆ ಚೀಲ ನೋಡಿ ಆತಂಕಗೊಂಡಿದ್ದರು. ಕೊನೆಗೆ ಈ ಪ್ರಸಂಗ ಸುಖಾಂತ್ಯ ಕಂಡಿದ್ದರಿಂದ ಆ ಮನೆಯವರು ಮಾತ್ರವಲ್ಲದೇ, ಪೊಲೀಸರು ನಿಟ್ಟುಸಿರು ಬಿಡುವಂತಾಯಿತು. ಅಲ್ಲದೆ ಈ ಪ್ರಸಂಗ ಕೇಳಿದವರೆಲ್ಲರೂ ನಗಡಲ್ಲಿ ತೇಲುವಂತಾಯಿತು.

ಪರಿಷತ್‌ಗೆ ಬಿಜೆಪಿ ಅಭ್ಯರ್ಥಿಗಳು

ಅವರು ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಸಮಾಜಸೇವೆ, ರಾಜ ಕೀಯ ವಲಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ನಾಡು, ನುಡಿ, ಭಾಷೆ, ಸಾಮಾಜಿಕ ನ್ಯಾಯ ಹಾಗೂ ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ಹೋರಾಟ ನಡೆಸಿದ್ದಾರೆ. 2015 ಮತ್ತು 2021ರ ವಿಧಾನಪರಿಷತ್ ಚುನಾವಣೆಯಲ್ಲಿ ಮೈಸೂರು–ಚಾಮರಾಜನಗರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಅಲ್ಪ ಮತಗಳ ಅಂತರದಿಂದ ಪರಾಜಿತರಾಗಿದ್ದಾರೆ. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷರಾಗಿ, ದಸರಾ ಉತ್ಸವ ಉನ್ನತ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಪಕ್ಷದ ವಿವಿಧ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿ, ಪಕ್ಷ ಸಂಘಟನೆಗೆ ಶ್ರಮಿಸಿದ್ದು, ಸದ್ಯ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಒಂದು ವಾರ ಭಾರೀ ಮಳೆ ಮುನ್ಸೂಚನೆ

ಬೆಂಗಳೂರು, ಜೂ.7– ಕರ್ನಾಟಕದಲ್ಲಿ ಮುಂಗಾರು ಚುರುಕುಗೊಂಡಿದ್ದು, ಇಂದಿನಿಂದ ಏಳು ದಿನಗಳ ಕಾಲ ರಾಜ್ಯದ ಹಲವೆಡೆ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂ ಚನೆ ನೀಡಿದೆ. ಅದರಲ್ಲೂ ವರುಣನ ಅಬ್ಬರ ವಿಪರೀತವಾಗಿರ ಬಹುದಾದ ಕರಾವಳಿ ಮತ್ತು ಮಲೆನಾಡು ಭಾಗಗಳಿಗೆ 'ರೆಡ್ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಮುಂದಿನ 2–3 ದಿನಗಳ ಕಾಲ ಧಾರಾಕಾರ ಮಳೆಯಾಗುವ ಮುನ್ಸೂ ಚನೆ ಇದೆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗಂಟೆಗೆ 30–40 ಕಿ.ಮೀ ವೇಗದಲ್ಲಿ ಬಿರುಗಾಳಿ ಬೀಸಲಿದ್ದು, 204.5 ಮಿ.ಮೀ ಗಿಂತ ಹೆಚ್ಚು ಮಳೆಯಾಗುವ ನಿರೀಕ್ಷೆ ಇದೆ. ಉತ್ತರ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರಿನಲ್ಲಿ ಆರೆಂಜ್ ಅಲರ್ಟ್ ಮುಂದುವರಿಯಲಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ತುಮಕೂರು ಭಾಗದಲ್ಲಿಯೂ ಗುಡುಗು ಸಹಿತ ಸಾಧಾರಣದಿಂದ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಜೂನ್ 12 ರವರೆಗೆ ಹಗುರದಿಂದ ಸಾಧಾರಣ ಹಾಗೂ ಕೆಲವು ಕಡೆ ಭಾರಿ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮುಂದಿನ ಕೆಲವು ದಿನಗಳು ಮೋಡ ಕವಿದ ವಾತಾವರಣವಿದ್ದು, ಸಂಜೆ ಅಥವಾ ರಾತ್ರಿ ವೇಳೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಸದಾ ಚಿರಸ್ಮರಣೀಯ

- ಶ್ರೀಯುತರ ಜಯಂತಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಸ್ಮರಣೆ
- ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಟೀಂ ಮೈಸೂರು ವತಿಯಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು,ಜೂ.7(ಪಿಎಂ)– ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಹಾಗೂ ಅಭಿವೃದ್ಧಿ ಕಾರ್ಯಗಳು ಸದಾ ಚಿರಸ್ಮರಣೀಯ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಸ್ಮರಿಸಿದರು.

ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಮಾರಿಯಮ್ಮನ ಸಮುದಾಯ ಭವನದಲ್ಲಿ ಟೀಂ ಮೈಸೂರು ತಂಡದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142ನೇ ಜಯಂತಿ ಹಾಗೂ 2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇಗರ್ಡೆಯಾದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ನಮ್ಮಂತಹ ರಾಜಕೀಯ ಪ್ರತಿನಿಧಿಗಳಿಗೆ ನಾಲ್ವಡಿಯವರ ಸಮಾಜಮುಖಿ ಕಾರ್ಯಗಳು ಸ್ಫೂರ್ತಿದಾಯಕವಾದುದು ಮತ್ತು ಅನುಕರಣೀಯವಾದುದು. ಪ್ರತಿಭೆಗೆ ಮನ್ನಣೆ ನೀಡುವ ಇಂತಹ ವಿಶಿಷ್ಟ ಸಾಮಾಜಿಕ ಸೇವೆಯನ್ನು ಸಲ್ಲಿಸುತ್ತಿರುವ ಟೀಂ ಮೈಸೂರಿನ ಕಾರ್ಯವು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಆರ್.ನಾಗರಾಜ್ ಮಾತನಾಡಿ, ಪ್ರತಿಭೆ ಎಲ್ಲರಲ್ಲಿಯೂ ಇರುತ್ತದೆ. ಅದನ್ನು ಗುರುತಿಸಿ ಪ್ರೋತ್ಸಾಹ ನೀಡುವುದು ಮುಖ್ಯ. ವಿದ್ಯಾರ್ಥಿಗಳ ಸಾಧನೆ ಹಿಂದೆ ಶಿಕ್ಷಕರು, ಪೋಷಕರ ಶ್ರಮವೂ ಇರುತ್ತದೆ. ಅಂಕಗಳಿಗಿಂತ ವ್ಯಕ್ತಿತ್ವ ಮುಖ್ಯ, ಆತ್ಮವಿಶ್ವಾಸ ಹಾಗೂ ಜ್ಞಾನ ಪ್ರಧಾನವಾದುದು. ಪ್ರತಿಭೆಯನ್ನು ಸರಿಯಾಗಿ ಸದ್ಬಳಕೆ ಮಾಡಿಕೊಂಡಾಗ ಮಾತ್ರ ಯಶಸ್ಸು ಸಾಧ್ಯ. ಪೋಷಕರು ತಮ್ಮ ಮಕ್ಕಳನ್ನು ಬೇರೆ ಮಕ್ಕಳೊಂದಿಗೆ ಹೋಲಿಕೆ ಮಾಡಿ ಅಪಮಾನಿಸಬಾರದು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಬೋಧನೆ ನೀಡುವ ಕಾರ್ಯಕ್ರಮವನ್ನು ಆಯೋಜಿಸಬೇಕೆಂಬ ಸಲಹೆ ನೀಡಿದರಲ್ಲದೆ, ಅದಕ್ಕೆ ಅಗತ್ಯ ಸಹಕಾರ ತಾವು ನೀಡುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಟೀಂ ಮೈಸೂರು ತಂಡದ ಸಂಚಾಲಕ ಗೋಕುಲ್ ಗೋವರ್ಧನ್, ನಮ್ಮ ತಂಡ ಹಸಿರು ಮೈಸೂರು ಅಭಿಯಾನದಡಿಯಲ್ಲಿ ಗಿಡಗಳನ್ನು ನೆಟ್ಟು, ಪಾಲನೆ ಪೋಷಣೆಯನ್ನು ಮಾಡುತ್ತಿದೆ. ದೇಶಭಕ್ತರ ಜಯಂತಿ, ಯೋಧರ ಸ್ಮರಣೆ ಹಾಗೂ ಇನ್ನಿತರ ಉಪಯುಕ್ತ ಕಾರ್ಯಕ್ರಮಗಳ ಮೂಲಕ ಜನರಲ್ಲಿ ದೇಶಭಕ್ತಿ ಮೂಡಿಸುತ್ತಿದೆ ಎಂದರಲ್ಲದೆ, ಸಮಾಜಕ್ಕೆ ತಮ್ಮಿಂದಾದ ಸೇವೆಯನ್ನು ಮಾಡುವ ಮೂಲಕ ಸಮಾಜದ ಋಣವನ್ನು ತೀರಿಸಬೇಕೆಂಬ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿಯ 35 ಮತ್ತು ಪಿಯುಸಿಯ 17 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಪ್ರಕಾಶ್, ನಗರ ಪಾಲಿಕೆ ಮಾಜಿ ಸದಸ್ಯೆ ಛಾಯಾ ನವೀನ್, ಟೀಂ ಮೈಸೂರು ತಂಡದ ಸದಸ್ಯರಾದ ಹರೀಶ್ ವಿ.ಶೆಟಿ, ಕಿರಣ್ ಜೈರಾಮ್ ಗೌಡ, ಅನಿಲ್ ಜೈನ್, ಹರೀಶ್ ಬಾಬು, ಮುರಳಿ, ಶಿವಪ್ರಸಾದ್, ಅಭಿನಂದನ್, ಯತೀಶ್, ತ್ರಿಮೂರ್ತಿ, ದಾಮೋದರ್, ಮನೋಹರ್, ಸುಂದರ್ ಮೂರ್ತಿ, ಹರೀಶ್ ಇಟ್ಟಿಗೆಗೂಡು, ಶೇಖರ್, ಗಣೇಶ್ ಪ್ರಸಾದ್, ಹೇಮಂತ್, ಪ್ರಸನ್ನ ರಾಜ್ ಗುರು, ರಾಘವೇಂದ್ರ, ಬಸವರಾಜ್ ಬಳ್ಳಾರಿ, ತಿಲಕ್, ಹರೀಶ್ ಗೋಕುಲಂ, ಸಚಿನ್, ಕೃಷ್ಣ, ಮಂಜು ಬಂಕ್, ಹರೀಶ್ ಫಾರ್ಮ, ಜಯಂತ್, ವೈಶಾಖ್, ಸಹನಾ, ಸುಕೃತ, ನಂದಿನಿ, ಭಾಂದವ್ಯ, ಕಲ್ಯಾಣಿ ಮತ್ತಿತರರು ಹಾಜರಿದ್ದರು.

ದಲಿತ ಸಿಎಂ ಮಾಡುವ ಘೋಷಣೆಯೊಂದಿಗೆ ಮುಂದಿನ ಚುನಾವಣೆ ಎದುರಿಸಲು ಆಗ್ರಹ



ವಿ.ಶ್ರೀನಿವಾಸಪ್ರಸಾದ್ ಅಭಿಮಾನಿಗಳ ಬಳಗದ ಭರತ್ ರಾಮಸ್ವಾಮಿ ಮಾತನಾಡಿದರು.

ಮೈಸೂರು, ಜೂ.7(ಜಿಎ)–ದಲಿತರೊಬ್ಬರನ್ನು ಸಿಎಂ ಮಾಡುವುದಾಗಿ ಭರವಸೆ ನೀಡುವ ಮೂಲಕ ಕಾಂಗ್ರೆಸ್ ಪಕ್ಷ ಮುಂದಿನ ಚುನಾವಣೆ ಎದುರಿಸಬೇಕು ಎಂದು ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿಗಳ ಬಳಗದ ಸಂಚಾಲಕ ಭರತ್ ರಾಮಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಬಳಿಕ ದಲಿತರೊಬ್ಬರು ಸಿಎಂ ಆಗುತ್ತಾರೆಂಬ ನಿರೀಕ್ಷೆ ಹುಸಿಯಾಗಿದೆ. ದಲಿತ ಸಮುದಾಯ ಕಾಂಗ್ರೆಸ್‌ಗೆ ಸದಾ ಬೆಂಬಲ ನೀಡುತ್ತಿದ್ದರೂ ದಲಿತರೊಬ್ಬರನ್ನು ಸಿಎಂ ಮಾಡದಿದ್ದುದು ಬೇಸರದ ಸಂಗತಿ. ಹೀಗಾಗಿ ದಲಿತರೊಬ್ಬರನ್ನು ಸಿಎಂ ಮಾಡುವುದಾಗಿ ಭರವಸೆ ನೀಡುವ ಮೂಲಕ ಕಾಂಗ್ರೆಸ್ ಪಕ್ಷ ಮುಂದಿನ ಚುನಾವಣೆ ಎದುರಿಸಬೇಕೆಂದು ಮನವಿ ಮಾಡಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಡು ಕಂಡ ಓರ್ವ ಉತ್ಕೃಷ್ಟ ಜನನಾಯಕರಾಗಿದ್ದು, ಶೋಷಿತರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಸಮಾಜವಾದಿ. ವಿ.ಶ್ರೀನಿವಾಸಪ್ರಸಾದ್ ಸ್ಮಾರಕ ನಿರ್ಮಾಣಕ್ಕೆ ತಮ್ಮ ಅವಧಿಯಲ್ಲಿ 3 ಕೋಟಿ ರೂ. ಅನುದಾನ ನೀಡಿದ್ದು ಅದಕ್ಕಾಗಿ ಕೃತಜ್ಞತೆ ಸಲ್ಲಿಸುವುದಾಗಿ ಬಳಗದ ಸಂಚಾಲಕ ಭರತ್ ರಾಮಸ್ವಾಮಿ ತಿಳಿಸಿದರು.

ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಹ ವಿ.ಶ್ರೀನಿವಾಸಪ್ರಸಾದ್ ಅವರ ಗರಡಿಯಲ್ಲಿ ಪಳಗಿದವರಾಗಿದ್ದಾರೆ. ಅವರು ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ 1985ರಲ್ಲಿ ವಿ.ಶ್ರೀನಿವಾಸ ಪ್ರಸಾದ್ ಸಾರ್ವತ್ರಿಕ ಚುನಾವಣೆ ವೇಳೆ ಟಿಕೆಟ್ ಕೊಡಿಸಿದ್ದರು. ಇದು ಅವರ ರಾಜಕೀಯ ಜೀವನಕ್ಕೆ ಬುನಾದಿಯಾಯಿತು. ಹೀಗಾಗಿ ಡಿ.ಕೆ.ಶಿವಕುಮಾರ್ ಉತ್ತಮ ಆಡಳಿತ ನೀಡಿ, ರಾಜ್ಯದ ಏಳಿಗೆಗೆ ಶ್ರಮಿಸಬೇಕೆಂದು ಕೋರಿದರು. ಈ ವೇಳೆ ಸುದ್ದಿಗೋಷ್ಠಿಯಲ್ಲಿ ಹೆಚ್.ಜಿ.ರಮೇಶ್, ಮಾಂಬಳ್ಳಿ ನಂಜುಂಡಸ್ವಾಮಿ, ಶಾಂತರಾಮ ಶೆಟ್ಟಿ, ಸಿ.ಜೆ.ಶಿವಕುಮಾರ್ ಉಪಸ್ಥಿತರಿದ್ದರು.

ಆದಾಯ ತೆರಿಗೆ ಕಾಯ್ದೆ: ರಿಯಲ್ ಎಸ್ಟೇಟ್ ಸಂಬಂಧ ಇಂದು ಸಂವಾದ ಕಾರ್ಯಕ್ರಮ

ಮೈಸೂರು, ಜೂ.7(ಜಿಎ)–ಕ್ರೆಡಾಯ್ ಮತ್ತು ಬಿಲ್ಡರ್ ಅಸೋಸಿಯೇಷನ್ ಹಾಗೂ ಆದಾಯ ತೆರಿಗೆ ಇಲಾಖೆ ಸಹಯೋಗದೊಂದಿಗೆ 'ಹೊಸ ಆದಾಯ ತೆರಿಗೆ ಕಾಯ್ದೆ, 2025ರ ಅಡಿಯಲ್ಲಿ ರಿಯಲ್ ಎಸ್ಟೇಟ್ ಬಿಲ್ಡರ್‌ಗಳು ಮತ್ತು ಡೆವಲಪರ್‌ಗಳಿಗೆ ಸಂಬಂಧಿಸಿದ ಮೌಲ್ಯಮಾಪನ ಸಮಸ್ಯೆಗಳು' ಮಹತ್ವದ ಸಂವಾದ ಕಾರ್ಯಕ್ರಮವನ್ನು ಜೂ.8ರಂದು 2026ರಂದು ಸಂಜೆ 5 ಗಂಟೆಗೆ ಮೈಸೂರಿನ ಬಿಲ್ಡರ್ ಅಸೋಸಿಯೇಷನ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಕ್ರೆಡಾಯ್ ಅಧ್ಯಕ್ಷ ಹರೀಶ್ ಶೆಣೈ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ತೆರಿಗೆ ಚೌಕಟ್ಟಿನ ಅಡಿಯಲ್ಲಿ ರಿಯಲ್ ಎಸ್ಟೇಟ್ ವಲಯದ ಮೇಲಾಗುವ ಪ್ರಮುಖ ಮೌಲ್ಯಮಾಪನ ಸಂಬಂಧಿತ ನಿಬಂಧನೆಗಳು, ಪ್ರಾಯೋಗಿಕ ಪರಿಣಾಮಗಳು ಮತ್ತು ಕಾನೂನು ಅನುಸರಣೆಯ ವಿವಿಧ ಆಯಾಮಗಳ ಬಗ್ಗೆ ಪ್ರಮುಖ ಒಳನೋಟಗಳನ್ನು ಒದಗಿಸುವುದು ಈ ಸಂವಾದ ಮುಖ್ಯ ಉದ್ದೇಶವಾಗಿದೆ. ನಿರ್ಮಾಣ ವಲಯದ ಹಣಕಾಸು ಮತ್ತು ಕಾನೂನು ಪ್ರಕ್ರಿಯೆಗಳ ಮೇಲೆ ಈ ಕಾಯ್ದೆಯು ನೇರ ಪ್ರಭಾವ ಬೀರುವುದರಿಂದ ಹಿರಿಯ ಆದಾಯ ತೆರಿಗೆ ಅಧಿಕಾರಿಗಳ ಮಾರ್ಗದರ್ಶನವು ಅತ್ಯಂತ ಉಪಯುಕ್ತವಾಗಲಿದೆ ಎಂದರು.

ಅಂದಿನ ಕಾರ್ಯಕ್ರಮದಲ್ಲಿ ಮೈಸೂರಿನ ಆದಾಯ ತೆರಿಗೆ ಇಲಾಖೆಯ ರೇಂಜ್–1ರ ಹೆಚ್ಚುವರಿ ಕಮಿಷನರ್ ಕಲ್ಪಲತಾ ರಾಜನ್, ಸಹಾಯಕ ಕಮಿಷನರ್ ಎಸ್. ವೆಂಕಟೇಶನ್, ಉಪ ಸಹಾಯಕ ಆದಾಯ ತೆರಿಗೆ ಆಯುಕ್ತ ಆರ್.ರಂಗನಾಥ್ ಭಾಗವಹಿಸಿ, ಹೊಸ ಆದಾಯ ತೆರಿಗೆ ಕುರಿತು ಸೂಕ್ತ ಮಾರ್ಗದರ್ಶನ ನೀಡಿ, ಸಂವಾದ ನಡೆಸಲಿದ್ದಾರೆ ಎಂದರು.

ಆಡಿಟರ್ಸ್ ಅಸೋಸಿಯೇಷನ್, ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಷನ್, ಅಸೋಸಿಯೇಷನ್ ಆಫ್ ಕೌನ್ಸೆಲಿಂಗ್ ಸಿವಿಲ್ ಇಂಜಿನಿಯರ್ಸ್, ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಷನ್, ಕಂಟ್ರಾಕ್ಟರ್ಸ್ ಅಸೋಸಿಯೇಷನ್, ಆರ್ಕಿಟೆಕ್ಟ್ ಅಸೋಸಿಯೇಷನ್, ವ್ಯಾಲ್ಯೂಯರ್ಸ್ ಅಸೋಸಿಯೇಷನ್, ನರೆಡೋ, ಡೆವಲಪರ್ಸ್ ಅಸೋಸಿಯೇಷನ್ ಹಾಗೂ ವಕೀಲರ ಸಂಘದ ಪದಾಧಿಕಾರಿಗಳು, ಸದಸ್ಯರು ಸಂವಾದದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ ಎಂದರು. ಗೋಷ್ಠಿಯಲ್ಲಿ ಕ್ರೆಡಾಯ್ ಕಾರ್ಯದರ್ಶಿ ನಾಗರಾಜ್ ಬೈರಿ, ಬಿಲ್ಡರ್ ಅಸೋಸಿಯೇಷನ್ ಅಧ್ಯಕ್ಷ ಪ್ರಭಾಕರ್‌ರಾವ್, ಕಾರ್ಯದರ್ಶಿ ಪ್ರವೀಣ್ ಪಾಲ್, ಶಶಿರಾಜ್, ಜಗದೀಶ್ ಇದ್ದರು.

ಪ್ರತಿಭಾನ್ವಿತೆಗೆ ಗಣ್ಯರಿಂದ ಸನ್ಮಾನ...



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಮೈಸೂರಿನ ರಾಣಿಬಹದ್ದೂರ್ ಸಭಾಂಗಣದಲ್ಲಿ ಇತ್ತೀಚೆಗೆ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಪತ್ರಕರ್ತ ಸದಾಶಿವ ಅವರ ಮಗಳು ಶ್ರಾವಣಿ ಅವರನ್ನು ಸನ್ಮಾನಿಸಲಾಯಿತು. ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಹುಣಸೂರು ಶಾಸಕ ಹರೀಶ್‌ಗೌಡ, ಜಿಎಸ್‌ಎಸ್ ಸಂಸ್ಥೆ ಮುಖ್ಯಸ್ಥ ಶ್ರೀಹರಿ ದ್ವಾರಕಾನಾಥ್ ಇದ್ದರು.

ಪ್ರಾಥಮಿಕ–ಪ್ರೌಢಶಾಲಾ ವಿಭಾಗ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು: ಶಾಲಾ ಶಿಕ್ಷಣ ಇಲಾಖೆಯಿಂದ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಬ್ಲಾಕ್ ಹಂತದಲ್ಲಿ ಖಾಲಿ ಇರುವ ಬಿಐಇಆರ್‌ಟಿ ಪ್ರಾಥಮಿಕ–ಪ್ರೌಢಶಾಲಾ ವಿಭಾಗ ಹುದ್ದೆಗಳಿಗೆ ವಿಶೇಷಚೇತನ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಆರ್‌ಸಿಐ ನಿಯಮದಂತೆ ವಿಶೇಷ ಶಿಕ್ಷಣದಲ್ಲಿ ವಿಶೇಷ ಡಿಇಡಿ, ವಿಶೇಷ ಬಿ.ಇ.ಡಿ ವಿದ್ಯಾರ್ಹತೆ ಹೊಂದಿ ಆರ್.ಸಿ.ಐ ನೋಂದಣಿಯಾಗಿರುವ ಅಭ್ಯರ್ಥಿಗಳಿಂದ ತಾತ್ಕಾಲಿಕವಾಗಿ 2026–27ನೇ ಸಾಲಿಗೆ ನೇರಗುತ್ತಿಗೆ ಮೂಲಕ ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಜೂನ್ 16ರ ಸಂಜೆ 5.00 ಗಂಟೆಯೊಳಗೆ ವಿದ್ಯಾರ್ಹತೆಯ ಎಲ್ಲಾ ಅಂಕಪಟ್ಟಿಗಳು, ಪ್ರಮಾಣ ಪತ್ರ ಗಳು ಮತ್ತು ಆರ್.ಸಿ.ಐ ನೊಂದಣಿ ಪ್ರಮಾಣ ಪತ್ರದೊಂದಿಗೆ ಸ್ವವಿವರವುಳ್ಳ ಮಾಹಿತಿಯನ್ನು ಅಂಚೆ ಅಥವಾ ಮುದ್ದಾಂ ಮೂಲಕ ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ, ಡಿ.ಸುಬ್ಬಯ್ಯರಸ್ತೆ, ಜಂಟಿ ನಿರ್ದೇಶಕರ ಕಚೇರಿ, ಮೈಸೂರು ಈ ವಿಳಾಸಕ್ಕೆ ತಲುಪಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. ಸಂಖ್ಯೆ–9480695455/ 9448999404 ಸಂಪರ್ಕಿಸಬಹುದು.

ಕರ್ನಾಟಕ ಅರಸು ಮಹಾಮಂಡಳಿ ಚಾರಿಟಬಲ್ ಟ್ರಸ್ಟ್ ಯುವ ಜನೋತ್ಸವ

ನಾಲ್ವಡಿಯವರ ಆಳ್ವಿಕೆಯ ರಾಜಪ್ರಭುತ್ವದಲ್ಲಿ ಪ್ರಜಾಪ್ರಭುತ್ವವಿತ್ತು

ನಿವೃತ್ತ ಐಎಎಸ್ ಅಧಿಕಾರಿ ಟಿ.ಆರ್.ಜಯರಾಮರಾಜೇ ಅರಸ್ ಅಭಿಪ್ರಾಯ

ಮೈಸೂರು, ಜೂ.7(ಬಿಎಲ್‌ಯು)– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ರಾಜಪ್ರಭುತ್ವದಲ್ಲಿ ಪ್ರಜಾಪ್ರಭುತ್ವವಿತ್ತು. ಈ ಹಿನ್ನೆಲೆಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ನಾಲ್ವಡಿ ಅವರನ್ನು ರಾಜರ್ಷಿ ಎಂಬ ಬಿರುದನ್ನು ನೀಡಿ ಪ್ರಶಂಸಿಸಿದರು ಎಂದು ನಿವೃತ್ತ ಐಎಎಸ್ ಅಧಿಕಾರಿ ಟಿ.ಆರ್. ಜಯರಾಮರಾಜೇ ಅರಸ್ ತಿಳಿಸಿದರು.

ಮೈಸೂರಿನ ಗೋಕುಲಂನ ಶ್ರೀ ಕೃಷ್ಣ ದೇವಸ್ಥಾನ ಸಭಾಂಗಣದಲ್ಲಿ ಕರ್ನಾಟಕ ಅರಸು ಮಹಾಮಂಡಳಿ ಚಾರಿಟಬಲ್ ಟ್ರಸ್ಟ್‌ನ ಯುವ ಜನೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಆಡಳಿತದಲ್ಲಿ ನೀತಿ ನಿಯಮಗಳನ್ನು ರೂಪಿಸಲು ಶಾಸನ ಸಭೆ ರಚಿಸಿದ್ದ ನಾಲ್ವಡಿ ಅವರು ಪ್ರಜಾಪ್ರತಿನಿಧಿಗಳ ಅಭಿಪ್ರಾಯ, ಸಲಹೆಗಳನ್ನು ಪರಿಗಣಿಸುತ್ತಿದ್ದರು ಎಂದರು.



ಮೈಸೂರಿನ ಗೋಕುಲಂನ ಶ್ರೀ ಕೃಷ್ಣ ದೇವಸ್ಥಾನ ಸಭಾಂಗಣದಲ್ಲಿ ಕರ್ನಾಟಕ ಅರಸು ಮಹಾಮಂಡಳಿ ಚಾರಿಟಬಲ್ ಟ್ರಸ್ಟ್‌ನ ಯುವ ಜನೋತ್ಸವ, ಪ್ರತಿಭಾ ಪುರಸ್ಕಾರ ಸಮಾರಂಭವನ್ನು ನಿವೃತ್ತ ಐಎಎಸ್ ಅಧಿಕಾರಿ ಟಿ.ಆರ್.ಜಯರಾಮರಾಜೇ ಅರಸ್ ಉದ್ಘಾಟಿಸಿದರು.

ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿ ಮಾಡಲು ನಾಲ್ವಡಿ ಅವರು ಬುನಾದಿ ಹಾಕಿದರು. ಹತ್ತಾರು ಸರ್ಕಾರಗಳು ಮಾಡದ ಅಭಿವೃದ್ಧಿ ಕೆಲಸವನ್ನು ನಾಲ್ವಡಿ ಅವರೊಬ್ಬರೆ ಮಾಡಿ ಮನೆ ಮಾತಾಗಿದ್ದರು ಎಂದು ಜಯರಾಮರಾಜೇ ಅರಸ್ ಅಭಿಪ್ರಾಯಪಟ್ಟರು.

ಸಾಮಾಜಿಕ ನ್ಯಾಯದ ಹರಿಕಾರರಾಗಿ ಸರ್ವ ಜನಾಂಗದ ಸಮಾನತೆಯನ್ನು ಎತ್ತಿ ಹಿಡಿದಿದ್ದರು. ಜಾತಿ ಭೇದವಿಲ್ಲದೆ ಸಮಾಜದಲ್ಲಿ ಜಾತ್ಯಾತೀತ ಪರಿಕಲ್ಪನೆಗೆ ಇಂಬು ನೀಡಿದ್ದರು. ಈ ಮೂಲಕ ಜನಹಿತ ಸರ್ಕಾರ ನೀಡಿ ಅಭಿವೃದ್ಧಿಯಲ್ಲಿ ಕ್ರಾಂತಿ ಮಾಡಿದರು ಎಂದರು.


ಮೈಸೂರಿಗೆ ಭೇಟಿ ನೀಡಿದ್ದ ಮಹಾತ್ಮ ಗಾಂಧೀಜಿ ಅವರು ನಾಲ್ವಡಿ ಅವರ ಜನಪರ ಆಳ್ವಿಕೆಯನ್ನು ನೋಡಿ ಕಿಂಗ್ ಅಂಡ್ ಫಿಲಾಸಫರ್ ಅಥವಾ ರಾಜರ್ಷಿ ಎಂದು ಕರೆದರು. ನಾಲ್ವಡಿ ಅವರ ಕಾಲದ ಅಭಿವೃದ್ಧಿ ನೋಡಿ ಪ್ರಶಂಸೆ ವ್ಯಕ್ತಪಡಿಸಿದ್ದರು ಎಂದು ಹೇಳಿದರು.

10ನೇ ಜಯಚಾಮರಾಜ ಒಡೆಯರ್ ಹಾಗೂ ಕೆಂಪನಂಜಮ್ಮಣ್ಣಿ ಅವರ ಪುತ್ರನಾಗಿ 1884ರಲ್ಲಿ ಜನಿಸಿದ ನಾಲ್ವಡಿ ಅವರು 10ನೇ ವಯಸ್ಸಿಗೆ ತಂದೆ ಕಳೆದುಕೊಂಡರು. ತರುವಾಯ ನಾಲ್ವಡಿ ಅವರ ಪ್ರತಿನಿಧಿಯಾಗಿ ಕೆಂಪನಂಜಮ್ಮಣ್ಣಿ ಅವರು ಆಡಳಿತ ನಡೆಸಿದರು. 1902ರಲ್ಲಿ ಪೂರ್ಣ ಪ್ರಮಾಣದ ಆಡಳಿತ ವಹಿಸಿಕೊಂಡ ನಾಲ್ವಡಿ ಅವರು ಅಭಿವೃದ್ಧಿಯ ಪರ್ವವನ್ನೇ ಆರಂಭಿಸಿದರು.

ಭಾರತದಲ್ಲಿ 600ಕ್ಕೂ ಹೆಚ್ಚು ರಾಜ ಮಹಾರಾಜರು ಆಳ್ವಿಕೆ ನಡೆಸಿದ್ದಾರೆ. ಜನಹಿತ ಆಡಳಿತ ನಡೆಸಿದ ಬೆರಳಣಿಕೆಯಷ್ಟು ರಾಜರಲ್ಲಿ ನಾಲ್ವಡಿ ಅವರು ಕೂಡ ಒಬ್ಬರಾಗಿದ್ದರು. ಪ್ರಾಯಶಃ ನಾಲ್ವಡಿ ಅವರಂತೆ ಆದರ್ಶ ಆಡಳಿತ ನೀಡಿದ ಮತ್ತೊಬ್ಬ ರಾಜ ಭಾರತದಲ್ಲಿ ಇಲ್ಲ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಮೈಸೂರಿನ ರಾಮಕೃಷ್ಣ ಆಶ್ರಮದ ಸ್ವಾಮೀಜಿ ಸರ್ವಜಯಾನಂದ, ಗೌರವಾಧ್ಯಕ್ಷ ಎಂ.ಎಲ್.ಬಸವರಾಜೇ ಅರಸ್, ಕೆಯುಎಂಸಿ ಟ್ರಸ್ಟ್ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್ ವೇದಿಕೆಯಲ್ಲಿದ್ದರು.

ಮತ ಧರ್ಮ ಮತ್ತು ಅದ್ವೈತ ಕೃತಿ ಬಿಡುಗಡೆ...



ಬೆಂಗಳೂರಿನ ಗಾಂಧಿಭವನದಲ್ಲಿ ಎಂ.ಕೆ.ವೆಂಕಟರಾಂ ಅವರ 'ಮತ ಧರ್ಮ ಮತ್ತು ಅದ್ವೈತ', ಕನ್ನಡ ಮತ್ತು ಇಂಗ್ಲಿಷ್ ಕೃತಿಗಳನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಬಿಡುಗಡೆ ಮಾಡಿದರು. ಈ ವೇಳೆ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಲೇಖಕ ವೆಂಕಟರಾಂ, ಎಚ್.ಕೆ.ರಾಮು, ಪ್ರಕಾಶಕ ಪ್ರಕಾಶ್ ಚಿಕ್ಕಪಾಳ್ಯ, ಪ್ರೊ.ಸಿ.ನಾಗಣ್ಣ ಮತ್ತಿತರರು ಉಪಸ್ಥಿತರಿದ್ದರು.

'ರೋಟರಿ ಮಿಡ್‌ಟೌನ್ ಸರ್ಕ್ಯುಟ್ರೋನಿಕಾ ಸ್ಟಾರ್ಟ್ ಅಪ್' ಪ್ರಶಸ್ತಿ ಪ್ರದಾನ ಜೂ.10ಕ್ಕೆ

ಮೈಸೂರು, ಜೂ.7(ಜಿಎ)–ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಆರ್‌ಸಿಎಲ್ ಹಾಲ್‌ನಲ್ಲಿ ಜೂ.10ರಂದು 'ರೋಟರಿ ಮಿಡ್ ಟೌನ್ ಸರ್ಕ್ಯುಟ್ರೋನಿಕಾ ಸ್ಟಾರ್ಟ್ ಅಪ್' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಕೆ.ಎಲ್.ರಾಕೇಶ್‌ಬಾಬು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ನವೋದ್ಯಮಿಗಳು, ವೃತ್ತಿಪರರು ಹಾಗೂ ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಬೆಳೆಸುವ ಉದ್ದೇಶದಿಂದ ಈ ರೀತಿ ಅತ್ಯುತ್ತಮ ಸ್ಟಾರ್ಟ್ ಅಪ್‌ಗಳನ್ನು ಗುರುತಿಸಲಾಗುತ್ತಿದೆ. ಅತ್ಯುತ್ತಮ ಸ್ಟಾರ್ಟ್ ಅಪ್‌ಗಳನ್ನು ಗುರುತಿಸಿ ಉತ್ತೇಜನ ನೀಡುವ ಸಲುವಾಗಿ 'ರೋಟರಿ ಮಿಡ್‌ಟೌನ್ ಸರ್ಕ್ಯುಟ್ರೋನಿಕಾ ಸ್ಟಾರ್ಟ್ ಅಪ್' ವಾರ್ಷಿಕ ಪ್ರಶಸ್ತಿ ಸ್ಥಾಪಿಸಿದ್ದು, ಅಂದು ಸಂಜೆ 6.30ಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಲೀಪ್ರಾ ಟೆಕ್ನಾಲಜೀಸ್‌ನ ಪ್ರವಿತ್ಲಾಲ ಪನ್ನಿಯೋದನ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಗೌರವ ಕಾರ್ಯದರ್ಶಿ ಭಾಸ್ಕರ್ ಸೈನಿಕ್, ನಿರ್ದೇಶಕ ಓಂಪ್ರಕಾಶ್ ಉಪಸ್ಥಿತರಿದ್ದರು.

ಮೈಸೂರು ವಾರಿಯರ್ಸ್ ತಂಡದಿಂದ ಯುವ ಕ್ರಿಕೆಟಿಗರ ಪ್ರತಿಭಾನ್ವೇಷಣೆ



ಎಸ್‌ಡಿಎನ್‌ಆರ್ ಒಡೆಯರ್ ಕ್ರೀಡಾಂಗಣದ ಬಳಿ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿ 5ನೇ ಆವೃತ್ತಿ ಹಿನ್ನಲೆ ಮೈಸೂರು ವಾರಿಯರ್ಸ್ ತಂಡದಿಂದ 2ನೇ ಹಂತದ ಪ್ರತಿಭಾನ್ವೇಷಣೆ ನಡೆಸಲಾಯಿತು.

ಮೈಸೂರು, ಜೂ.7(ಎಂಕೆ)– ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿ 5ನೇ ಆವೃತ್ತಿ ಹಿನ್ನಲೆಯಲ್ಲಿ ಮೈಸೂರು ವಾರಿಯರ್ಸ್ ತಂಡದ ವತಿಯಿಂದ ಭಾನುವಾರ ಎರಡನೇ ಹಂತದ ಪ್ರತಿಭಾನ್ವೇಷಣೆ ನಡೆಸಲಾಯಿತು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದಲ್ಲಿರುವ ಎಸ್‌ಡಿಎನ್‌ಆರ್ ಒಡೆಯರ್ ಕ್ರೀಡಾಂಗಣದ ಬಳಿ ಹಮ್ಮಿಕೊಂಡಿದ್ದ ಎರಡನೇ ಹಂತದ ಪ್ರತಿಭಾನ್ವೇಷಣೆಯಲ್ಲಿ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಆಗಮಿಸಿದ್ದ 25 ಮಂದಿ ಬೌಲರ್‌ಗಳು, 18 ಮಂದಿ ಬ್ಯಾಟ್ಸ್‌ಮನ್‌ಗಳು, 30 ಮಂದಿ ಆಲ್‌ರೌಂಡರ್‌ಗಳು ಹಾಗೂ 8 ಮಂದಿ ವಿಕೆಟ್ ಕೀಪರ್‌ಗಳು ಸೇರಿದಂತೆ 75ಕ್ಕೂ ಹೆಚ್ಚು ಯುವ ಕ್ರಿಕೆಟರ್‌ಗಳು ತಮ್ಮಲ್ಲಿ ಕೌಶಲ್ಯತೆ ಪ್ರದರ್ಶಿಸಿದರು.

ಮೈಸೂರು ವಾರಿಯರ್ಸ್ ತಂಡದ ಬೌಲಿಂಗ್ ತರಬೇತುದಾರ ಆದಿತ್ಯ ಸಾಗರ್ ಮತ್ತು ಕೋಚಿಂಗ್ ಸಿಬ್ಬಂದಿ ಸದಸ್ಯರ ಮೇಲ್ವಿಚಾರಣೆಯಲ್ಲಿ ನಡೆದ ಪ್ರತಿಭಾನ್ವೇಷಣೆಯಲ್ಲಿ ಆಟಗಾರರು ತಮ್ಮ ತಾಂತ್ರಿಕ ಕೌಶಲ್ಯ, ಪಂದ್ಯದ ಅರಿವು, ಫಿಟ್‌ನೆಸ್ ಮತ್ತು ಒಟ್ಟಾರೆ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲಾಯಿತು.

ಪ್ರತಿಭಾನ್ವೇಷಣೆಯಲ್ಲಿ ಆಯ್ಕೆಯಾದ ಉದಯೋನ್ಮುಖ 10 ಮಂದಿ ಆಟಗಾರರ ಪೈಕಿ, ಮೈಸೂರು ವಾರಿಯರ್ಸ್ ತಂಡಕ್ಕೆ ಇಬ್ಬರು ಹೊಸ ಆಟಗಾರರನ್ನು ಸೇರ್ಪಡೆ ಮಾಡಿಕೊಳ್ಳಲಾಗುವುದು. ಅಂತಿಮವಾಗಿ ತಂಡಕ್ಕೆ ಆಯ್ಕೆಯಾಗುವ ಹೊಸ ಆಟಗಾರರು 5ನೇ ಆವೃತ್ತಿ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ.

ಪ್ರತಿಭಾನ್ವೇಷಣೆಯಲ್ಲಿ ಮಾತನಾಡಿದ ಮೈಸೂರು ವಾರಿಯರ್ಸ್‌ನ ಮಾಲೀಕ ಮತ್ತು ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ, ಯುವ ಕ್ರಿಕೆಟರ್‌ಗಳಿಗೆ ರಾಜ್ಯಮಟ್ಟದಲ್ಲಿ ಅವಕಾಶ ನೀಡಲು ಇದೊಂದು ಉತ್ತಮ ವೇದಿಕೆಯಾಗಿದೆ. ಅಲ್ಲದೆ ಮೈಸೂರು ವಾರಿಯರ್ಸ್ ತಂಡವನ್ನು ಮತ್ತಷ್ಟು ಸಜ್ಜುಗೊಳಿಸಲು ಈ ಪ್ರತಿಭಾನ್ವೇಷಣೆ ನೆರವಾಗಲಿದೆ ಎಂದರು.

ಮಹಾವೀರ್ ವಿದ್ಯಾಮಂದಿರದಲ್ಲಿ ಪರಿಸರ ದಿನಾಚರಣೆ

ಮೈಸೂರು: ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಅಧೀನದಲ್ಲಿರುವ ಮೈ ಭಾರತ್ ಕೇಂದ್ರ, ಮೈಸೂರು ಹಾಗೂ ಮಹಾವೀರ್ ವಿದ್ಯಾಮಂದಿರ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮಕ್ಕೆ ಗಿಡಗಳನ್ನು ವಿತರಿಸುವ ಮೂಲಕ ಚಾಲನೆ ನೀಡಲಾಯಿತು. ಮಹಾವೀರ್ ವಿದ್ಯಾಮಂದಿರದ ಮುಖ್ಯೋಪಾಧ್ಯಾಯ ಶ್ರೀಕಂಠದತ್ತ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಭಾಷಣಕಾರರಾಗಿ ವಿಜ್ಞಾನ ಶಿಕ್ಷಕಿ ಲಕ್ಷ್ಮೀ ವಿಶ್ವ ಪರಿಸರ ದಿನದ ಮಹತ್ವ ಹಾಗೂ ಪರಿಸರ ಸಂರಕ್ಷಣೆಯ ಅಗತ್ಯತೆಯ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಅಮಿತ್ ಕುಮಾರ್ ಸಿ.ಎಲ್., ಸಹಾಯಕ ಮುಖ್ಯೋಪಾಧ್ಯಾಯರಾದ ಸುಮಾ ಹಾಗೂ ಶಾಲೆಯ ಶಿಕ್ಷಕ ವೃಂದ ಉಪಸ್ಥಿತರಿದ್ದರು. ಪರಿಸರ ದಿನದ ಅಂಗವಾಗಿ ಆಯೋಜಿಸಿದ್ದ ಪ್ರಬಂಧ ಹಾಗೂ ಚಿತ್ರಕಲಾ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಲಾಯಿತು.



ಇದೇ ಸಂಧರ್ಭದಲ್ಲಿ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ ಹಾಗೂ ಹಸಿರು ಪರಿಸರ ನಿರ್ಮಾಣಕ್ಕೆ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸುವ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು. ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಿ ಪರಿಸರ ಸಂರಕ್ಷಣೆ ಕುರಿತು ಅರಿವು ಮೂಡಿಸುವ ಮೂಲಕ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಬಾಕಿಯಿರುವ ಪ್ರಕರಣಗಳಿಗೆ ಶೇಕಡ 50ರಷ್ಟು ರಿಯಾಯಿತಿ

ಮೈಸೂರು, ಜೂ.7– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು ಇವರಿಂದ ಕರ್ನಾಟಕ ರಾಜ್ಯದಲ್ಲಿ ಮೇ–2026ರ ಮೊದಲು ಪೊಲೀಸ್ ಇಲಾಖೆಯವರು ಸಂಚಾರಿ ಇ-ಚಲನ್ ದಾಖಲಾದ ಪ್ರಕರಣಗಳು ಹಾಗೂ ಸಾರಿಗೆ ಇಲಾಖೆಯಲ್ಲಿ 1991ರಿಂದ 2022ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿಯಿರುವ ಪ್ರಕರಣಗಳ ಮೊತ್ತದಲ್ಲಿ ಶೇಕಡ 50%ರಷ್ಟು ರಿಯಾಯಿತಿಯನ್ನು ನೀಡಲಾಗಿದ್ದು, ಈ ರಿಯಾಯಿತಿಯು ಜೂನ್ 21ರಿಂದ ಜುಲೈ 10ರವರೆಗೆ ಇತ್ಯರ್ಥಗೊಳ್ಳುವ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆ. ಉಚಿತ ಕಾನೂನು ನೆರವಿಗಾಗಿ ರಾಷ್ಟ್ರೀಯ ಸಹಾಯವಾಣಿ: 15100 ಅನ್ನು ಸಂಪರ್ಕಿಸಬಹುದು.

ಮೈಸೂರು ನಗರ ಜೆಡಿಎಸ್‌ನ ಪ್ರಧಾನ ಕಾರ್ಯದರ್ಶಿ ಸುರೇಶ್ ಹುಟ್ಟುಹಬ್ಬದ ಅಂಗವಾಗಿ ಪ್ರತಿಭಾ ಪುರಸ್ಕಾರ, ರಕ್ತದಾನ ಶಿಬಿರ, ಉಚಿತ ಆರೋಗ್ಯ ತಪಾಸಣೆ

ಮೈಸೂರು, ಜೂ.7(ಎಂಕೆ)– ಮೈಸೂರು ನಗರ ಜೆಡಿಎಸ್‌ನ ಪ್ರಧಾನ ಕಾರ್ಯದರ್ಶಿ ಸುರೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 130 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ 90 ಮಂದಿ ಆಟೋ ಚಾಲಕರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮೈಸೂರಿನ ಬೋಗಾದಿ 2ನೇ ಹಂತ (ವಾರ್ಡ್ ನಂ.44ರ ವ್ಯಾಪ್ತಿ)ದಲ್ಲಿರುವ ನಿರ್ಮಿತಿ ಕೇಂದ್ರ ರಸ್ತೆಯ ಉದ್ಯಾನವನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಜಿ.ಡಿ.ಹರೀಶ್‌ಗೌಡ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಿದರು. ಹಾಗೆಯೇ ಆಟೋ ಚಾಲಕರನ್ನು ಸನ್ಮಾನಿಸಿದರು. ಹಾಗೆಯೇ ವೈದ್ಯರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಮುಖಂಡರನ್ನು ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಗರಪಾಲಿಕೆ 44ನೇ ವಾರ್ಡ್‌ನಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿದೆ.



ಮೈಸೂರು ನಗರ ಜೆಡಿಎಸ್‌ನ ಪ್ರಧಾನ ಕಾರ್ಯದರ್ಶಿ ಸುರೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ಪ್ರತಿಭಾ ಪುರಸ್ಕಾರ, ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ನಡೆಯಿತು. ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ, ನಗರಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್, ಮೈಮುಲ್ ನಿರ್ದೇಶಕ ಉಮಾಶಂಕರ್ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

2018ರ ಪಾಲಿಕೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಬಿ ಫಾರಂ ಪಡೆದು ಚುನಾವಣೆಗೆ ಸ್ಪರ್ಧಿಸಿ, ಗೆದ್ದ ಶ್ರೀಮತಿ ಸವಿತಾ ಸುರೇಶ್ ಅವರು ವಾರ್ಡ್‌ನಲ್ಲಿ ಹಲವು ಜನಪರ ಕೆಲಸಗಳನ್ನು ಮಾಡಿದ್ದಾರೆ. ಮುಂದಿನ ಚುನಾವಣೆಯಲ್ಲೂ ಸ್ಪರ್ಧಿಸಿ ಜಯಗಳಿಸುವ ಮೂಲಕ ಮೇಯರ್ ಸ್ಥಾನಕ್ಕೇರಲಿ ಎಂದು ಆಶಿಸಿದರು.

ಹಾಗೆಯೇ ಜೆಡಿಎಸ್ ಮೈಸೂರು ನಗರ ಘಟಕದ ಪ್ರಧಾನ ಕಾರ್ಯದರ್ಶಿ ಸುರೇಶ್ ಅವರ ಹುಟ್ಟುಹಬ್ಬದ ಅಂಗವಾಗಿ 130 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳಲ್ಲಿ ಜವಾಬ್ದಾರಿ ಹೆಚ್ಚಿಸಲು, ಅವರ ಓದಿಗೆ ಇನ್ನಷ್ಟು ಪ್ರೇರಣೆ ನೀಡಲು ಪ್ರತಿಭಾ ಪುರಸ್ಕಾರ ನೀಡುವುದು ಒಳ್ಳೆಯದಾಗಿದೆ. ಇದರಿಂದ ವಿದ್ಯಾರ್ಥಿಗಳು ಚೆನ್ನಾಗಿ ಓದಿ, ದೊಡ್ಡ ಮಟ್ಟದ ಸ್ಥಾನಗಳಿಗೂ ಬೆಳೆಯಲಿದ್ದಾರೆ ಎಂದರು.

ನಗರ ಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್ ಮಾತನಾಡಿ, ಪ್ರತೀ ವರ್ಷದಂತೆ ಈ ವರ್ಷವೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ವಾರ್ಡ್ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗಿದೆ. ಈ ಮೂಲಕ ವಿದ್ಯಾರ್ಥಿಗಳ ಓದಿಗೆ ಉತ್ತೇಜನ ನೀಡಲಾಗುತ್ತಿದೆ. ಹಾಗೆಯೇ ಅಧಿಕಾರ ಇಲ್ಲದಿದ್ದರೂ ವಾರ್ಡ್‌ನಲ್ಲಿನ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸಲಾಗುತ್ತಿದೆ ಎಂದು ತಿಳಿಸಿದರು.

ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ: ಇದೇ ವೇಳೆ ಜನತಾ ನಗರದ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ರೋಟರಿ ಶಾಲೆ ಆವರಣದಲ್ಲಿ ಕಣ್ಣಿನ ತಪಾಸಣೆ, ಬಿಪಿ, ಶುಗರ್, ಅಸ್ತಮಾ ಸೇರಿದಂತೆ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ನಡೆಯಿತು. ಮೈಮುಲ್ ನಿರ್ದೇಶಕ ಉಮಾಶಂಕರ್, ಮಾಜಿ ಗ್ರಾಪಂ ಸದಸ್ಯ ಚಂದ್ರಶೇಖರ್, ವಕೀಲ ಸಿದ್ದರಾಜು, ಮುಖಂಡರಾದ ಯಲಚಳ್ಳಿ ರವಿ, ಕೇಬಲ್ ರವಿ, ಸೊಸೈಟಿ ಆನಂದ್, ಆರ್‌ಎಕ್ಸ್ ಮಂಜು, ಕಂಟ್ರ್ಯಾಕ್ಟರ್ ಮಂಜು ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಮಟ್ಟದ ಹಾಕಿ ಪಂದ್ಯಾವಳಿ


ರಾಯಲ್ಸ್ ಕ್ಲಬ್ ಪದಾಧಿಕಾರಿಗಳು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮಡಿಕೇರಿ, ಜೂ.7–ಅಮ್ಮತ್ತಿಯ ಕಾವೇರಿ ರಾಯಲ್ಸ್ ರಿಕ್ರಿಯೇಷನ್ ಅಸೋಸಿಯೇಷನ್‌ನ ರಾಯಲ್ಸ್ ಕ್ಲಬ್ ವತಿಯಿಂದ ಕೈಗ್ಸ್ ಸ್ಪೋರ್ಟ್ಸ್ ಫೌಂಡೇಷನ್ ಪ್ರಾಯೋಜಕತ್ವದಡಿ ಪ್ರಸಕ್ತ ಸಾಲಿನ ಸೆ.8ರಿಂದ 13ರ ವರೆಗೆ ಗೋಣಿಕೊಪ್ಪಲಿನಲ್ಲಿ ರಾಷ್ಟ್ರೀಯ ಮಟ್ಟದ ಹಾಕಿ ಪಂದ್ಯಾವಳಿ ನಡೆಯಲಿದೆ.

ನಾಕ್ ಔಟ್' ಮಾದರಿಯ ಈ ಹಾಕಿ ಪಂದ್ಯಾವಳಿ ಗೋಣಿಕೊಪ್ಪಲಿನ ಕಾಲ್ಸ್ ಶಾಲಾ ಟರ್ಫ್ ಮೈದಾನದಲ್ಲಿ ನಡೆಯಲಿದೆ. ಪಂದ್ಯಾವಳಿಯಲ್ಲಿ ಹಾಕಿ ಕೊಡಗು ಸಂಸ್ಥೆಯಲ್ಲಿ ನೋಂದಾಯಿತ 15 ತಂಡ ಮತ್ತು ಪ್ರಾಯೋಜಕ ಸಂಸ್ಥೆಯ ಕೈಗ್ಸ್ ಝೂಮರ್ಸ್ ತಂಡ ಸೇರಿದಂತೆ ಒಟ್ಟು 16 ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿರುವುದಾಗಿ ಕಾವೇರಿ ರಾಯಲ್ಸ್ ರಿಕ್ರಿಯೇಷನ್ ಅಸೋಸಿಯೇಷನ್‌ನ ಉಪಾಧ್ಯಕ್ಷ ನೆಲ್ಲಮಕ್ಕಡ ಸಂಪತ್ ದೇವಯ್ಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುವ ಪ್ರತಿ ತಂಡಗಳಲ್ಲಿ ಐವರು ರಾಷ್ಟ್ರೀಯ ಮಟ್ಟದ ಅತಿಥಿ ಆಟಗಾರರನ್ನು ಬಳಸಿಕೊಳ್ಳಲು ಅವಕಾಶವನ್ನು ನೀಡಲಾಗಿದೆ. ಇದು ಆಟದ ಗುಣ ಮಟ್ಟವನ್ನು ಹೆಚ್ಚಿಸುವುದಲ್ಲದೆ ಸ್ಥಳೀಯ ಆಟಗಾರರ ಕ್ರೀಡಾ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ಅಭಿಪ್ರಾಯಿಸಿದರು.

ಪಂದ್ಯಾವಳಿ ವಿಜೇತ ತಂಡಕ್ಕೆ 2 ಲಕ್ಷ ರೂ. ನಗದು, ರನ್ನರ್ಸ್ ತಂಡಕ್ಕೆ ಲಕ್ಷ ರೂ., ತೃತೀಯ 50 ಸಾವಿರ ರೂ. ಮತ್ತು 4ನೇ ಸ್ಥಾನ ಪಡೆಯುವ ತಂಡಕ್ಕೆ 30 ಸಾವಿರರೂ. ನಗದು ಹಾಗೂ ವಿಜೇತ ತಂಡಗಳಿಗೆ ಆಕರ್ಷಕ ಟ್ರೋಫಿಯನ್ನು ನೀಡಲಾಗುತ್ತದೆ ಎಂದರು.

ಪಂದ್ಯಾವಳಿಯಲ್ಲಿ ಪಾಲ್ಗೊಂಡ ಅತಿಥಿ ಆಟಗಾರರಲ್ಲಿ ಅತ್ಯುತ್ತಮ ಆಟಗಾರ ಪ್ರಶಸ್ತಿ ಪಡೆಯುವ ಹಾಗೂ ಸ್ಥಳೀಯ ಆಟಗಾರರ ಪೈಕಿ ಅತ್ಯುತ್ತಮ ಆಟಗಾರ ಪ್ರಶಸ್ತಿ ಪಡೆಯುವ ಇಬ್ಬರಿಗೆ ಉತ್ತರ ಗೋವಾದಲ್ಲಿ 11 ಸಾವಿರ ಚದರ ಅಡಿಗಳ ತಲಾ 17.8 ಲಕ್ಷ ಮೌಲ್ಯದ 2 ನಿವೇಶನಗಳನ್ನು ಬಹುಮಾನವಾಗಿ ವಿತರಿಸಲಾಗುತ್ತದೆ ಎಂದು ತಿಳಿಸಿದರು.

ಆಹ್ವಾನಿತ 8 ಮಹಿಳಾ ತಂಡಗಳ ನಡುವಣ ರಾಷ್ಟ್ರೀಯ ಮಟ್ಟದ ಹಾಕಿ ಪಂದ್ಯಾವಳಿ ಇದೇ ಸಂದರ್ಭ ಆಯೋಜಿತವಾಗಿದೆ. ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುವ ಎಲ್ಲಾ ತಂಡಗಳಿಗೂ ಕೈಗ್ ಸಂಸ್ಥೆಯ ವತಿಯಿಂದ ಜೆರ್ಸಿಗಳನ್ನು ಒದಗಿಸಲಾಗುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕೈಗ್ ಸ್ಪೋರ್ಟ್ಸ್ ಫೌಂಡೇಷನ್ ಪ್ರತಿನಿಧಿ ಕುಂಡ್ಯೋಳಂಡ ಶಶಿಮೇದಪ್ಪ, ಕಾವೇರಿ ರಾಯಲ್ಸ್ ರಿಕ್ರಿಯೇಷನ್ ಅಸೋಸಿಯೇಷನ್‌ನ ನಿರ್ದೇಶಕರಾದ ಮಂಡೇಪಂಡ ಪೊನ್ನು, ಮಂಡೇಪಂಡ ಸಚಿನ್ ಸುಗುಣ, ಮೂಕೊಂಡ ಚರ್ಮಣ ಉಪಸ್ಥಿತರಿದ್ದರು.

ಆಲೇಕಟ್ಟೆ–ಇನಕನಹಳ್ಳಿ ಕಾಂಕ್ರೀಟ್ ರಸ್ತೆ ಕಳಪೆ ಕಾಮಗಾರಿ

ಹಾಕಿದ್ದ ಕಾಂಕ್ರೀಟ್ ಅನ್ನು ತೆರವು ಮಾಡಿಸಿದ ಸಾರ್ವಜನಿಕರು


ಮಂದಗತಿಯಲ್ಲಿ ನಡೆಯುತ್ತಿರುವ ಕಾಂಕ್ರೀಟ್ ರಸ್ತೆ ಕಾಮಗಾರಿ

ಮಡಿಕೇರಿ,ಜೂ.7–ಆರಂಭದಿಂದಲೂ ವಿಘ್ನಗಳಿಂದಲೇ ಸಾಗಿದ್ದ ಸೋಮವಾರಪೇಟೆ ತಾಲೂಕಿನ ಆಲೇಕಟ್ಟೆ–ಇನಕನಹಳ್ಳಿ ಕಾಂಕ್ರೀಟ್ ರಸ್ತೆ ಕಳಪೆ ಕಾಮಗಾರಿ ಆರೋಪ ಕೇಳಿ ಬಂದಿದೆ. ಕಿ.ಮೀ.ಗೆ ಸುಮಾರು ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕಾಮಗಾರಿ ಕ್ರಿಯಾ ಯೋಜನೆಯಂತೆ ನಡೆಯುತ್ತಿಲ್ಲ. ಕಾಂಕ್ರೀಟ್ ಕಾಮಗಾರಿ ಬಹುತೇಕ ಕಳಪೆಯಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ ಹಿನ್ನೆಲೆ, ರಸ್ತೆಗೆ ಹಾಕಿದ ಕಾಂಕ್ರೀಟ್ ಅನ್ನು ತೆರವು ಮಾಡಿಸಲಾಯಿತು.

ರಾತ್ರಿ ವೇಳೆಯಲ್ಲಿ ಕೇವಲ ವಾಹನದ ಬೆಳಕಿನೊಂದಿಗೆ ಕಾಂಕ್ರೀಟ್ ಹಾಕಲಾಗುತ್ತಿದೆ. ಸಂಜೆ 7 ರಿಂದ ರಾತ್ರಿ 12 ಗಂಟೆಯವರೆಗೆ ಕಾಂಕ್ರೀಟ್ ಹಾಕಲಾಗುತ್ತಿದೆ. ಇಲಾಖೆಯ ನಿರ್ದೇಶನದಂತೆ ಫೇವರ್ ಬಳಸುತ್ತಿಲ್ಲ. ಕಾರ್ಮಿಕರು ಮ್ಯಾನ್ಯುವಲ್ ಆಗಿಯೇ ಕೆಲಸ ಮಾಡುತ್ತಿದ್ದಾರೆ. ಮೊನ್ನೆ ಹಾಕಿರುವ ಕಾಂಕ್ರೀಟ್ ನಿನ್ನೆ ಕಿತ್ತು ಬರುತ್ತಿದೆ, ಸಿಮೆಂಟಿನ ಅಂಶವೇ ಇಲ್ಲ ಎಂಬಿತ್ಯಾದಿ ಆರೋಪಗಳ ಮೂಲಕ ಸ್ಥಳೀಯರು ಕೆಲಸಕ್ಕೆ ತಡೆಯೊಡ್ಡಿದ್ದರು.

ಮಾಹಿತಿ ಅರಿತು ಸ್ಥಳಕ್ಕೆ ಆಗಮಿಸಿದ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಕುಮಾರ್ ರನ್ನು ತರಾಟೆಗೆ ತೆಗೆದುಕೊಂಡ ಸ್ಥಳೀಯರು, ಇಲಾಖೆಯ ನಿರ್ದೇಶನದಂತೆ ಫೇವರ್ ಬಳಸಿ ಕಾಂಕ್ರೀಟ್ ಹಾಕಬೇಕಿದ್ದರೂ ಕಾರ್ಮಿಕರು ಕೈಯಿಂದಲೇ ಕಾಂಕ್ರೀಟ್ ಹಾಕುತ್ತಿದ್ದಾರೆ. ಮಾತ್ರವಲ್ಲದೆ ರಾತ್ರಿ ವೇಳೆ ಕಾಂಕ್ರೀಟ್ ಹಾಕಲು ಅನುಮತಿ ನೀಡಿದ್ದು ಯಾಕೆ? ಇಂಜಿನಿಯರ್ ಇಲ್ಲದೆಯೇ ಕಾಂಕ್ರೀಟ್ ಹಾಕುತ್ತಿರುವುದು ಏಕೆ ಎಂದು ಪ್ರಶ್ನಿಸಿ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಮೊನ್ನೆ ದಿನ 7 ಲೋಡ್‌ನಷ್ಟು ಕಾಂಕ್ರೀಟ್ ಹಾಕಲಾಗಿದ್ದು, ಇದು ನಿನ್ನೆ ಕಿತ್ತು ಬಂದಿದೆ. ಕೆಲವೆಡೆ ಮಣ್ಣಿನ ಮೇಲೆ 3 ಇಂಚಿನಷ್ಟು ಕಾಂಕ್ರೀಟ್ ಹಾಕಿದ್ದಾರೆ. ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು, ಮೊನ್ನೆ ಸುರಿದ 7 ಲೋಡ್ ಕಾಂಕ್ರೀಟ್‌ನ್ನು ತೆರವುಗೊಳಿಸಿ ಗುಣಮಟ್ಟದಲ್ಲಿ ರಸ್ತೆ ನಿರ್ಮಿಸಬೇಕೆಂದು ಆಗ್ರಹಿಸಿದರು. ಇದಕ್ಕೆ ಅಭಿಯಂತರರು ಒಪ್ಪಿಗೆ ಸೂಚಿಸಿ ಕಳಪೆಯಾಗಿರುವ ಕಾಂಕ್ರೀಟ್‌ನ್ನು ತೆರವುಗೊಳಿಸಲಾಗುವುದು. ಗುಣಮಟ್ಟದ ರಸ್ತೆ ನಿರ್ಮಾಣ ಮಾಡಲಾಗುತ್ತದೆ ಎಂದು ಭರವಸೆ ನೀಡಿದರು. ಅದರಂತೆ ನಿನ್ನೆ ಸಂಜೆ ಕಾಂಕ್ರೀಟನ್ನು ಹಿಟಾಚಿ ಯಂತ್ರದ ಮೂಲಕ ತೆರವುಗೊಳಿಸಲಾಯಿತು.

ಈಗಾಗಲೇ ನಿಗದಿತ ಸಮಯಕ್ಕೆ ಕಾಮಗಾರಿ ಪೂರ್ಣಗೊಂಡಿಲ್ಲ. ಪ್ರಸ್ತುತ ನಡೆಯುತ್ತಿರುವ ಕಾಮಗಾರಿಯೂ ಆಮೆಗತಿಯಲ್ಲಿದೆ. ಈ ನಡುವೆ ಕಳಪೆ ಕಾಮಗಾರಿ ಮಾಡಲಾಗುತ್ತಿದೆ. ಕೆಲಸ ನಡೆಯುವಾಗ ಲೋಕೋಪಯೋಗಿ ಅಭಿಯಂತರರು ಸ್ಥಳದಲ್ಲಿಯೇ ಇರಬೇಕು. ರಸ್ತೆ ಕಳಪೆಯಾದರೆ ಅದು ಜನಸಾಮಾನ್ಯರಿಗೆ ಸಮಸ್ಯೆಯಾಗುತ್ತದೆ. ಜನರ ತೆರಿಗೆ ಹಣದಲ್ಲಿ ನಡೆಯುವ ಕಾಮಗಾರಿ ಕಳಪೆಯಾದರೆ ಅಭಿಯಂತರರೂ ಹೊಣೆಯಾಗಬೇಕಾಗುತ್ತದೆ ಎಂದು ಗ್ರಾಮಸ್ಥರಾದ ಬಗ್ಗನ ಅನಿಲ್ ಎಚ್ಚರಿಸಿದರು.

ಸಿಇಟಿಯಲ್ಲಿ ಕೊಡಗಿನ ಯುವಕನಿಗೆ 6ನೇ ರ್‍ಯಾಂಕ್



ಮಡಿಕೇರಿ: ರಾಜ್ಯ ಪರೀಕ್ಷಾ ಪ್ರಾಧಿಕಾರ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಪ್ರಕಟವಾಗಿದ್ದು, ಕೊಡಗಿನ ಮೂವೆರ ಅದ್ವಿಕ್ ಗಣಪತಿ ರಾಜ್ಯಕ್ಕೆ 6ನೇ ರಾಂಕ್ ಪಡೆದು ಸಾಧನೆ ಮಾಡಿದ್ದಾರೆ. ಇವರು ನಾಪೋಕ್ಲು ನಿವಾಸಿ ಮೂವೆರ ಬೆಳ್ಳಿಯಪ್ಪ ಗಣಪತಿ ಮತ್ತು ನೇತ್ರ ಗಣಪತಿ ದಂಪತಿಯ ಪುತ್ರರಾಗಿದ್ದಾರೆ. ಮುಂದಿನ ವಿದ್ಯಾಭ್ಯಾಸವನ್ನು ಕಂಪ್ಯೂಟರ್ ಸೈನ್ಸ್‌ನಲ್ಲಿ ಮುಂದುವರೆಸುವುದಾಗಿ ಸಂತಸ ಹಂಚಿಕೊಂಡಿದ್ದಾರೆ.

ಕಸದ ವ್ಯಾನ್–ಆಟೋ ಡಿಕ್ಕಿ : ಮಹಿಳೆ ಸಾವು

ವಿರಾಜಪೇಟೆ/ಮಡಿಕೇರಿ, ಜೂ.7–ಪುರಸಭೆಯ ಕಸ ಸಾಗಿಸುವ ವಾಹನ ಹಾಗೂ ಬ್ಯಾಟರಿ ಚಾಲಿತ ಆಟೋರಿಕ್ಷಾ ನಡುವೆ ಭಾನುವಾರ ನಡೆದ ಅಪಘಾತದಲ್ಲಿ ಮಹಿಳೆಯೊಬ್ಬರು ಮೃತ ಪಟ್ಟು ಇಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಸಮೀಪದ ಪೆರುಂಬಾಡಿಯಲ್ಲಿ ಸಂಭವಿಸಿದೆ.



ಆಟೋದಲ್ಲಿ ಪ್ರಯಾಣಿಸುತ್ತಿದ್ದ ಪೆರುಂಬಾಡಿ ಗ್ರಾಮದ ಸುಲೋಚನ (63 ವರ್ಷ) ಹೊರವಲಯದ ಬಿಟ್ಟಂಗಾಲದ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿದ್ದ ಮದುವೆ ಕಾರ್ಯಕ್ರಮಕ್ಕೆ ಇಬ್ಬರೊಂದಿಗೆ ತೆರಳುತ್ತಿದ್ದರು ಎನ್ನಲಾಗಿದೆ. ಕಸ ಸಾಗಿಸುವ ವಾಹನ(ಕೆಎ.12, ಸಿ–0849) ಮತ್ತು ಆಟೋ(ಕೆಎ.12,ಸಿ–2756) ನಡುವೆ ಅಪಘಾತ ಸಂಭವಿಸಿದೆ.

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಸುಲೋಚನರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಸಾಗಿಸುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಆಟೋದಲ್ಲಿ ಪ್ರಯಾಣಿಸುತ್ತಿದ್ದ ಚಾಲಕ ಸುರೇಶ್, ಪ್ರಯಾಣಿಕರಾದ ಅಮೃತ, ಪದ್ಮನಾಭ ಅವರು ಗಾಯಗೊಂಡಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಅಮೃತ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಸಾಗಿಸಲಾಗಿದೆ. ಪುರಸಭೆಯ ಕಸ ಸಂಗ್ರಹ ವಾಹನ ಚಾಲಕ ಸುರೇಶ್ ಆರೋಗ್ಯದಲ್ಲಿ ಏರುಪೇರಾಗಿದ್ದೇ ಈ ಅಪಘಾತಕ್ಕೆ ಕಾರಣವಾಗಿರ'ಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಎಸ್.ಐ ಪ್ರಮೋದ್ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಆಗಮಿಸಿ ಎರಡೂ ವಾಹನಗಳನ್ನು ಠಾಣೆಗೆ ಸಾಗಿಸಿದರು. ನಗರ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಅಮ್ಮ ಕೊಡವ ಸಮಾಜಭವನದ ಕಾಮಗಾರಿಗೆ ಭೂಮಿಪೂಜೆ


ಅಮ್ಮ ಕೊಡವ ಸಮಾಜದ ಕಾಮಗಾರಿಗೆ ಡಾ.ಮಂತರ್ ಗೌಡ ಭೂಮಿಪೂಜೆ ನೆರವೇರಿಸಿದರು.

ಮಡಿಕೇರಿ: ನಗರದ ಐಟಿಐ ಸಮೀಪ ನಿರ್ಮಾಣಗೊಳ್ಳಲಿರುವ ಅಮ್ಮ ಕೊಡವ ಸಮಾಜದ ಕಾಮಗಾರಿಗೆ ಶಾಸಕ ಡಾ.ಮಂತರ್ ಗೌಡ ಭೂಮಿಪೂಜೆ ನೆರವೇರಿಸಿದರು. ಎಲ್ಲಾ ಸಮುದಾಯಗಳ ಪ್ರಗತಿಗೆ ಸರಕಾರ ಬದ್ಧವಾಗಿದೆ. ಗುಣ ಮಟ್ಟದ ಕಾಮಗಾರಿ ಶೀಘ್ರ ಪೂರ್ಣಗೊಳ್ಳಲಿದೆ. ಭವನದ ಕಾಮಗಾರಿಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಶಾಸಕರು ತಿಳಿಸಿದರು.

ಅಮ್ಮ ಕೊಡವ ಸಮಾಜದ ಮಾಚಮಂಡ ಬಿ.ಮಾದಮ್ಮಯ್ಯ, ಗೌರಮ್ಮ ಮಾದಮ್ಮಯ್ಯ, ನಾರಿಮಂಡ ಬಿ.ಪಾಲಾಕ್ಷ, ರೇವತಿ ಪಾಲಾಕ್ಷ, ಕೊಂಡಿಯಮ್ಮಂಡ ಕಿಶೋರ್ ಕುಮಾರ್, ಇಂದಿರಾ ಕಿಶೋರ್ ಕುಮಾರ್, ನೆರಿಯಂಡಮ್ಮನ ಜನಾರ್ಧನ ಸಮಿತಿಯ ಸದಸ್ಯರು, ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಆಚಾರ್ಯ, ಮಹಿಳಾ ಕಾಂಗ್ರೆಸ್ ನಗರಾಧ್ಯಕ್ಷೆ ಶಶಿಕಲಾ, ಬ್ಲಾಕ್ ಅಧ್ಯಕ್ಷ ಹೆಚ್.ಎ.ಹಂಸ, ಪ್ರಮುಖರಾದ ವಿ.ಜಿ.ಮೋಹನ್, ಹರಿಪ್ರಸಾದ್, ಯಶ್, ಪವಿತ್ರ ಲೀಲಾ ಶೇಷಮ್ಮ, ಸೂರಿ, ಸುಬ್ರಮಣಿ, ವಸಂತ ಭಟ್, ಹಬೀಬ್, ಶರಣು, ಮಂಜುನಾಥ್, ಕೋಚನ ಚೇತನ್ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಟ್ಯಾಂಕ್ ಸಮೀಪದಲ್ಲೇ ಪ್ರಾಣಿಯ ಮೂಳೆ ತುಂಬಿದ್ದ ಪ್ಲಾಸ್ಟಿಕ್ ಚೀಲ

ಸಿದ್ದಾಪುರ: ನೆಲ್ಯಹುದಿಕೇರಿ 4ನೇ ವಾರ್ಡ್ ಅತ್ತಿಮಂಗಲ ಸಮೀಪ ರಸ್ತೆ ಬದಿ ಪ್ರಾಣಿಯ ಮೂಳೆ, ಚರ್ಮ ಹಾಗೂ ಇನ್ನಿತರ ತ್ಯಾಜ್ಯಗಳನ್ನು ತುಂಬಿರುವ ಪ್ಲಾಸ್ಟಿಕ್ ಚೀಲಗಳನ್ನು ತಂದು ನೀರಿನ ಟ್ಯಾಂಕ್ ಸಮೀಪದಲ್ಲೇ ಎಸೆಯಲಾಗಿದ್ದು ದುರ್ವಾಸನೆ ಬೀರುತ್ತಿದೆ. ಎಸೆಯಲಾಗಿರುವ ಪ್ರಾಣಿಯ ಕಳೇಬರ ಗೋವಿನದ್ದೋ ಅಥವಾ ಕಾಡುಕೋಣದ್ದೋ ಎಂಬ ಸಂಶಯ ಸಾರ್ವಜನಿಕರ ವಲಯದಲ್ಲಿ ಮೂಡಿದೆ.

ಜನಾಂಗಗಳ ನಡುವೆ ಸಂಘರ್ಷ ಉಂಟು ಮಾಡುವ ಉದ್ದೇಶದಿಂದ ಕೃತ್ಯ ಎಸಗಿರುವ ಸಂಶಯ ಇದೆ. ಈ ಕುರಿತು ಸ್ಥಳೀಯ ಪೊಲೀಸರು ತನಿಖೆ ನಡೆಸಬೇಕು. ಗ್ರಾಮ ಪಂಚಾಯಿತಿ ಕೂಡ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತಾಗಬೇಕು ಎಂದು ಸಾಮಾಜಿಕ ಹೋರಾಟಗಾರ ಪಿ.ಆರ್. ಭರತ್ ಆಗ್ರಹಿಸಿದ್ದಾರೆ.


ಚೀಲದಲ್ಲಿ ಪ್ರಾಣಿತ್ಯಾಜ್ಯ ಬಿಸಾಡಿರುವುದು.

ಸ್ವಯಂಸೇವೆ ಮಾಡಲು ಅಂತ್ಯವೇ ಇಲ್ಲ



ಎನ್‌ಎಸ್‌ಎಸ್ ಘಟಕದ ಸಮಾರೋಪ ಸಮಾರಂಭದಲ್ಲಿ ನೆಡಿಕ್ಟ್ ಆರ್.ಸಲ್ಡಾನ ಮಾತನಾಡಿದರು.

ವಿರಾಜಪೇಟೆ, ಜೂ.7–ಸಮಾಜದಲ್ಲಿ ಸ್ವಯಂ ಸೇವೆ ಸಲ್ಲಿಸಲು ಎಲ್ಲಿಯೂ ಅಂತ್ಯವೆಂಬುದಿಲ್ಲ. ಅವಕಾಶ ಸಿಕ್ಕಾಗಲೆಲ್ಲ ತನ್ನಿಂದಾದ ಸೇವೆ ಸಲ್ಲಿಸುವುದು ಉತ್ತಮ ಸ್ವಯಂ ಸೇವಕನ ಲಕ್ಷಣ ಎಂದು ಲಾರ್ಡ್ಸ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕರಾದ ಬೆನೆಡಿಕ್ಟ್ ಆರ್.ಸಲ್ಡಾನ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಕಾವೇರಿ ಕಾಲೇಜಿನಲ್ಲಿ ನಡೆದ ಎನ್‌ಎಸ್‌ಎಸ್ ಘಟಕದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಎನ್‌ಎಸ್‌ಎಸ್ ಎಂಬುದು ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವ ವಿಕಸನಕ್ಕೆ ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಸಮರ್ಪಕವಾದ ವೇದಿಕೆಯಾಗಿದೆ. ಇದರ ಮೂಲಕ ವಿದ್ಯಾರ್ಥಿಗಳು ಸಹಕಾರ, ಪ್ರಕೃತಿ ರಕ್ಷಣೆ, ಸ್ವಚ್ಚತೆ, ನೈರ್ಮಲ್ಯದಂತಹ ವಿಚಾರಗಳನ್ನು ಅರಿತು ಪ್ರತಿಫಲದ ಅಪೇಕ್ಷೆ ಇಲ್ಲದೆ ಸೇವೆ ಸಲ್ಲಿಸಲು ಸಿದ್ದರಿರಬೇಕು. ನಾನೊಬ್ಬನೆ ಬೆಳೆದರೆ ಸಾಲದು. ನನ್ನೊಂದಿಗೆ ಇತರರನ್ನು ಬೆಳೆಸಬೇಕೆಂಬ ಭಾವನೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದರು.

ಎನ್‌ಎಸ್‌ಎಸ್ ಘಟಕದ ಯೋಜನಾಧಿಕಾರಿ ಬಿ.ಬಿ.ಸುನಿಲ್ ಕುಮಾರ್, ಎನ್‌ಎಸ್‌ಎಸ್ ಘಟಕದ ವತಿಯಿಂದ ನಡೆದ ಕಾರ್ಯಕ್ರಮ, ವಿಶೇಷ ಶಿಬಿರ, ಸ್ವಯಂ ಸೇವಕ ಸಾಧನೆಯನ್ನು ಒಳಗೊಂಡ ವರದಿಯೊಂದಿಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ನೆನಪಿನ ಕಾಣಿಕೆ ಹಾಗೂ ಪ್ರಮಾಣಪತ್ರವನ್ನು ವಿತರಿಸಲಾಯಿತು. ಹಿರಿಯ ಸ್ವಯಂ ಸೇವಕರು ಮೂರು ವರ್ಷಗಳ ಸೇವಾ ಪಯಣದ ಅನುಭವ ಹಂಚಿಕೊಂಡರು.

ಕಾಲೇಜಿನ ಪ್ರಾಂಶುಪಾಲೆ ಡಾ ಕೆ.ಜಿ. ವೀಣಾ, ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಐಕ್ಯೂಎಸಿ ಸಂಚಾಲಕ ಎಲ್.ಆರ್.ರಾಘವೇಂದ್ರ, ಎನ್.ಎಸ್.ಎಸ್ ನಾಯಕ ರಿಶಿ ಸೋಮಣ್ಣ ಉಪಸ್ಥಿತರಿದ್ದರು. ಸದಸ್ಯರಾದ ಮಾಣಿಕ್ಯ, ಲೋಚನ, ಧನುಶ್ರೀ, ಹರೀಶ್, ಕಾಲೇಜಿನ ಉಪನ್ಯಾಸಕ ವರ್ಗ ಹಾಗೂ ಸ್ವಯಂಸೇವಕರು ಹಾಜರಿದ್ದರು.

ಯಾವ ಸರ್ಕಾರವೂ ಒಳಮೀಸಲಾತಿಗೆ ತಿದ್ದುಪಡಿ, ಕಾನೂನು ತರಲಿಲ್ಲ: ಆರೋಪ


ಜಿಲ್ಲಾ ಡಾ.ಬಾಬುಜಗಜೀವನ್ ರಾಮ್ ಸಂಘಟನೆಗಳ ಒಕ್ಕೂಟ ಪ್ರತಿಭಾವಂತ ಮಾದಿಗ ವಿದ್ಯಾರ್ಥಿಗಳನ್ನು ಗೌರವಿಸಿತು.

ಚಾಮರಾಜನಗರ, ಜೂ.7– ಯಾವ ಸರ್ಕಾರವು ಒಳ ಮೀಸಲಾತಿಗೆ ಹೊಸ ತಿದ್ದುಪಡಿ, ಹೊಸ ಕಾನೂನು ಜಾರಿಮಾಡಲಿಲ್ಲ ಎಂದು ಕೇಂದ್ರ ಮಾಜಿ ಸಚಿವ ಎ.ನಾರಾಯಣಸ್ವಾಮಿ ಆರೋಪಿಸಿದರು.

ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾ ಡಾ.ಬಾಬು ಜಗಜೀವನ್ ರಾಮ್ ಸಂಘಟನೆಗಳ ಒಕ್ಕೂಟ ವತಿಯಿಂದ ನಡೆದ ಮಾದಿಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಒಕ್ಕೂಟದ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಅವರು, ಒಳ ಮೀಸಲಾತಿ ಕೊಟ್ಟುಬಿಟ್ರು ಎಂದು ನಾವೆಲ್ಲರೂ ಬೆನ್ನು ತಟ್ಟಿಕೊಂಡೆವು. ಆದರೆ ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿ ಶೋಷಿತನಿಗೆ ಗ್ರಾಪಂ.ಜಿ.ಪಂ., ತಾ.ಪಂ, ಎಂಎಲ್‌ಎಗೆ, ಒಳ ಮೀಸಲಾತಿ ಕೊಡಬೇಕು ಎಂದು ಕಾನೂನು ಇದ್ದರೂ ಯಾವ್ರದೇ ನಾಯಕರಾಗಲಿ ಸಂಘಟನೆಗಳಾಗಲಿ ಮಾಧ್ಯಮ ಮುಂದೆ ಮಾತನಾಡುತ್ತಿಲ್ಲ ಎಂದು ಕಿಡಿಕಾರಿದರು.

ನೀವು ಮಾಡುವ ಪದವಿ ಸರ್ಟಿಫಿಕೇಟ್‌ಗೆ ಉದ್ಯೋಗ ಕೊಡುವುದಿಲ್ಲ. ನಿಮ್ಮ ಜ್ಞಾನದ ಮೇಲೆ ಉದ್ಯೋಗ ಅದರಿಂದ ವಿದ್ಯಾರ್ಥಿಗಳು ಚೆನ್ನಾಗಿ ಓದಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸವಾಲಿನಿಂದ ಎದುರಿಸುವ ಶಕ್ತಿ, ಸಾಮರ್ಥ್ಯದ ಜ್ಞಾನವನ್ನು ಮೈಗೂಡಿಸಿಕೊಳ್ಳಬೇಕು. ಜಿಲ್ಲೆಯಲ್ಲಿ ಐಎಎಸ್ ಕೋಚಿಂಗ್ ಸೆಂಟರ್ ತೆರೆದು ಸಮುದಾಯ ಮಕ್ಕಳಿಗೆ ಮುಂದಿನ ವರ್ಷದಿಂದ ಐಎಎಸ್, ಐಪಿಎಸ್ ತರಬೇತಿ ನೀಡುವಂಥ ಕೆಲಸವನ್ನು ಮಾಡಬೇಕು ಅದಕ್ಕೆ ಬೇಕಾದ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.

ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿ, ರಾಜಕಾರಣ ಮೊದಲಿನ ರೀತಿ ಇಲ್ಲ ಹಾಗಾಗಿ ವಿದ್ಯಾರ್ಥಿಗಳು ರಾಜಕಾರಣಕ್ಕೆ ಹೋಗದೆ, ಸಮಾಜದಲ್ಲಿ ಉತ್ತಮ ನಾಗರಿಕರಾಗುವ ಕೆಲಸವನ್ನು ನೀವು ಮಾಡಬೇಕು ಎಂದರು. ಕರ್ನಾಟಕ ಸಂಸ್ಕೃತ ವಿದ್ಯಾಲಯ ಉಪ ಕುಲಪತಿ ಡಾ.ವಿ.ಗಿರೀಶ್ ಚಂದ್ರು ಮಾತನಾಡಿ, ತಾಳ್ಮೆ ನಮ್ಮೆಲ್ಲರ ಅಸ್ತ್ರ, ವಿದ್ಯೆಯಿಂದ ವಿನಯ ಬರುತ್ತದೆ. ಸರ್ಕಾರಿ ನೌಕರರಾದವರು ತಂದೆ, ತಾಯಿ, ಸಮಾಜವನ್ನು ಪ್ರೀತಿಸಬೇಕು. ವಿದ್ಯಾರ್ಥಿಗಳಿಗೆ ಶಿಕ್ಷಣ, ಕೌಶಲ್ಯ, ಶಿಸ್ತು ಇರಬೇಕು ಎಂದರು.

ಕೃಷಿ ಇಲಾಖೆ ಎಸ್ಸಿ,ಎಸ್ಟಿ ನೌಕರರ ಸಂಘದ ರಾಜ್ಯಾಧ್ಯಕ್ಷ ಎಂ.ತಿರುಮಲೇಶ್ ಮುಖ್ಯಭಾಷಣ ಮಾಡಿದರು. ಸಂಘದ ಗೌರವಾಧ್ಯಕ್ಷ ಬಸವನಪುರ ರಾಜಶೇಖರ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಂಜುನಾಥ ಓಣಿಕೇರಿ, ಡಾ.ಗಿರೀಶ್‌ಚಂದ್ರ, ಎಂ. ಮುನಿರಾಜು, ಎಲ್.ಮಧುಕರ್, ಎಂ.ಪ್ರಶಾಂತ್ ಕುಮಾರ್, ಬಿ.ಶಿವನಂಜು, ಪ್ರೊ.ಹೆಚ್.ಎಸ್. ಲಿಂಗಣ್ಣ, ಎಸ್.ರಾಜಣ್ಣ ಲಿಂಗರಾಜು, ಕಾಗಲವಾಡಿ ಮಹಾದೇವಸ್ವಾಮಿ, ಸಿದ್ದಾರ್ಥ, ಎಂ. ಚಂದ್ರಶೇಖರ್, ಮಣಿ ಚೆನ್ನಬಸವಯ್ಯ, ಮಹಾದೇವಸ್ವಾಮಿ, ಶಿವರಾಜು, ಸಿದ್ದಪ್ಪ, ಬಸವನಪುರ ರಾಜಶೇಖರ ಇತರರಿದ್ದರು.

ಗ್ರಂಥಾಲಯಗಳು ವ್ಯಕ್ತಿತ್ವ ವಿಕಸನದ ಕೇಂದ್ರವಾಗಲಿ


ನಾಗವಳ್ಳಿಯಲ್ಲಿ ಗ್ರಂಥಾಲಯವನ್ನು ಉದ್ಯಮಿ ಡಾ. ಈಶ್ವರ ಘಟ್ಟಿ ಉದ್ಘಾಟಿಸಿದರು.


ಚಾಮರಾಜನಗರ, ಜೂ.7– ಗ್ರಾಮದಲ್ಲಿ ಗ್ರಂಥಾಲಯ ಇದ್ದರೆ ವಿದ್ಯಾರ್ಥಿಯ ಜೀವನವನ್ನೇ ಬದಲಾಯಿಸುತ್ತದೆ. ಶಿಕ್ಷಣದ ಜೊತೆಯಲ್ಲಿ ಗ್ರಂಥಾಲಯದಲ್ಲಿ ಇರುವ ಪುಸ್ತಕಗಳನ್ನು ಓದುವುದರಿಂದ ಜ್ಞಾನವು ವೃದ್ಧಿಯಾಗುತ್ತದೆ. ಎಂದು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಉದ್ಯಮಿ ಡಾ. ಅರವಿಂದ ಈಶ್ವರ ಘಟ್ಟಿ ತಿಳಿಸಿದರು.

ತಾಲೂಕಿನ ನಾಗವಳ್ಳಿ ಗ್ರಾಮದ ರಾಜಗಿರಿ ಬುದ್ಧ ವಿಹಾರ ಟ್ರಸ್ಟ್‌ನ ಆವರಣದಲ್ಲಿ ರಾಜ್ಯ ಸರ್ಕಾರಗಳ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ದತೆಯ ಬಗ್ಗೆ ಗ್ರಂಥಾಲಯವನ್ನು ಉದ್ಘಾಟಿಸಿ, ನಾಗವಳ್ಳಿ ರಾಜಗಿರಿ ಬುದ್ಧ ವಿಹಾರದಲ್ಲಿ ಆರಂಭಗೊಂಡಿರುವ ಈ ಗ್ರಂಥಾಲಯವು ಕೇವಲ ಪುಸ್ತಕಗಳ ಸಂಗ್ರಹವಾಗಿರದೆ. ಜ್ಞಾನ, ಚಿಂತನೆ ಮತ್ತು ವ್ಯಕ್ತಿತ್ವ ವಿಕಸನದ ಕೇಂದ್ರವಾಗಿ ಬೆಳೆಯಬೇಕು. ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣಕ್ಕೆ ಗ್ರಂಥಾಲಯವನ್ನು ಬಳಕೆ ಮಾಡಿಕೊಳ್ಳಬೇಕು. ಇಲ್ಲಿ ಯುಪಿಎಸ್‌ಸಿ, ಕೆಪಿಎಸ್‌ಸಿ, ಎಸ್.ಎಸ್.ಸಿ ಬ್ಯಾಂಕಿಂಗ್, ರೈಲ್ವೆ, ಶಿಕ್ಷಕರ ಹಾಗೂ ಇನ್ನು ಇತರೆ ನೇಮಕಾತಿ ಪರೀಕ್ಷೆಗೆ ಉಪಯೋಗವಾಗುವಂಥ ಪುಸ್ತಕಗಳನ್ನು ಇಡಲಾಗಿದೆ. ನಿರಂತರ ಓದು, ಪರಿಶ್ರಮ ಮತ್ತು ಆತ್ಮ ವಿಶ್ವಾಸದಿಂದ ಯಶಸ್ವಿನ ಶಿಖರವನ್ನು ತಲುಪಬಹುದು ಆದ್ದರಿಂದ ಯುವಕ, ಯುವತಿಯರು ಗ್ರಂಥಾಲ ವನ್ನು ಜ್ಞಾನದ ಮಂದಿರ ಎಂದು ಪರಿಗಣಿಸಿ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಆರೋಗ್ಯ ಮತ್ತು ಕುಟುಂಬ ಇಲಾಖೆ ಶಾಖಾಧಿಕಾರಿ ನಾಗವಳ್ಳಿ ಗ್ರಾಮದ ಅಣ್ಣಪ್ಪಸ್ವಾಮಿ ಮಾತನಾಡಿ, ಹೆಚ್ಚಿನ ಶಿಕ್ಷಣಕ್ಕೆ ಒತ್ತು ನೀಡಿ ವಿದ್ಯಾರ್ಥಿಯನ್ನು ಪ್ರೋತ್ಸಾಹಿಸಿದರೆ. ವಿದ್ಯಾರ್ಥಿಯ ಭವಿಷ್ಯ ರೂಪುಗೊಳ್ಳಲಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಉದ್ದೇಶದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾಭ್ಯಾಸಕ್ಕೆ ಬೇಕಾದ ಪುಸ್ತಕಗಳನ್ನು ಖಾಸಗಿ ಗ್ರಂಥಾಲಯದ ರೂಪದಲ್ಲಿ ಇಡಲಾಗಿದೆ. ಓದುವ ವಿದ್ಯಾರ್ಥಿಗಳು ಯಾವ ಸಮಯದಲ್ಲಾದರು ಪುಸ್ತಕಗಳ ಉಪಯೋಗ ಪಡೆದು ವಿದ್ಯಾವಂತರಾಗಬೇಕು ಎಂದರು.

ರಂಗಸ್ವಾಮಿ, ಗ್ರಾಪಂ ಸದಸ್ಯ ಪ್ರಶಾಂತ್, ರಾಜ್‌ಕುಮಾರ್, ನಾಗಯ್ಯ ಮಾತನಾಡಿದರು. ರಾಜಗಿರಿ ಬುದ್ದ ವಿಹಾರ ಟ್ರಸ್ಟ್‌ನ ಅಧ್ಯಕ್ಷ ಚಿನ್ನಸ್ವಾಮಿ, ಕಾರ್ಯ ದರ್ಶಿ ಗೌರೀಶ್ ಹಾಗೂ ಶಿಕ್ಷಕರಾದ ಸಿ. ನಾಗರಾಜು, ಎನ್.ಎಸ್. ಮಹದೇವ ಸ್ವಾಮಿ, ವಿಜಯಕುಮಾರ್, ಹಾಗೂ ಭೋಗಪುರ ನಾಗೇಂದ್ರ ಮತ್ತು ಗ್ರಾಮಸ್ಥರು, ಯುವಕರು ಉಪಸ್ಥಿತರಿದ್ದರು.

ಕ್ರೀಡಾಂಗಣದಲ್ಲಿ ಬ್ಯಾಡ್ಮಿಂಟನ್ ಆಟಕ್ಕೆ ಅವಕಾಶಕ್ಕೆ ಆಗ್ರಹ


ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ಸದಸ್ಯರು ಡಿಸಿ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ, ಜೂ.7–ಅಂಬೇಡ್ಕರ್ ಕ್ರೀಡಾಂಗಣದ ಒಳಾಂಗಣ ಕಾಮಗಾರಿಯನ್ನು ಪೂರ್ಣಗೊಳಿಸಿ, ಕೂಡಲೇ ಬ್ಯಾಡ್ಮಿಂಟನ್ ಆಟ ಆಡಲು ಅವಕಾಶ ಕಲ್ಪಿಸಿಕೊಡುವಂತೆ ಒತ್ತಾಯಿಸಿ ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಿತು.

2 ತಿಂಗಳಿನಿಂದ ಅಂಬೇಡ್ಕರ್ ಕ್ರೀಡಾಂಗಣದ ಒಳಾಂಗಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ತೀರಾ ಮಂದಗತಿಯಲ್ಲಿ ನಡೆಯುತ್ತಿದ್ದು, ಇದರಿಂದ ಆಟಗಾರರಿಗೆ ತುಂಬಾ ತೊಂದರೆಯಾಗುತ್ತಿದೆ. ಆದುದರಿಂದ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ತಕ್ಷಣವೇ ಆಟಗಾರರಿಗೆ ಆಟ ಆಡಲು ಅನುವು ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ಒಳಾಂಗಣದ ಒಳಗಡೆ ಗೋಡೆಗಳಿಗೆ ಬಣ್ಣ ಹೊಡೆಸುವುದು, ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆ ಮಾಡಿಸುವುದು, ಬ್ಯಾಡ್ಮಿಂಟನ್ ಅಂಕಣದ ಸುತ್ತಾ ಗ್ರೀನ್ ಮ್ಯಾಟ್ ಅಳವಡಿಸುವುದು, ಆಟಗಾರರಿಗೆ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಮಾಡಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದರು.

ಜಿಲ್ಲಾ ಕ್ರೀಡಾಂಗಣ ಸಲಹಾ ಸಮಿತಿ ಸದಸ್ಯ ಶ್ರೀನಿವಾಸಪ್ರಸಾದ್, ಷಟಲ್ ಬ್ಯಾಡ್ಮಿಂಟನ್ ಆಟಗಾರರಾದ ಶ್ರೀ ನಿಧಿಕುದರ್, ಷಟಲ್ ಬ್ಯಾಡ್ಮಿಂಟನ್ ಆಟಗಾರರಾದ ಸಿ.ಎಸ್. ಅಕ್ಷಯ್, ಮಲ್ಲಪ್ಪ, ಕಿರಣ್, ಡಾ.ಪ್ರವೀಣ್, ವಿಜಯ ಕುಮಾರ್, ಲೋಕೇಶ್, ಅರುಣ್, ಪರಶಿವಮೂರ್ತಿ, ಭರತ್ ಇತರರು ಹಾಜರಿದ್ದರು.

ಜಾನಪದ ಕಲೆಗಳ ತವರೂರಿನಲ್ಲಿ ಸಾಂಸ್ಕೃತಿಕ ಹಬ್ಬಕ್ಕೆ ಚಾಲನೆ


ನಮ್ಮ ಚಾಮರಾಜನಗರ ಸಾಂಸ್ಕೃತಿಕ ಹಬ್ಬವನ್ನು ಹೆಚ್ಚುವರಿ ಡಿಸಿ ಟಿ.ಜವರೇಗೌಡ ಉದ್ಘಾಟಿಸಿದರು.

ಚಾಮರಾಜನಗರ, ಜೂ.7–ಹೆಚ್ಚು ಜಾನಪದ ಕಲಾವಿದರನ್ನು ಹೊಂದಿರುವ ಜಿಲ್ಲೆಯು ಜಾನಪದ ಕಲೆಗಳ ತವರೂರಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಹೇಳಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ನಮ್ಮ ಚಾಮರಾಜನಗರ ಸಾಂಸ್ಕೃತಿಕ ಹಬ್ಬ ಉದ್ಘಾಟಿಸಿ, ಶಿವು ಡಾ.ಎಸ್.ಪಿ ಹೆಸರಿನಲ್ಲಿ ಕಲಾ ವೇದಿಕೆ ಕಟ್ಟಿಕೊಂಡು ಜಾನಪದ ಕಲಾವಿದರನ್ನು ಗುರುತಿಸಿರುವುದಕ್ಕೆ ಶ್ಲಾಘಿಸಿ, ಇಂತಹ ಕೆಲಸ ಮುಂದಿನ ದಿನಗಳಲ್ಲಿ ಹೆಚ್ಚು ಹೆಚ್ಚು ಮಾಡಲಿ ಎಂದು ಆಶಿಸಿದರು.

ಪ್ರಶಸ್ತಿ ಪ್ರದಾನ: ಡಾ.ರಮೇಶ್ ಉಡಪ, ಡಾ.ಶಶಿಕಲಾ ರಮೇಶ್ ಅವರಿಗೆ ಗಡಿನಾಡ ವೈದ್ಯ ರತ್ನ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಡಾ.ಗಂಗೂಬಾಯಿ ಹಾನಗಲ್ ಉದ್ಯಮಿ ಶ್ರೀನಿಧಿಕುದರ್ ಅಧ್ಯಕ್ಷತೆ ವಹಿಸಿದ್ದರು. ಯಳಂದೂರು ಕರ್ನಾಟಕ ಪಬ್ಲಿಕ್ ಶಾಲೆ ಪ್ರಾಂಶುಪಾಲ ಆರ್.ನಂಜುಂಡಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಿ.ಸಿದ್ದರಾಜು, ಅಂತರರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ, ಎನ್.ಎಲ್.ನಾರಾಯಣಸ್ವಾಮಿ, ಕರವೇ ಜಿಲ್ಲಾ ಗೌರವ ಅಧ್ಯಕ್ಷ ಕೃಷ್ಣನಾಯಕ, ಪವನ್ ಜೈ ಶಂಕರ್, ಎಲ್.ಸುರೇಶ್, ರವಿಚಂದ್ರ ಪ್ರಸಾದ್ ಕಹಳೆ, ಕಲಾ ವೇದಿಕೆ ಅಧ್ಯಕ್ಷ ಎಚ್.ಎಂ.ಶಿವಣ್ಣ, ಪ್ರಧಾನ ಕಾರ್ಯದರ್ಶಿ ಎನ್.ಜೋಸೆಫ್, ಉಪಾಧ್ಯಕ್ಷೆ ವಸಂತ ಬಂಗಾರು, ಕಲೆ ನಟರಾಜು, ರಂಗನಾಥ್ ಇತರರು ಭಾಗವಹಿಸಿದ್ದರು.

ಮೋದಿಯವರ ಆಶಯದಂತೆ ಪ್ರತಿಯೊಬ್ಬರೂ ಗಿಡನೆಡಿ


ಬಿಜೆಪಿ ನಗರ ಮಂಡಲದಿಂದ ಗಿಡನೆಡುವುದರ ಮೂಲಕ ವಿಶ್ವಪರಿಸರ ದಿನಾಚರಣೆ ಆಚರಿಸಲಾಯಿತು.

ಚಾಮರಾಜನಗರ, ಜೂ.7–ಪ್ರಧಾನಿ ನರೇಂದ್ರಮೋದಿಯವರ ಆಶಯದಂತೆ ಪ್ರತಿಯೊಬ್ಬರೂ ಒಂದೊಂದು ಗಿಡನೆಟ್ಟು ಪರಿಸರ ಉಳಿಸಿ ಬೆಳೆಸಬೇಕು ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಸಲಹೆ ನೀಡಿದ್ದಾರೆ.

ನಗರದ ರಾಮಸಮುದ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಬಿಜೆಪಿ ನಗರ ಮಂಡಲ ವತಿಯಿಂದ ನಡೆದ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡನೆಟ್ಟು ನೀರೆರೆದು, ಪ್ರಧಾನಿ ಮೋದಿ ಕರೆಯಂತೆ ಸ್ವಚ್ಛ ಭಾರತ ಅಭಿಯಾನದಲ್ಲಿ ಪ್ರತಿಯೊಬ್ಬ ನಾಗರೀಕನೂ ತನ್ನ ತಾಯಿ ಹೆಸರಿನಲ್ಲಿ ಒಂದು ಗಿಡ ನೆಡುವ ಮೂಲಕ ಪರಿಸರ ಕಾಪಾಡಬೇಕು ಎಂಬ ಆದೇಶದಿಂದ ಇಡೀ ರಾಷ್ಟ್ರದಲ್ಲಿ ಬಿಜೆಪಿ ಶಾಲೆಗಳು, ಆಸ್ಪತ್ರೆಗಳು ಸ್ವಚ್ಛ ಮಾಡುವುದು, ಗಿಡ ನೆಡುವ ಮುಖಾಂತರ ವಿಶ್ವ ಪರಿಸರ ದಿನಾಚರಣೆ ಮಾಡಲಾಗುತ್ತಿದೆ ಎಂದರು.

ಮಾಜಿ ಶಾಸಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ ಮಾತನಾಡಿ, ಸ್ವಚ್ಛಭಾರತ ಅಭಿಯಾನದಡಿಯಲ್ಲಿ ದೇಶದಲ್ಲಿ ಸುಮಾರು 12 ಕೋಟಿಗೂ ಹೆಚ್ಚು ಶೌಚಾಲಯ ನಿರ್ಮಿಸುವ ಮೂಲಕ ಜನರಲ್ಲಿ ಪರಿಸರ ಜಾಗೃತಿ ಮೂಡಿಸಿದ ಕೀರ್ತಿ ಮೋದಿ ಅವರಿಗೆ ಸಲ್ಲುತ್ತದೆ ಎಂದರು.

ನಗರಸಭಾ ಮಾಜಿ ಅಧ್ಯಕ್ಷ ಸುರೇಶ್, ನಗರಮಂಡಲ ಅಧ್ಯಕ್ಷ ಶಿವರಾಜು, ಓಬಿಸಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಚೂಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ, ಬಾಲಸುಬ್ರಹ್ಮಣ್ಯಂ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಭೇಂದ್ರಪ್ಪ, ಜಿಲ್ಲಾ ವಕ್ತಾರ ಮನೋಜ್ ಪಟೇಲ್, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ಅರಕಲವಾಡಿ ನಾಗೇಂದ್ರ, ಮುಖಂಡ ಅರಕಲವಾಡಿ ನಾಗೇಂದ್ರ, ಸಾಹಿತಿ ಮಂಜುನಾಥಪ್ರಸನ್ನ, ನಗರ ಮಂಡಲ, ಪ್ರಧಾನ ಕಾರ್ಯದರ್ಶಿಗಳಾದ ಕೂಸಣ್ಣ ಭಾಸ್ಕರ್, ಎಸ್‌ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯಸುಂದರ್, ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್, ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಚಂದ್ರು, ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ, ನಗರಸಭಾ ಸದಸ್ಯರಾದ ಶೇಖರ್, ಮಂಜುನಾಥ್, ಶಿವಣ್ಣ, ಎಸ್‌ಸಿ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮಸಮುದ್ರ ಶಿವು, ಮುಖಂಡರಾದ ಚಂದ್ರಶೇಖರ್, ಬಂಗಾರನಾಯಕ, ಪರಶಿವಯ್ಯ, ಮಣಿ, ಕಾರ್ಯಾಲಯ ಕಾರ್ಯದರ್ಶಿ ರಂಗಸ್ವಾಮಿ, ಮಂಜುನಾಥ್, ವೀರೇಂದ್ರ, ಶಾಲೆಯ ಮುಖ್ಯ ಶಿಕ್ಷಕ ಎಂ. ನಂಜುಂಡಸ್ವಾಮಿ, ಶಿಕ್ಷಕಿ ದೇವಿಕಾ ಇತರರು ಭಾಗವಹಿಸಿದ್ದರು.

ಮೈಸೂರು ಟ್ರಾವೆಲ್ ಮಾರ್ಟ್‌ನಿಂದ ಪ್ರವಾಸೋದ್ಯಮ, ಹೋಟೆಲ್ ಉದ್ಯಮ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ

ಮೈಸೂರು ಟ್ರಾವೆಲ್ ಮಾರ್ಟ್-26 ಸಮಾರೋಪ



ರಾಜ್ಯ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಜಿ.ಕೆ.ಶೆಟ್ಟಿ ಅವರನ್ನು ಎಂಟಿಎಂ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು, ಜೂ.7(ವಿವಿಹೆಚ್)– ಎಂಟಿಎಂ (ಮೈಸೂರು ಟ್ರಾವೆಲ್ ಮಾರ್ಟ್) ಮೂಲಕ ಮೈಸೂರು ಪ್ರವಾಸೋದ್ಯಮ ಹಾಗೂ ಹೋಟೆಲ್ ಉದ್ಯಮ ಅಂತಾ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ ಎಂದು ರಾಜ್ಯ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಜಿ.ಕೆ.ಶೆಟ್ಟಿ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರ 2ನೇ ಹಂತದ ಜಗನ್ನಾಥ ಕಲಾ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ (ಜಿಸಿಎಸಿ) ಟ್ರಾವೆಲ್ಸ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿರುವ ಮೈಸೂರು ಟ್ರಾವೆಲ್ ಮಾರ್ಟ್–26ರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ವೃತ್ತಿ ಯಾವುದೇ ಇರಲಿ, ಅದರಲ್ಲಿ ನಾವೀನ್ಯತೆ ಹಾಗೂ ಹೊಸ ಹೊಸ ವಿಚಾರಗಳನ್ನು ತರದೆ ಹೋದಲ್ಲಿ ಹಿಂದುಳಿಯುವುದು ಖಚಿತ. ಹಾಗೆಯೇ ಇಂದಿನ ಬದಲಾಗುತ್ತಿರುವ ಕಾಲಘಟಕ್ಕೆ ಹೊಂದಿಕೊಳ್ಳುವಂತೆ ನಿರಂತರ ಹೊಸತನಕ್ಕೆ ಮನ್ನಣೆ ಕೊಟ್ಟಾಗ ಮಾತ್ರ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿದವರು ಅಭಿವೃದ್ಧಿ ಹೊಂದಬಹುದು ಎಂದು ತಿಳಿಸಿದರು.

ಒಂದು ಕಾಲದಲ್ಲಿ ಪ್ರವಾಸಿಗರಿಗೆ ಕರ್ನಾಟಕದಲ್ಲಿನ ಅಚ್ಚುಮೆಚ್ಚಿನ ಸ್ಥಳ ಎಂದರೆ ಅದು ಮೈಸೂರಾಗಿತ್ತು. ಕಲೆ, ಸಂಸ್ಕೃತಿ, ಉತ್ತಮ ವಾತಾವರಣಕ್ಕೆ ಮನಸೋಲುತ್ತಿದ್ದರು. ಆದರೆ, ಈಗ ಮೊಬೈಲ್ ಗೀಳಿಗೆ ಹೋಗಿರುವ ಜನರು, ಹೊಸತನವನ್ನು ಹುಡುಕಲು ಹಂಬಲಿಸುತ್ತಾರೆ. ಮೋಜು ಮಸ್ತಿಗಾಗಿ ಇಂದು ಬೀಚ್, ರೆಸಾರ್ಟ್ ಮುಂತಾದವುಗಳ ಮೇಲಿನ ಆಕರ್ಷಣೆಗಳು ಹೆಚ್ಚಿವೆ. ಇದರ ನಡುವೆಯೂ ಹೊಸತನ ಕಾಯ್ದುಕೊಂಡು, ಅವುಗಳನ್ನು ಕಾರ್ಯರೂಪಕ್ಕೆ ತರುವ ಕೆಲಸ ಮಾಡಬೇಕಿರುವುದು ಉದ್ಯಮಿಗಳ ಕರ್ತವ್ಯ ಎಂದು ಪ್ರತಿಪಾದಿಸಿದರು.

ಟ್ರಾವೆಲ್‌ಮಾರ್ಟ್‌ಗಳನ್ನು ಆಯೋಜಿಸಲು ಸರ್ಕಾರವು ಪ್ರೋತ್ಸಾಹ ನೀಡಬೇಕು. ಇದು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಪೂರಕ. ಕೇರಳದಲ್ಲಿ ಪ್ರತಿ 2 ವರ್ಷಗಳಿಗೊಮ್ಮೆ ಟ್ರಾವೆಲ್ ಮಾರ್ಟ್ ನಡೆಯುತ್ತಿದ್ದು, ಸುಮಾರು 3,500 ಮಂದಿ ವಿದೇಶಿ ಟ್ರಿಪ್ ಆಯೋಜಕರು ಆಗಮಿಸುತ್ತಾರೆ. ಅಂತ ಸಾಧ್ಯತೆಗಳು ನಮ್ಮಲ್ಲೂ ಇದ್ದು, ನಿರಂತರತೆ ಕಾಯ್ದುಕೊಳ್ಳಬೇಕು ಎಂದರು.

ಉಪ ಛೇರ್ಮನ್ ಸಿ.ನಾರಾಯಣಗೌಡ ಮಾತನಾಡಿ, ಎಂಟಿಎಂ ಪ್ರತಿ 2 ವರ್ಷಗಳಿಗೊಮ್ಮೆ ನಡೆಯುವ ಕಾರ್ಯಕ್ರಮವಾಗಿದೆ. ಮೈಸೂರಿನ ಪ್ರವಾಸಿ ಸ್ಥಳಗಳನ್ನು ಮಾರ್ಕೆಟಿಂಗ್ ಮಾಡುವ ಉದ್ದೇಶ ಇದಾಗಿದ್ದು, ಇದರೊಂದಿಗೆ ಸ್ಥಳೀಯ ಆಹಾರ, ಜನಜೀವನ, ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸುವ ಕೆಲಸ ಮಾಡಲಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಪ್ರವಾಸೋದ್ಯಮ ಸೊಸೈಟಿ ಅಧ್ಯಕ್ಷ ಶ್ಯಾಮ್ ರಾಜು, ಮೈಸೂರು ಟ್ರಾವೆಲ್ ಮಾರ್ಟ್ ಆಯೋಜಕ ಸಮಿತಿ ಛೇರ್‌ಮನ್ ಸಿ.ಎ.ಜಯಕುಮಾರ್, ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಕೆ.ಬಿ.ಲಿಂಗರಾಜು ಉಪಸ್ಥಿತರಿದ್ದರು.

ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್: ಮಿರಾ ಆಂಡ್ರೀವಾ ಚಾಂಪಿಯನ್

ಮೈಸೂರು, ಜೂ.7(ವಿವಿಹೆಚ್)– ಪ್ಯಾರಿಸ್‌ನ ಕ್ಲೇ ಕೋರ್ಟ್‌ನಲ್ಲಿ ನಡೆದ ರೋಲ್ಯಾಂಡ್ ಗ್ಯಾರೋಸ್ (ಫ್ರೆಂಚ್ ಓಪನ್) 2026ರ ಮಹಿಳಾ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ 19 ವರ್ಷದ ರಷ್ಯಾದ ಆಟಗಾರ್ತಿ ಮಿರಾ ಆಂಡ್ರೀವಾ ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ.



ಫ್ರೆಂಚ್ ಓಪನ್ ಟ್ರೋಫಿ ಹಾಗೂ ತನ್ನ ಮುದ್ದು ಶ್ವಾನದೊಂದಿಗೆ ಮಿರಾ ಆಂಡ್ರೀವಾ.

ಜೂನ್ 6ರಂದು ನಡೆದ ಅಂತಿಮ ಹಣಾಹಣಿಯಲ್ಲಿ ಪೋಲೆಂಡ್‌ನ ಮಾಯಾ ಚ್ವಾಲಿನ್ಸ್ಕಾ ವಿರುದ್ಧ 6–3, 6–2 ನೇರ ಸೆಟ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ಆಂಡ್ರೀವಾ ತಮ್ಮ ಚೊಚ್ಚಲ ಗ್ರಾಂಡ್ ಸ್ಲಾಮ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಕೋರ್ಟ್ ಫಿಲಿಪ್–ಚಾಟ್ರಿಯರ್‌ನಲ್ಲಿ ನಡೆದ ಈ ಪಂದ್ಯದ ಆರಂಭದಲ್ಲಿ ಉಭಯ ಆಟಗಾರ್ತಿಯರ ನಡುವೆ ತೀವ್ರ ಪೈಪೋಟಿ ಕಂಡುಬಂತು. ಮೊದಲ ಐದು ಗೇಮ್‌ಗಳಲ್ಲಿ ಚ್ವಾಲಿನ್ಸ್ಕಾ 3–2 ಮುನ್ನಡೆ ಕಾಯ್ದುಕೊಂಡಿದ್ದರು. ಆ ನಂತರ ಆಕ್ರಮಣಕಾರಿ ಆಟಕ್ಕೆ ಮುಂದಾದ 8ನೇ ಶ್ರೇಯಾಂಕಿತೆ ಆಂಡ್ರೀವಾ, ಸತತ 9 ಗೇಮ್‌ಗಳನ್ನು ಗೆಲ್ಲುವ ಮೂಲಕ ಎದುರಾಳಿಗೆ ದಿಕ್ಕುತೋಚದಂತೆ ಮಾಡಿದರು. ಈ ಮೂಲಕ ಮೊದಲ ಸೆಟ್ ಅನ್ನು 6–3 ಅಂತರದಿಂದ ಗೆದ್ದುಕೊಂಡರು.

ಎರಡನೇ ಸೆಟ್‌ನಲ್ಲಿ 5–0 ಭಾರಿ ಮುನ್ನಡೆ ಪಡೆದ ಆಂಡ್ರೀವಾ, ಅಂತಿಮವಾಗಿ ಎದುರಾಳಿಯ ಸರ್ವ್ ಅನ್ನು ಬ್ರೇಕ್ ಮಾಡಿ 6–2 ಅಂತರದಿಂದ ದ್ವಿತೀಯ ಸೆಟ್ ಗೆದ್ದುಕೊಂಡರು.

ಈ ಮೂಲಕ ಪೋಲೆಂಡ್‌ನ ಮಾಯಾ ಚ್ವಾಲಿನ್ಸ್ಕಾ ಅವರನ್ನು 6–3, 6–2 ಅಂತರದಿಂದ ಸೋಲಿಸಿ ಮಿರಾ ಆಂಡ್ರೀವಾ ತಮ್ಮ ಚೊಚ್ಚಲ ಗ್ರಾಂಡ್ ಸ್ಲಾಮ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಮೈಸೂರು ಮಿತ್ರ ಸೋಮವಾರ 8 ಜೂನ್ 2026

ಶಿಕ್ಷಕರು ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿ

ವಾಟಾಳು ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ

ತಿ.ನರಸೀಪುರ, ಜೂ.7– ವಿದ್ಯಾರ್ಥಿಗಳ ಪ್ರತಿಭೆ ಗುರ್ತಿಸಿ ಗೌರವಿಸುವುದು ಸಮಾಜದ ಮಹತ್ತರ ಜವಾಬ್ದಾರಿಯಾಗಿದ್ದು, ಪ್ರತಿಭಾವಂತ ಯುವ ಜನತೆಗೆ ಸೂಕ್ತ ಪ್ರೋತ್ಸಾಹ ದೊರೆತಾಗ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ವಾಟಾಳು ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ವೀರಶೈವ ಲಿಂಗಾಯತ ಸಮಾನ ಮನಸ್ಕರ ವೇದಿಕೆಯಿಂದ ಹೊಸೂರುಹುಂಡಿ ಗ್ರಾಮದ ಶ್ರೀಗುರು ಮಲ್ಲೇಶ್ವರ ದಾಸೋಹ ಮಠದಲ್ಲಿ ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಶಿಕ್ಷಣ ಕೇವಲ ಅಂಕ ಗಳಿಕೆಗೆ ಸೀಮಿತವಾಗದೆ ವ್ಯಕ್ತಿತ್ವ ವಿಕಸನ, ಸಂಸ್ಕಾರ ಮತ್ತು ಸಾಮಾಜಿಕ ಜವಾಬ್ದಾರಿಯ ಅರಿವನ್ನು ಬೆಳೆಸುವ ಸಾಧನವಾಗಬೇಕು ಎಂದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಸಮಾಜಕ್ಕೆ ಒಳಿತಾಗುವ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು. ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಿ ಸಾರ್ವಜನಿಕವಾಗಿ ಗೌರವಿಸುವುದರಿಂದ ಅವರಲ್ಲಿ ಆತ್ಮವಿಶ್ವಾಸ ಹೆಚ್ಚುವುದರ ಜೊತೆಗೆ ಇತರ ವಿದ್ಯಾರ್ಥಿಗಳಿಗೂ ಸ್ಫೂರ್ತಿ ದೊರೆಯುತ್ತದೆ ಎಂದು ತಿಳಿಸಿದರು.

ಗ್ರಾಮೀಣ ವಿದ್ಯಾರ್ಥಿಗಳಲ್ಲಿಯೂ ಅಪಾರ ಪ್ರತಿಭೆ ಅಡಗಿದ್ದು, ಅವರಿಗೆ ಸರಿಯಾದ ಮಾರ್ಗದರ್ಶನ ಮತ್ತು ಅವಕಾಶ ದೊರೆತರೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಪೋಷಕರು ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಶಿಕ್ಷಕರು ವಿದ್ಯಾರ್ಥಿಗಳಲ್ಲಿರುವ ವಿಶೇಷ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಕರೆ ನೀಡಿದರು.

ಸುತ್ತೂರು ಶ್ರೀಕ್ಷೇತ್ರದ ಸಹಾಯಕ ಆಡಳಿತಾಧಿಕಾರಿ ತ್ರಿಪುರಾಂತಕ ಮಾತನಾಡಿ, ಲಿಂಗಾಯತ ಸಮುದಾಯದ ಯುವತಿ, ಯುವಕರು ಪ್ರೀತಿಸಿ ವಿವಾಹವಾಗಲು ಮುಂದಾದಲ್ಲಿ ಸ್ವಜಾತಿಯವರನ್ನೇ ಆಯ್ಕೆ ಮಾಡಿಕೊಂಡು ವಿವಾಹವಾಗುವುದು ಒಳಿತು. ಸಮಾಜದ ಸಂಪ್ರದಾಯ, ಕುಟುಂಬ ಮೌಲ್ಯಗಳು ಹಾಗೂ ಸಮುದಾಯದ ಏಕತೆ ಕಾಪಾಡುವ ದೃಷ್ಟಿಯಿಂದ ಯುವಜನತೆ ಜಾಗರೂಕತೆಯಿಂದ ನಡೆದುಕೊಳ್ಳಬೇಕು. ಕ್ಷಣಿಕ ಆಕರ್ಷಣೆ ಅಥವಾ ಭಾವೋದ್ವೇಗದ ನಿರ್ಧಾರಗಳಿಂದ ಜೀವನದ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಬಾರದು. ಶಿಕ್ಷಣ, ಸಂಸ್ಕಾರ ಹಾಗೂ ಹಿರಿಯರ ಮಾರ್ಗದರ್ಶನಕ್ಕೆ ಆದ್ಯತೆ ನೀಡಿ ಸುಖಮಯ ದಾಂಪತ್ಯ ಜೀವನ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ 41 ವಿದ್ಯಾರ್ಥಿಗಳನ್ನು ಪ್ರತಿಭಾ ಪುರಸ್ಕಾರ ದೊಂದಿಗೆ ಸನ್ಮಾನಿಸಿ, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆಗಳನ್ನು ವಿತರಿಸಲಾಯಿತು. ಮುಡುಕನಪುರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಹೊಸೂರು ಹುಂಡಿ ಗುರುಮಲ್ಲೇಶ್ವರ ದಾಸೋಹ ಮಠದ ರಾಜಶೇಖರ ಸ್ವಾಮೀಜಿ, ನರಗ್ಯಾತನಹಳ್ಳಿ ವಿರಕ್ತಮಠದ ಇಮ್ಮಡಿ ಶಿವಕುಮಾರ ಸ್ವಾಮೀಜಿ, ಬಸವ ಜಯಂತಿ ಆಚರಣೆ ಸಮಿತಿ ಮಾಜಿ ಜಿಲ್ಲಾಧ್ಯಕ್ಷ ಪ್ರದೀಪ, ತಾಪಂ ಮಾಜಿ ಸದಸ್ಯ ಸೀಹಳ್ಳಿ ಗುರುಮೂರ್ತಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸಿ.ಎಂ. ಪ್ರಕಾಶ್, ಸಾಂಸ್ಕೃತಿಕ ನಾಯಕ ಶ್ರೀಬಸವೇಶ್ವರ ಸೌಹಾರ್ದ ಸಹಕಾರ ಬ್ಯಾಂಕ್ ಅಧ್ಯಕ್ಷ ಸುಗಂಧರಾಜು, ಕೀಳನಪುರ ಮಾದಪ್ಪ, ಪೂಜಿತ್ ಮೆಡಿಕಲ್ ಪಿ.ಕುಮಾರ್, ಗುರುರಾಜ್, ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಸಿ.ಮಲ್ಲಿಕಾರ್ಜುನಸ್ವಾಮಿ, ಕಲ್ಕುಂದ ರತ್ನಶೇಖರ್, ಕುಪ್ಪೇಗಾಲ ಐನೋರಹಟ್ಟಿ ಶಿವಬಸಪ್ಪ, ಸೋಮಶೇಖರ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ವಕೀಲ ಜ್ಞಾನೇಂದ್ರ ಮೂರ್ತಿ, ಮೂಗೂರು ಅರವಿಂದ, ನಿವೃತ್ತ ಕೆಇಬಿ ನೌಕರ ಸಿದ್ದಲಿಂಗಸ್ವಾಮಿ, ತೋಂಟೇಶ್, ಅಕ್ಕಿ ನಾಗಪ್ಪ ಸೇರಿದಂತೆ ವಿದ್ಯಾರ್ಥಿಗಳು, ಪೋಷಕರು ಹಾಜರಿದ್ದರು.

> ವೀರಶೈವರು ನಿಯಮಿತವಾಗಿ ವಿಭೂತಿ ಧರಿಸುವ ಜೊತೆಗೆ ಇಷ್ಟಲಿಂಗ ಧರಿಸಿ ಪೂಜಿಸುವ ಮೂಲಕ ಬಸವ ತತ್ವಗಳನ್ನು ಅನುಸರಿಸಬೇಕು. ವಿಭೂತಿ ಧಾರಣೆ ಮತ್ತು ಲಿಂಗಪೂಜೆ ಕೇವಲ ಸಂಪ್ರದಾಯವಲ್ಲ. ಅದು ಆತ್ಮ ಶುದ್ಧಿ, ಶಿಸ್ತು ಹಾಗೂ ಸನ್ಮಾರ್ಗದ ಜೀವನಕ್ಕೆ ದಾರಿದೀಪ. ಮಠಗಳು ಸಮಾಜದ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರಗಳಾಗಿದ್ದು, ಅವುಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಮಠಗಳು ನೀಡುತ್ತಿರುವ ದಾಸೋಹ, ಶಿಕ್ಷಣ, ಧಾರ್ಮಿಕ ಹಾಗೂ ಸಾಮಾಜಿಕ ಸೇವೆಗಳನ್ನು ಸಮಾಜ ಸದುಪಯೋಗಪಡಿಸಿಕೊಳ್ಳುವ ಜೊತೆಗೆ ಅವುಗಳ ಅಭಿವೃದ್ಧಿಗೆ ಸಹಕಾರ ನೀಡಬೇಕು.
>
> –ತ್ರಿಪುರಾಂತಕ, ಸುತ್ತೂರು ಶ್ರೀಕ್ಷೇತ್ರದ ಸಹಾಯಕ ಆಡಳಿತಾಧಿಕಾರಿ.

ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ



ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಕಾರ್ಯಕರ್ತರು ಆಗ್ರಹಿಸಿದರು.

ಮಲ್ಕುಂಡಿ, ಜೂ.7– ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ನೂತನ ಸಚಿವ ಸಂಪುಟದಲ್ಲಿ ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಹೆಡಿಯಾಲ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತರು ವರಿಷ್ಠರನ್ನು ಒತ್ತಾಯಿಸಿದರು.

ಗ್ರಾಮದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಸಂಸದ ದಿ.ಆರ್. ಧ್ರುವನಾರಾಯಣ್ ಅವರು ಮೈಸೂರು ಹಾಗೂ ಚಾಮರಾಜನಗರದಲ್ಲಿ ಪಕ್ಷ ಸಂಘಟನೆ ಮಾಡುವ ಜೊತೆಗೆ ಪಕ್ಷದ ವರಿಷ್ಠರು ತಮಗೆ ನೀಡಿದ ಜವಾಬ್ದಾರಿ ಅರಿತು ಕೆಲಸ ಮಾಡಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಶ್ರಮಿಸಿದ್ದಾರೆ. ಇಂದು ಅವರು ನಮ್ಮೊಂದಿಗೆ ಇದ್ದಿದ್ದರೇ ಉನ್ನತ ಸ್ಥಾನದಲ್ಲಿ ಇರುತ್ತಿದ್ದರು. ಆದರೆ ಅವರ ಅಕಾಲಿಕ ನಿಧನದಿಂದಾಗಿ ಅವರ ಸುಪುತ್ರ ದರ್ಶನ್ ಧ್ರುವನಾರಾಯಣ್ ಅವರು ರಾಜಕೀಯ ಪ್ರವೇಶಿಸಿ ಶಾಸಕರಾಗಿ ಕ್ಷೇತ್ರದಲ್ಲಿ ಉತ್ತಮ ಅಭಿವೃದ್ಧಿ ಕಾರ್ಯಗಳನ್ನು ರೂಪಿಸಿ ಜನರ ಕಷ್ಟ ಸುಖದಲ್ಲಿ ಭಾಗಿಯಾಗುವ ಮೂಲಕ ತಂದೆ ಹಾದಿಯಲ್ಲೇ ನಡೆಯುತ್ತಿದ್ದಾರೆ. ಹೀಗಾಗಿ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಿದರೇ ಹೈಕಮಾಂಡ್ ಧ್ರುವನಾರಾಯಣ್ ಅವರ ಋಣ ತೀರಿಸಿದಂತಾಗುತ್ತದೆ. ಹೀಗಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಯುವಕರಿಗೆ ಹೆಚ್ಚಿನ ಆದ್ಯತೆ ನೀಡುವ ದರ್ಶನ್ ಅವರಿಗೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭ ಗ್ರಾಪಂ ಮಾಜಿ ಅಧ್ಯಕ್ಷ ದಿನೇಶ್, ಮಾಜಿ ಸದಸ್ಯ ಗೋವಿಂದರಾಜು, ಮುಖಂಡರಾದ ನಾಗರಾಜೇಗೌಡ, ಸುಬ್ರಹ್ಮಣ್ಯ, ಕಾಳೇಗೌಡ, ಹುಚ್ಚೇಗೌಡ, ಕೈಲಾಸೇಗೌಡ, ಸಾದಿಕ್, ಅನ್ವರ್, ಮಂಟೇಲಿಂಗು, ಸಂಜಯ್ ಕುಮಾರ್, ಮಹದೇವಸ್ವಾಮಿ, ಪ್ರಕಾಶಚಾರಿ, ರಾಮೇಗೌಡ, ಪುಟ್ಟಯ್ಯ, ನಂಜುಂಡಯ್ಯ, ರಾಚಯ್ಯ, ಫಾರುಖ್, ಜಫಾರ್ ಸಾದೀಕ್, ಅನ್ಸರ್ ಪಾಷ, ಪ್ರಕಾಶ, ನಾಗನಾಯ್ಕ, ಗೋವಿಂದ್, ಪುಟ್ಟೇಗೌಡ ಸೇರಿದಂತೆ ಹಲವರಿದ್ದರು.

ಜೀವನದಲ್ಲಿ ಅಂಬೇಡ್ಕರ್ ತತ್ವ, ಸಿದ್ಧಾಂತ ಅಳವಡಿಸಿಕೊಳ್ಳಿ



ಕಾರ್ಯಕ್ರಮದಲ್ಲಿ ಸಂದೇಶ್ ಮಾತನಾಡಿದರು.

ನಂಜನಗೂಡು, ಜೂ.7– ಡಾ.ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಜೀವನದುದ್ದಕ್ಕೂ ಅಸ್ಪೃಶ್ಯತೆ ನಿವಾರಣೆ, ಸಾಮಾಜಿಕ ಸಮಾನತೆಗಾಗಿ ಹೋರಾಡಿದ ಶ್ರೇಷ್ಠ ವಿಶ್ವಜ್ಞಾನಿ. ಅವರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಸಮಿತಿ ಸಂಸ್ಥಾಪನಾ ಅಧ್ಯಕ್ಷ ಕೋಲಾರ ಸಂದೇಶ್ ತಿಳಿಸಿದರು.

ತಾಲೂಕಿನ ಹುಸ್ಕೂರು ಗ್ರಾಮದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಬಡತನ, ಅಸ್ಪೃಶ್ಯತೆಯಂತಹ ಸಾಮಾಜಿಕ ಅಡೆ ತಡೆಗಳನ್ನು ಮೆಟ್ಟಿ ನಿಂತು ಉನ್ನತ ಶಿಕ್ಷಣ ಪಡೆದು, ದೇಶದಲ್ಲಿ ಅಸ್ಪೃಶ್ಯತೆ ನಿವಾರಣೆ ಮಾಡಲು ಶ್ರೇಷ್ಠ ಸಂವಿಧಾನ ಎಂಬ ಅಸ್ತ್ರ ನೀಡಿದ್ದಾರೆ. ನಾವೆಲ್ಲರೂ ಅವರ ತತ್ವ, ಸಿದ್ಧಾಂತ, ಹೋರಾಟಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು ಎಂದು ಕರೆ ನೀಡಿದರು.

ಮುಖಂಡ ಸಿದ್ದರಾಜು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಭವನಕ್ಕೆ ನಿಗದಿಪಡಿಸಿದ್ದ ಜಾಗವನ್ನು ಖಾಸಗಿ ವ್ಯಕ್ತಿಯೊಬ್ಬರು ಒತ್ತುವರಿ ಮಾಡಿಕೊಂಡು ನಮ್ಮ ಜಾಗವೆಂದು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಕೋಲಾರ ಸಂದೇಶ್ ಅವರು ಕಾನೂನು ಹೋರಾಟಕ್ಕೆ ಸಹಕಾರ ನೀಡಿದ ಪರಿಣಾಮ ನ್ಯಾಯಾಲಯದ ಆದೇಶದಂತೆ ಭವನಕ್ಕೆ ನಿಗದಿಯಾದ ಜಾಗದ ಒತ್ತುವರಿ ತೆರವುಗೊಳಿಸಲಾಗಿದೆ. ಇದೇ ಜಾಗದಲ್ಲಿ ಗ್ರಾಮಸ್ಥರು ಸೇರಿ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇದೇ ಜಾಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣವಾಗಲಿದೆ ಎಂದರು.

ಈ ವೇಳೆ ಮುಖಂಡರಾದ ನಿಂಗರಾಜು, ಮಹದೇವಸ್ವಾಮಿ, ಜಯಶೀಲ, ಮರಿಸ್ವಾಮಿ, ರಾಚಯ್ಯ, ಶಿವಯ್ಯ, ಪ್ರಭಾ ಮಲ್ಲಯ್ಯ ಸೇರಿದಂತೆ ಗ್ರಾಮದ ಮುಖಂಡರು, ಮಹಿಳೆಯರು ಉಪಸ್ಥಿತರಿದ್ದರು.

ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಕೈ ಜೋಡಿಸಿ

ವೀರಶೈವ ಯುವ ಘಟಕದ ಉಪಾಧ್ಯಕ್ಷ ಎಸ್.ಕೆ.ಕಿರಣ್

ತಿ.ನರಸೀಪುರ, ಜೂ.7– ಪ್ರತಿಯೊಂದು ಜೀವಿ ಉಳಿವಿಗೆ ಪರಿಸರ ಮುಖ್ಯವಾಗಿದ್ದು, ಪ್ರಸ್ತುತ ಪರಿಸರ ರಕ್ಷಣೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಅತೀ ಅಗತ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಕೈ ಜೋಡಿಸಬೇಕು ವೀರಶೈವ ಯುವ ಘಟಕದ ಉಪಾಧ್ಯಕ್ಷ ಎಸ್.ಕೆ.ಕಿರಣ್ ತಿಳಿಸಿದರು.



ಶಾಲೆಯಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನ ಆಚರಿಸಲಾಯಿತು.

ತಾಲೂಕಿನ ಬೆನಕನಹಳ್ಳಿ ಶ್ರೀಗುರು ಮಲ್ಲೇಶ್ವರ ಸಾರ್ವಜನಿಕ ಪ್ರೌಢಶಾಲೆಯಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅಧಿಕಾರ ಸ್ವೀಕರಿಸಿದ ದಿನದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತ ನಾಡಿದ ಅವರು, ನಮ್ಮ ಸುತ್ತಮುತ್ತಲಿನ ಮರ ಗಿಡಗಳು, ಕ್ರಿಮಿ–ಕೀಟಗಳು, ಪ್ರಾಣಿ ಪಕ್ಷಿಗಳು ಸೇರಿದಂತೆ ಸಂಪೂರ್ಣ ಪರಿಸರವನ್ನು ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ವಿವಿಧ ಜಾತಿಯ ಗಿಡಗಳನ್ನು ನೆಟ್ಟು ಪೋಷಿಸಬೇಕು. ರಸ್ತೆ ಬದಿ ಹಾಗೂ ಶಾಲಾ ಕಾಲೇಜು, ಕಚೇರಿ ಆವರಣಗಳಲ್ಲಿ ಸಸಿ ನೆಟ್ಟು ಪೋಷಿಸುವ ಮೂಲಕ ಪರಿಸರದ ಬಗ್ಗೆ ಮಕ್ಕಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಒಂದು ಗಿಡ ನೆಟ್ಟರೆ ಅದು ಯಾವುದೇ ಜಾತಿ, ಧರ್ಮ, ಮತ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ನೆರಳು, ಶುದ್ಧ ಗಾಳಿ ಮತ್ತು ಆಮ್ಲಜನಕವನ್ನು ಉಚಿತವಾಗಿ ನೀಡುತ್ತದೆ. ಸರ್ಕಾರದ ಗ್ಯಾರಂಟಿಗಳಂತೆ ಪರಿಸರವು ಜನರಿಗೆ ಗಾಳಿ, ನೀರು, ಬೆಳಕು, ಮಣ್ಣು ಹಾಗೂ ಆಮ್ಲಜನಕ ಎಂಬ 5 ಅಮೂಲ್ಯ ಕೊಡುಗೆಗಳನ್ನು ನೀಡುತ್ತದೆ. ಪ್ಲಾಸ್ಟಿಕ್ ಭೂಮಿಯಲ್ಲಿ ಕರಗಲು 400 ವರ್ಷ ಬೇಕಾಗುತ್ತದೆ. ಅದನ್ನು ಸುಟ್ಟರೆ ವಾಯು ಮಾಲಿನ್ಯ ಉಂಟಾಗುತ್ತದೆ. ರಸ್ತೆ ಬದಿ ಎಸೆದರೆ ಸೊಳ್ಳೆ ಹಾಗೂ ಇತರ ಸಮಸ್ಯೆಗಳು ಹೆಚ್ಚಾಗುತ್ತವೆ. ಮಣ್ಣಿನಲ್ಲಿ ಪ್ಲಾಸ್ಟಿಕ್ ಸೇರುವುದರಿಂದ ಗಿಡಗಳ ಬೆಳವಣಿಗೆ ಮೇಲೂ ಪರಿಣಾಮ ಬೀರುತ್ತದೆ ಎಂದು ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ತಿಳಿಸಿ, ಪ್ಲಾಸ್ಟಿಕ್ ನಿಷೇಧಕ್ಕೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದರು.

ಮಂಡಲ ಉಪಾಧ್ಯಕ್ಷ ಬೆನಕನಹಳ್ಳಿ ವಿಜಯಕುಮಾರ್ ಮಾತನಾಡಿದರು. ಮಂಡಲದ ಅಧ್ಯಕ್ಷ ಸತ್ಯರಾಜ್, ಪ್ರಧಾನ ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ, ಮಹದೇವಸ್ವಾಮಿ, ಪರಮೇಶ್, ಪವನ್, ಚೇತನ್, ಚಿಂಟು, ರಾಜಶೇಖರ್, ಗ್ರಾಮದ ಮುಖಂಡರು ಶಾಲೆಯ ಶಿಕ್ಷಕರು, ಸಹ ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬಿಳಿಗೆರೆ ಗ್ರಾಪಂನಲ್ಲಿ ವಿಶ್ವ ಪರಿಸರ ದಿನಾಚರಣೆ



ಬಿಳಿಗೆರೆ ಗ್ರಾಪಂನಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು.

ಹುಣಸೂರು, ಜೂ.7– ವಿಶ್ವ ಪರಿಸರ ದಿನದ ಅಂಗವಾಗಿ ಜಿಪಂ ಮೈಸೂರು, ತಾಪಂ ಹುಣಸೂರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಭಗೀರಥ ಸಂಸ್ಥೆ ಸಹಯೋಗದೊಂದಿಗೆ ಬಿಳಿಗೆರೆ ಗ್ರಾಮ ಪಂಚಾಯಿತಿಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಈ ವೇಳೆ ಪರಿಸರ ಸಂರಕ್ಷಣೆ, ಸ್ವಚ್ಛತೆ ಮತ್ತು ಜಲ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಅಲ್ಲದೇ ಪರಿಸರ ಸಂರಕ್ಷಣೆ ಮಹತ್ವ, ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಣ, ಮರಗಳ ನೆಡುವಿಕೆ, ನೀರಿನ ಸಂರಕ್ಷಣೆ ಹಾಗೂ ಸ್ವಚ್ಛ ಪರಿಸರ ನಿರ್ಮಾಣದ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು ಹಾಗೂ ಪರಿಸರ ಸಂರಕ್ಷಣೆಯ ಪ್ರತಿಜ್ಞಾವಿಧಿ ಬೋಧಿಸುವುದರ ಜೊತೆಗೆ ಗಿಡವನ್ನು ನೆಟ್ಟು ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ರಾಜೇಂದ್ರ ಮಾತನಾಡಿ, ಪರಿಸರ ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದ್ದು, ಮುಂದಿನ ಪೀಳಿಗೆಗೆ ಶುದ್ಧ ಕುಡಿಯುವ ನೀರು, ಆರೋಗ್ಯಕರ ಪರಿಸರ ಉಳಿಸುವ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಪಿಡಿಒ ಶೀಲಾ ಮಾತನಾಡಿ, ಮುಂದಿನ ಪೀಳಿಗೆಗೆ ಶುದ್ಧ ಗಾಳಿ, ನೀರು ಹಾಗೂ ಉತ್ತಮ ಪರಿಸರ ಇರಬೇಕಾದರೆ ನಾವೆಲ್ಲಾ ಈಗಲೇ ಜಾಗೃತರಾಗಿ ಪರಿಸರ ಸಂರಕ್ಷಣೆಗೆ ಪಣ ತೊಡಬೇಕು ಎಂದರು.

ಕಾರ್ಯಕ್ರಮದಲ್ಲಿ ಎಇ ಶಂಭುಲಿಂಗ ಗಂಗಣ್ಣನವರ್, ಗ್ರಾಪಂ ಕಾರ್ಯದರ್ಶಿ ಆನಂದ್, ಭಗೀರಥ ಸಂಸ್ಥೆ ಜಿಲ್ಲಾ ತಂಡದ ನಾಯಕ ಮಹೇಶ್, ತಾಲೂಕು ಸಂಯೋಜಕ ಆನಂದ್, ಕ್ವಾಡ್ ಸ್ಟೇಷನ್ ಇಂಜಿನಿಯರ್ ಮೇಘರಾಜ್, ಆರೋಗ್ಯ ನಿರೀಕ್ಷಣಾ ಅಧಿಕಾರಿ ಹನುಮಂತು, ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಪರಿಸರ ಸಂರಕ್ಷಿಸಿ ಹವಾಮಾನ ವೈಪರಿತ್ಯ ತಡೆಗಟ್ಟಿ

ಆದಿಚುಂಚನಗಿರಿ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್

ಹೆಚ್.ಡಿ.ಕೋಟೆ: ಪರಿಸರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬರ ಪಾತ್ರ ಹೆಚ್ಚಾಗಿರುತ್ತದೆ. ಹೀಗಾಗಿ ಪರಿಸರ ಸಂರಕ್ಷಿಸಿ ಹವಾಮಾನ ವೈಪರಿತ್ಯ ತಡೆಗಟ್ಟಬೇಕು ಎಂದು ಆದಿಚುಂಚನಗಿರಿ ಕಾಲೇಜಿನ ಪ್ರಾಂಶುಪಾಲ ಡಾ. ಜೆ.ಎನ್.ವೆಂಕಟೇಶ್ ತಿಳಿಸಿದರು.




ಶ್ರೀಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಪಟ್ಟಣದ ಶ್ರೀಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಭೂಗೋಳ ವಿಜ್ಞಾನ ವಿಭಾಗದಿಂದ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಗಿಡ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ನೈಸರ್ಗಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿ, ಮುಂದಿನ ಪೀಳಿಗೆಗೆ ಉಳಿಸಿ ಹೋಗುವುದು ಸಮುದಾಯದ ಮುಖ್ಯ ಕರ್ತವ್ಯ. ಹೀಗಾಗಿ ಪರಿಸರ ಸಂರಕ್ಷಣೆ ಮಾಡಲು ಪ್ರತಿಯೊಬ್ಬರೂ ಒಂದೊಂದು ಗಿಡ ನೆಟ್ಟು ಸಂರಕ್ಷಿಸಿ ಹಾಗೂ ಸ್ವಚ್ಛತೆಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದರು.

ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್ ಗೌಡ ಮಾತನಾಡಿ, ವಿದ್ಯಾರ್ಥಿಗಳಿಗೆ ಪರಿಸರದ ಸಂರಕ್ಷಣೆ ಬಗ್ಗೆ ಮಾಹಿತಿ ನೀಡಿದರು. ಅಲ್ಲದೇ ಪ್ಲಾಸ್ಟಿಕ್ ತ್ಯಾಜ್ಯದಿಂದ ಉಂಟಾಗುತ್ತಿರುವ ಪರಿಸರ ಮತ್ತು ಆರೋಗ್ಯ ಸಮಸ್ಯೆಗಳನ್ನು ಎದುರಿಸಲು ಜನರನ್ನು ಜಾಗೃತಿಗೊಳಿಸುವ ಗುರಿ ಹೊಂದುವುದು, ಪ್ಲಾಸ್ಟಿಕ್ ಮಾಲಿನ್ಯ ಕೊನೆಗೊಳಿಸುವುದು. ಪ್ರಕೃತಿ ಕಾಪಾಡುವುದು. ಮರಗಳನ್ನು ಉಳಿಸುವುದು. ಗಿಡಗಳನ್ನು ನೆಡುವುದು. ನೀರನ್ನು ಉಳಿಸುವುದು. ಜಾಗತಿಕ ತಾಪಮಾನ ಏರಿಕೆ, ಸುಸ್ಥಿರ ಅಭಿವೃದ್ಧಿ ಮತ್ತು ವನ್ಯಜೀವಿ ಅಪರಾಧಗಳ ಬಗ್ಗೆ ಪರಿಸರ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಿದರು. ಈ ವೇಳೆ ಉಪನ್ಯಾಸಕರಾದ ಮಹೇಂದ್ರ, ಮಹೇಶ್, ಮಹದೇವ, ದಿಲೀಪ್, ಸೋಮಶೇಖರ್, ರವಿ ಕುಮಾರ್, ಶಾಂಭವಿ, ಪ್ರೇಕ್ಷ, ತ್ರಿವೇಣಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಟ್ರಾನ್ಸ್‌ಫಾರ್ಮರ್‌ಗೆ ಫ್ಯೂಸ್ ಹಾಕಲು ಹೋದ

ರೈತನಿಗೆ ವಿದ್ಯುತ್ ಸ್ಪರ್ಶ: ಸ್ಥಳದಲ್ಲೇ ಸಾವು



ತಿ.ನರಸೀಪುರ: ಟ್ರಾನ್ಸ್‌ಫಾರ್ಮರ್‌ಗೆ ಫ್ಯೂಸ್ ಹಾಕಲು ಹೋದ ರೈತನಿಗೆ ವಿದ್ಯುತ್ ಪ್ರವಹಿಸಿ ಆತ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ತಲಕಾಡು ಹೋಬಳಿ ಪರಿಣಾಮಿಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ನಾಗಣ್ಣ ಸಾವನ್ನಪ್ಪಿದವರು. ಈತ ಸಂಜೆ 4 ಗಂಟೆಗೆ ಜಮೀನಿಗೆ ಹೋದಾಗ ಟ್ರಾನ್ಸ್‌ಫಾರ್ಮರ್ ಫ್ಯೂಸ್ ಸುಟ್ಟು ಹೋಗಿ ತಮ್ಮ ಜಮೀನಿನ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಅಲ್ಲದೇ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಕಡಿತವಾಗಿದ್ದರಿಂದ ಫ್ಯೂಸ್ ಹಾಕಲು ಟ್ರಾನ್ಸ್‌ಫಾರ್ಮರ್ ಹತ್ತಿದ್ದಾರೆ. ಈ ವೇಳೆ ದಿಢೀರ್ ವಿದ್ಯುತ್ ಚಾಲನೆಗೊಂಡಿದೆ. ಪರಿಣಾಮ ನಾಗಣ್ಣ ಅವರಿಗೆ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಅಸುನೀಗಿದ್ದಾರೆ. ಈ ಸಂಬಂಧ ತಲಕಾಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆ ಶವಾಗಾರದಲ್ಲಿ ಶವ ಇರಿಸಲಾಗಿದೆ. ಸೆಸ್ಕ್ ತಿ.ನರಸೀಪುರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ವೀರೇಶ್ ಸ್ಥಳಕ್ಕೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಮಾನವನ ಮಾನಸಿಕ, ದೈಹಿಕ ಸದೃಢತೆಗೆ ಕುಸ್ತಿ ಸಹಕಾರಿ



ಕುಸ್ತಿ ಪಂದ್ಯಾವಳಿಗೆ ಮಾಜಿ ಶಾಸಕ ಬಿ.ಹರ್ಷವರ್ಧನ್ ಚಾಲನೆ ನೀಡಿದರು.

ನಂಜನಗೂಡು: ಕುಸ್ತಿ ಪಂದ್ಯಾವಳಿ ಮನುಷ್ಯನ ಮಾನಸಿಕ ಮತ್ತು ದೈಹಿಕ ಸದೃಢತೆಗೆ ಸಹಕಾರಿಯಾಗಿದ್ದು, ಕುಸ್ತಿ ದೇಶದ ಸಂಸ್ಕೃತಿಯ ಭಾಗವಾಗಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ತಾಲೂಕಿನ ದೇವರಸನಹಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಏರ್ಪಡಿಸಿದ್ದ 30 ಜೊತೆ ಕಾಟ ಕುಸ್ತಿ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, ರಾಮಾಯಣ, ಮಹಾಭಾರತ, ಪುರಾಣ ಕಥೆಗಳಲ್ಲೂ ಕುಸ್ತಿ ಬಗ್ಗೆ ಉಲ್ಲೇಖವಿದೆ. ಕುಸ್ತಿ ವ್ಯಕ್ತಿಯ ಮಾನಸಿಕ, ದೈಹಿಕ ಸದೃಢತೆಯನ್ನು ಹೆಚ್ಚಿಸುವ ಜೊತೆಗೆ ಶಿಸ್ತು, ಏಕಾಗ್ರತೆ, ಸಮಯ ಪಾಲನೆ, ಕ್ರೀಡಾ ಸ್ಫೂರ್ತಿ ಕಲಿಸುತ್ತದೆ. ಪ್ರಮುಖವಾಗಿ ಯುವಕರು ದುಶ್ಚಟಗಳಿಂದ ದೂರವಿದ್ದು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿದೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಕುಸ್ತಿ ಪಂದ್ಯಾವಳಿ ಆಯೋಜನೆಯಿಂದಾಗಿ ಸ್ಥಳೀಯ ಕುಸ್ತಿ ಪಟುಗಳಿಗೆ ವೇದಿಕೆ ಒದಗಿಸುವ ಜೊತೆಗೆ ಕುಸ್ತಿ ಕಲೆಯನ್ನು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಸಮಾರಂಭದಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯ ಶಿವರಾಮು, ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ತಾಪಂ ಮಾಜಿ ಸದಸ್ಯರಾದ ಬಿ.ಎಸ್.ರಾಮು, ಡಿ.ಆರ್.ರಾಜು, ಮುಖಂಡರಾದ ಪುಟ್ಟಸ್ವಾಮಿ, ವಕೀಲ ಉಮೇಶ್, ದೇವರಸನಹಳ್ಳಿ ಗ್ರಾಪಂ ಮಾಜಿ ಸದಸ್ಯರಾದ ಮಹದೇವು, ಸುರೇಶ್, ಮಣಿಕಂಠ, ಕುಸ್ತಿ ಪಂದ್ಯಾವಳಿ ಆಯೋಜಕರಾದ ಚೆಲುವರಾಜು, ಗುಂಡ, ಜಯಂತ್, ಗಜೇಂದ್ರ, ಸೇರಿದಂತೆ ಹಲವರಿದ್ದರು.

ರಾಜ್ಯ, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ

ನೂತನ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ

ತಿ.ನರಸೀಪುರ, ಜೂ.7– ರಾಜ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ನೂತನ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.



ನೂತನ ಸಚಿವ ಡಾ.ಯತೀಂದ್ರ ಅವರನ್ನು ಮುಖಂಡರು ಸನ್ಮಾನಿಸಿದರು.

ತಿ.ನರಸೀಪುರ ಮಾಜಿ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಹಾಗೂ ಇತರರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯದ ಜನತೆ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ನೀಡುವ ಮೂಲಕ ಬಡವರ ಹಾಗೂ ಅಭಿವೃದ್ಧಿ ಪರ ಸರ್ಕಾರ ರಚನೆಗೆ ಕಾರಣರಾಗಿದ್ದಾರೆ. ಹೀಗಾಗಿ ರಾಜ್ಯದ ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ನಮ್ಮ ಸರ್ಕಾರ ಕಾರ್ಯ ನಿರ್ವಹಿಸಲಿದೆ ಎಂದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಚುನಾವಣೆಗೂ ಮುನ್ನ ನೀಡಿದ್ದ ಭರವಸೆಯಂತೆ 5 ಗ್ಯಾರಂಟಿಗಳು, ಪಕ್ಷದ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಎಲ್ಲಾ ಭರವಸೆಗಳನ್ನು ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದ ಸರ್ಕಾರ ಎಂಬುದನ್ನು ಸಾಬೀತು ಪಡಿಸಲಾಗುವುದು ಎಂದರು.

ಈ ಹಿಂದೆ ನಮ್ಮ ತಂದೆ ಮುಖ್ಯಮಂತ್ರಿಯಾಗಿದ್ದಾಗ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ. ಈ ಬಾರಿಯೂ ಕ್ಷೇತ್ರದ ಮತ್ತಷ್ಟು ಅಭಿವೃದ್ಧಿಗೆ ಹಲವು ಯೋಜನೆಗಳನ್ನು ರೂಪಿಸಿದ್ದೇನೆ. ಅವುಗಳನ್ನು ಹಂತ ಹಂತವಾಗಿ ಕಾರ್ಯ ರೂಪಕ್ಕೆ ತರುವ ಮೂಲಕ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಕಷ್ಟ ಸುಖಗಳಿಗೆ ಸ್ಪಂದಿಸುವ ಮೂಲಕ ಸರ್ಕಾರದ ಸೌಲಭ್ಯಗಳನ್ನು ತಲುಪಿಸುತ್ತೇನೆ. ಇದಕ್ಕೆ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸಹಕಾರ ನೀಡಬೇಕು. ಕ್ಷೇತ್ರದ ಎಲ್ಲಾ ಸಮುದಾಯದವರು ಕಾಂಗ್ರೆಸ್ ಬೆಂಬಲಿಸುವ ಮೂಲಕ ತಂದೆಯವರ ಗೆಲುವಿಗೆ ಕಾರಣರಾಗಿದ್ದೀರಿ. ಹೀಗಾಗಿ ಮತದಾರರು ಸೇರಿದಂತೆ ಪಕ್ಷಕ್ಕಾಗಿ ದುಡಿದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಮಾಜಿ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಕಾಶ್ ಮಾತನಾಡಿ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅನುಯಾಯಿಯಾಗಿ ಸುದೀರ್ಘವಾಗಿ ಅವರ ಜೊತೆಯಲ್ಲೇ ಬಂದಿದ್ದು, ಈ ಬಾರಿ ಅವರಿಗೆ ಸಚಿವ ಸ್ಥಾನ ಕೊಡಿಸುವಲ್ಲಿ ನೀವು ಮತ್ತು ನಿಮ್ಮ ತಂದೆ ಸಿದ್ದರಾಮಯ್ಯನವರು ಪ್ರಮುಖ ಪಾತ್ರ ವಹಿಸಬೇಕು ಎಂದು ಮನವಿ ಮಾಡಿದರು. ಪುರಸಭಾ ಮಾಜಿ ಸದಸ್ಯ ಬೇಬಿ ಹೇಮಂತ್ ಕುಮಾರ್, ಕಾಂಗ್ರೆಸ್ ಯುವ ಮುಖಂಡ ಮೊಟ್ಟೆ ಮಹೇಶ್ ಹಾಗೂ ಇನ್ನಿತರರಿದ್ದರು.

ಪ್ಲಾಸ್ಟಿಕ್ ಅವಲಂಬನೆಯಿಂದ ಪರಿಸರ ಹಾನಿ



ಪಿಎಂಶ್ರೀ ಆದರ್ಶ ವಿದ್ಯಾಲಯದಲ್ಲಿ ಪರಿಸರ ದಿನಾಚರಣೆ ನಡೆಯಿತು.

ಕೆ.ಆರ್.ನಗರ: ಪರಿಸರ ಉತ್ತಮವಾಗಿದ್ದರೆ ಆರೋಗ್ಯ ಉತ್ತಮವಾಗಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಮನೆ ಸುತ್ತಮುತ್ತ ಗಿಡಮರಗಳನ್ನು ಬೆಳೆಸುವ ಮೂಲಕ ಪರಿಸರಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಪಿಎಂಶ್ರೀ ಆದರ್ಶ ವಿದ್ಯಾಲಯದ ಎಸ್‌ಡಿಎಂಸಿ ಅಧ್ಯಕ್ಷ ಕೆ.ಪಿ. ಜಗದೀಶ್ ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಾಳೇನಹಳ್ಳಿ ಗ್ರಾಮದಲ್ಲಿರುವ ಆದರ್ಶ ವಿದ್ಯಾಲಯದ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ಲಾಸ್ಟಿಕ್ ಅವಲಂಬನೆಯಿಂದ ಪರಿಸರದ ಮೇಲೆ ಅಗಾದ ದುಷ್ಪರಿಣಾಮ ಉಂಟಾಗಿದ್ದು, ಮನೆ ಮತ್ತು ಶಾಲೆ, ಕಚೇರಿಗಳಲ್ಲಿ ಪ್ಲಾಸ್ಟಿಕ್ ಬಳಕೆ ತಪ್ಪಿಸಬೇಕೆಂದರು.

ನಗರಗಳ ಆಧುನೀಕರಣ ಹಾಗೂ ಕೈಗಾರೀಕರಣ ಮತ್ತು ಜನಸಂಖ್ಯೆ ಬೆಳೆದಂತೆಲ್ಲಾ ಪರಿಸರ ನಾಶ ಆಗುತ್ತಿದ್ದು, ಮುಂದಿನ ಪೀಳಿಗೆಗೆ ಪರಿಸರ ಉಳಿಸಿ ಬೆಳೆಸುವ ಜವಾಬ್ದಾರಿ ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳ ಮೇಲಿದ್ದು ಭೂಮಿಯ 3ನೇ 2 ಭಾಗದಷ್ಟು ಪರಿಸರ ಇರಬೇಕು. ಇದಕ್ಕಾಗಿ ನಾವೆಲ್ಲರೂ ಗಿಡ ಮರ ಬೆಳೆಸಿ ಸಮತೋಲನ ಕಾಪಾಡಲು ಪ್ರಯತ್ನ ಮಾಡಬೇಕೆಂದು ಮನವಿ ಮಾಡಿದರು.

ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಗಿಡ–ಮರ ಬೆಳೆಸುವ ಹವ್ಯಾಸ ಬೆಳೆಸಿಕೊಳ್ಳಬೇಕು. ತಾವು ಓದುವ ಶಾಲೆಗಳಲ್ಲಿ, ತಮ್ಮ ಮನೆಯ ಸುತ್ತಮುತ್ತ ಗಿಡಮರಗಳನ್ನು ಬೆಳೆಸಬೇಕೆಂದು ಮನವಿ ಮಾಡಿದರಲ್ಲದೇ ಇದರಿಂದ ತಾವು ಸಮಾಜಕ್ಕೆ ಉತ್ತಮ ಕೊಡುಗೆ ನೀಡಿದಂತೆ ಆಗಲಿದೆ ಎಂದು ಅಭಿಪ್ರಾಯಪಟ್ಟರು

ಶಾಲೆ ಪ್ರಭಾರ ಮುಖ್ಯ ಶಿಕ್ಷಕಿ ರಶ್ಮಿ ಮಾತನಾಡಿ, ಮಾನವ ಹಾಗೂ ಪ್ರಾಣಿ ಪಕ್ಷಿಗಳ ಉಳಿವಿಗಾಗಿ ಪರಿಸರ ಸಂರಕ್ಷಣೆ ಅತ್ಯಗತ್ಯವಾಗಿದೆ. ಅದಕ್ಕಾಗಿ ವಿದ್ಯಾರ್ಥಿ ದೆಸೆಯಲ್ಲಿಯೇ ಗಿಡಮರ ಬೆಳೆಸಿ ಪ್ರಕೃತಿ ಕಾಪಾಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು ಎಂದರು. ಶಿಕ್ಷಕರಾದ ಕವಿತಾ, ಲೋಕೇಶ್, ಸೌಮ್ಯ, ತಾರಾ, ವೀಣಾ, ಅಂಬಿಕಾ, ದೀಪ್ತಿ, ಸುಮಾ, ಜಯಶಂಕರ್, ಪುಷ್ಪಾಲತಾ ಇನ್ನಿತರರಿದ್ದರು.

ಮೈಸೂರು ಮಿತ್ರ

ಸೋಮವಾರ 8 ಜೂನ್ 2026

ವೈಚಾರಿಕತೆ ಹೆಸರಲ್ಲಿ ಹಿಂದೂ ಪರಂಪರೆ ನಾಶಪಡಿಸುವ ಸಂಚು

ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿಷಾದ

ಮೈಸೂರು, ಜೂ.7(ಎಂಟಿವೈ)–ದೊಡ್ಡ ಪರಂಪರೆಯಾಗಿರುವ ಹಿಂದೂ ಪರಂಪರೆಯನ್ನು ವೈಚಾರಿಕತೆ ಹೆಸರಿನಲ್ಲಿ ನಾಶ ಮಾಡುವ ಸಂಚು ನಡೆಯುತ್ತಿದೆ ಎಂದು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿಷಾದಿಸಿದ್ದಾರೆ.

ಮೈಸೂರಿನ ವಿವೇಕಾನಂದ ನಗರದಲ್ಲಿರುವ ಭರಣಿ ಆರ್ಟ್ ಗ್ಯಾಲರಿಯಲ್ಲಿ ಭಾನುವಾರ ನಡೆದ ಗ್ಯಾಲರಿಯ 32ನೇ ವಾರ್ಷಿಕೋತ್ಸವ ಸಮಾರಂಭ ಮತ್ತು ಗ್ಯಾಲರಿಯ ಸಹ ಸಂಸ್ಥಾಪಕರಾಗಿದ್ದ ಶೀಲಾ ಕಾವೇರಪ್ಪನವರ ನೆನಪು ಕಾರ್ಯಕ್ರಮದಲ್ಲಿ ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿದ ಅವರು, ಬ್ರಿಟಿಷರು ಶಿಕ್ಷಣದ ಮೂಲಕ ನಮ್ಮ ಸಂಸ್ಕೃತಿಯನ್ನು ಕೀಳಾಗಿ ತೋರಿಸುವ ಪ್ರಯತ್ನ ಮಾಡಿದರು. ಅದನ್ನು ಕಮುನಿಷ್ಟರು ಮುಂದುವರಿಸಿದರು. ಈಗ ಕಾಕ್ರೋಚ್ ಪಾರ್ಟಿ ಇದೇ ಉದ್ದೇಶ ಹೊಂದಿದೆ ಎಂದರು.

ದೇಶದ ಅಸ್ಮಿತೆಯ ಬಗ್ಗೆ ದನಿಯೆತ್ತಿದರೆ ಕೋಮುವಾದಿ ಎಂಬ ಪಟ್ಟ ಕಟ್ಟುತ್ತಾರೆ. ನಮ್ಮ ಸಂಸ್ಕೃತಿ, ಪರಂಪರೆಯನ್ನು ಅಗೌರವದಿಂದ ಕಾಣುವ ಶಿಕ್ಷಣ, ಕಲೆ ಹಾಗೂ ಇತಿಹಾಸ ರಚನೆಯು ದೇಶದಲ್ಲಿ ಸಾಮರಸ್ಯ ಹಾಳಾಗಲು ಕಾರಣ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕರಾದ ಸಾಧನಾ ಅಶೋಕ ಪೋತೆ ಮಾತನಾಡಿ, ಯಾವುದೇ ಕಲೆಯನ್ನು ಕೇವಲ ಕಣ್ಣುಗಳಿಂದ ನೋಡದೆ ಹೃದಯದಿಂದ ನೋಡಬೇಕು. ಕಲಾಕುಂಚದಲ್ಲಿ ಅರಳುವ ಕಲೆಗಳು ಸೃಜನಶೀಲವಾಗಿರುತ್ತವೆ. ಕಲಾವಿದರು ಮನುಷ್ಯನ ಭಾವನೆಗಳಿಗೆ ಬಣ್ಣ ತುಂಬುವ ಸಮಾಜವನ್ನು ಚಿತ್ರಿಸುವ ಮತ್ತು ಭವಿಷ್ಯದ ಕನಸುಗಳಿಗೆ ರೂಪ ನೀಡುವ ಶಕ್ತಿ ಹೊಂದಿರುತ್ತಾರೆ. ಕಲೆ ಎನ್ನುವುದು ಕೇವಲ ಕಣ್ಣುಗಳಿಂದ ನೋಡು ವುದಲ್ಲ, ಮನಸ್ಸಿನಿಂದ ಅನುಭವಿಸುವುದು. ಕಲೆಗೆ ಮಾನವೀಯ ಮೌಲ್ಯಗಳನ್ನು ಜೀವಂತವಾಗಿರಿಸುವ ಶಕ್ತಿಯಿದೆ ಎಂದರು.

ಸರ್ಕಾರಿ ಅಧಿಕಾರಿಯಾದ ನಾನು ಥೀಮ್ ಗೀತೆಯೊಂದನ್ನು ರಚಿಸುವ ಇಂಗಿತ ವ್ಯಕ್ತಪಡಿಸಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲೀನಿ ರಜನೀಶ್ ಅವರ ಬಳಿ ಹೇಳಿಕೊಂಡೆ. ಆಗ ಅವರು ಸರ್ಕಾರದ ಯೋಜನೆ ಕುರಿತಂತೆ ಥೀಮ್ ಗೀತೆ ರಚನೆಗೆ ಸಲಹೆ ನೀಡಿದರು. ಸಕಾಲ ಕಾರ್ಯಕ್ರಮವನ್ನು ಸರ್ಕಾರ ಜಾರಿಗೊಳಿಸಿ, ನಿಗಧಿತ ಸಮಯದಲ್ಲಿ ಸರ್ಕಾರದ ಯೋಜನೆಗಳ ಸೌಲಭ್ಯವನ್ನು ಜನರಿಗೆ ತಲುಪಿಸುವ ಉದ್ದೇಶ ಸರ್ಕಾರದ್ದಾಗಿದೆ. ಈ ನಿಟ್ಟಿನಲ್ಲಿ ಗೀತೆಯೊಂದನ್ನು ಬರೆದು, ಅದಕ್ಕೆ ರಾಗ ಸಂಯೋಜಿಸಿ ಕೊಡುವಂತೆ ಕೆಲವರನ್ನು ಕೇಳಿದ್ದೆ. ಆದರೆ, ಎರಡು ವರ್ಷವಾದರೂ ಅದು ಸಾಧ್ಯವಾಗಲಿಲ್ಲ. ಡಿಜಿಟಲ್ ಫ್ಲಾಟ್‌ಫಾರಂನಲ್ಲಿ ಕೃತಕ ಬುದ್ಧಿಮತ್ತೆ(ಎಐ) ಟೂಲ್ ಬಳಸಿ ಆ ಗೀತೆಗೆ ರಾಗ ಸಂಯೋಜಿಸಲಾಯಿತು. ಎಐನಿಂದ ಸಂಗೀತ ಸಂಯೋಜನೆಯಾಯಿತಾದರೂ ಭಾವನೆ ತುಂಬುವುದಕ್ಕೆ ಎಐನಿಂದ ಸಾಧ್ಯವಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಕಲಾವಿದ ಬಾಬುರಾವ್ ನಾಡೋಣೀ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾ ಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಭರಣಿ ಆರ್ಟ್ ಗ್ಯಾಲರಿಯ ಪ್ರಧಾನ ಸಂಚಾಲಕ ಎನ್.ಬಿ.ಕಾವೇರಪ್ಪ ಹಾಗೂ ಇನ್ನಿತರರಿದ್ದರು.



ಮೈಸೂರಿನ ವಿವೇಕಾನಂದನಗರದಲ್ಲಿನ ಭರಣಿ ಆರ್ಟ್ ಗ್ಯಾಲರಿಯಲ್ಲಿ ನಡೆದ ಗ್ಯಾಲರಿಯ 32ನೇ ವಾರ್ಷಿಕ ಸಮಾರಂಭ ಮತ್ತು ಗ್ಯಾಲರಿಯ ಸಹ ಸಂಸ್ಥಾಪಕರಾಗಿದ್ದ ಶೀಲಾ ಕಾವೇರಪ್ಪನವರ ನೆನಪು ಭಾವಚಿತ್ರ ಅನಾವರಣ ಕಾರ್ಯಕ್ರಮಕ್ಕೆ ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಚಾಲನೆ ನೀಡಿದರು.

ಕಲಾ ಪ್ರದರ್ಶನ

ಗ್ಯಾಲರಿ ವಾರ್ಷಿಕೋತ್ಸವ ಪ್ರಯುಕ್ತ ಹೆಸರಾಂತ ಕಲಾವಿದರಾದ ಎನ್.ಬಿ.ಕಾವೇರಪ್ಪ, ಎಲ್.ಶಿವಲಿಂಗಪ್ಪ, ಕೆ.ಸಿ.ಮಹಾದೇವ ಶೆಟ್ಟಿ, ಶಿವಕುಮಾರ್ ಕೆಸರಮಾಡು, ಸಿ.ಚಿಕ್ಕಣ್ಣ, ವಿಠಲರೆಡ್ಡಿ ಚುಳಕಿ, ಕೆ.ಎಸ್ ಪರಮೇಶ್ವರ, ಆಶಾರಾಣಿ ನಾಡೋಣಿ, ಎಂ.ಎಲ್.ಮಾಧವಿ, ಕೆ.ಸಂಗೀತಾ, ಶಿವಕುಮಾರ್ ಎಚ್.ಮಂಡ್ಯ, ಡಾ.ಜಮುನಾರಾಣಿ ಮಿರ್ಲೆ, ಡಿ.ಅಭಿಲಾಶ್, ಹಾ.ಪು.ರಂಗಸ್ವಾಮಿ, ಮೋಹನ್ ವರ್ಣಿಕರ್ ರಚಿಸಿರುವ ಚಿತ್ರಕಲೆಗಳ ಪ್ರದರ್ಶನ ಆರಂಭಗೊಂಡಿದ್ದು, ಜೂ.9ರವರೆಗೆ ಬೆಳಗ್ಗೆ 11ರಿಂದ ಸಂಜೆ 7ರವರೆಗೆ ನಡೆಯಲಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಹೈ ಜವಾನಿ ತೋ ಇಷ್ಕ್ ಹೋನಾ ಹೈ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಮ್ಯಾಂಗೋ ಪಚ್ಚ (ಕ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಕಾಡಿನಲ್ಲಿ ರೌಡಿಶೀಟರ್ ಮದ್ಯದ ಪಾರ್ಟಿ

ವ್ಯಾಪಕ ಆಕ್ರೋಶ

ಮೈಸೂರು: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿನ ಮದ್ದೂರು ವಲಯ ವ್ಯಾಪ್ತಿಯ ಕಳ್ಳಬೇಟೆ ಶಿಬಿರದ ಮುಂಭಾಗದಲ್ಲೇ ಗುಂಡ್ಲುಪೇಟೆ ರೌಡಿಶೀಟರ್ ಮದ್ಯದ ಪಾರ್ಟಿ ನಡೆಸಿರುವುದಕ್ಕೆ ಸಾರ್ವಜನಿಕರಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ಬಡ ರೈತರು, ಸಾಮಾನ್ಯ ಜನರ ಮೇಲೆ ಕ್ಷುಲ್ಲಕ ಕಾರಣಕ್ಕೆ ಕ್ರಿಮಿನಲ್ ಕೇಸ್‌ಗಳನ್ನು ದಾಖಲಿಸುವ ಅರಣ್ಯ ಇಲಾಖೆ ಅಧಿಕಾರಿಗಳು, ಸಾರ್ವಜನಿಕರಿಗೆ ನಿರ್ಬಂಧವಿರುವ ಹಾಗೂ ಅರಣ್ಯ ಇಲಾಖೆಯ ಅತ್ಯಂತ ಸುರಕ್ಷಿತ ಪ್ರದೇಶದಲ್ಲಿ ಮೋಜು–ಮಸ್ತಿ ನಡೆಸಲು ಸಾಥ್ ನೀಡಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

ಗುಂಡ್ಲುಪೇಟೆ ರೌಡಿಶೀಟರ್ ತನ್ನ ಸಂಗಡಿಗರೊಂದಿಗೆ ವನ್ಯಜೀವಿಗಳ ಮುಕ್ತ ಸಂಚಾರವಿರುವ ಹಾಗೂ ಸದಾ ಹದ್ದಿನ ಕಣ್ಣಿಡುವ ಆ್ಯಂಟಿ ಪೋಚಿಂಗ್ ಕ್ಯಾಂಪ್ ಮುಂಭಾಗದಲ್ಲೇ ಮದ್ಯದ ಬಾಟಲಿಗಳನ್ನು ಇಟ್ಟುಕೊಂಡು ಮೋಜು ಮಾಡಲಾಗಿದೆ.

ರೌಡಿಶೀಟರ್ ಕಾಡಿನೊಳಗೆ ಮದ್ಯದ ಪಾರ್ಟಿ ಮಾಡಿರುವ ಫೋಟೊಗಳು ಲಭ್ಯವಾಗಿದ್ದು, ಮದ್ದೂರು ವಲಯದ ಆರ್‌ಎಫ್‌ಒ ಪುನೀತ್ ಕಾರ್ಯವೈಖರಿಯನ್ನು ಪ್ರಶ್ನಿಸುವಂತಾಗಿದೆ. ಬಂಡೀಪುರದಂತಹ ಸೂಕ್ಷ್ಮ ಪ್ರದೇಶದಲ್ಲಿ ಇಂತಹ ಘಟನೆ ನಡೆದಿರುವ ಕುರಿತು ತನಿಖೆ ನಡೆಸಿ, ತಪ್ಪಿಸ್ಥರ ವಿರುದ್ಧ ಕಠಿಣ ಕ್ರಮಕೈಗೊಳ್ಳ ಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಪ್ರಕರಣ ದಾಖಲು: ಅರಣ್ಯದೊಳಗೆ ಮದ್ಯದ ಪಾರ್ಟಿ ಮಾಡಿದ ಮೂವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವಲಯಾಧಿಕಾರಿ ಪುನೀತ್ ಸಹಕಾರದಿಂದಲೇ ಕಾಡಿನೊಳಗೆ ಹೋಗಿರುವ ಆರೋಪ ಕೇಳಿ ಬಂದಿದ್ದು, ಅವರ ವಿರುದ್ಧ ಶಿಸ್ತುಕ್ರಮಕ್ಕೆ ಮೇಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ ಎಂದು ಬಂಡೀಪುರ ಸಿಎಫ್ ನಂದೀಶ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು: ಮೈಸೂರಿನ ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಜೂ.9ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮೈಸೂರಿನ ಮಂಡಿಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣ ಕಲ್ಯಾಣ ಮಂದಿರದಲ್ಲಿ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ:9448753597, 9916155453, 9448738657 ಮೂಲಕ ಸಂಪರ್ಕಿಸಬಹುದು.

ಅಮೆರಿಕನ್ ಐಸ್ ಹಾಕಿಗೆ ಕೊಡಗಿನ ಸಹೋದರರ ಆಯ್ಕೆ

ವರ್ಸಿಟಿ, ಜ್ಯೂನಿಯರ್ ವರ್ಸಿಟಿ ತಂಡ ಪ್ರತಿನಿಧಿಸಲಿರುವ ಸಹೋದರರು


ಮೈಸೂರು, ಜೂ.7(ಎಂಟಿವೈ)– ಕೊಡಗು ಮೂಲದ ಸಹೋದರರಿಬ್ಬರು ಅಮೆರಿಕದ ಟೆಕ್ಸಾಸ್‌ನ ಫ್ರಿಸ್ಕೊ ಹಾಕಿ ಅಸೋಸಿಯೇಷನ್‌ನ ಆಯೋಜಿಸಿದ್ದ ಅಮೇರಿಕನ್ ಐಸ್ ಹಾಕಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದ್ದಾರೆ.

ಮೇಯನ್ ಮಾಚಯ್ಯ ಮೆರಿಯಂಡ(15) ಅವರು ವರ್ಸಿಟಿ ತಂಡಕ್ಕೆ ಆಯ್ಕೆಯಾಗಿದ್ದರೆ, ಅವರ ಕಿರಿಯ ಸಹೋದರ ಕ್ರಿಶ್ ಕಾರಿಯಪ್ಪ ಮೆರಿಯಂಡ(13) ಜ್ಯೂನಿಯರ್ ವರ್ಸಿಟಿ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇವರ ಸಾಧನೆಗೆ ರಾಜ್ಯದಲ್ಲಿರುವ ಈ ಕುಟುಂಬ ಸದಸ್ಯರು, ಸ್ನೇಹಿತರು ಮತ್ತು ಹಿತೈಷಿಗಳು ಸಂಭ್ರಮಿಸಿದ್ದಾರೆ. ಐಸ್ ಹಾಕಿ ಒಂದು ಅಸಾಮಾನ್ಯ ಕ್ರೀಡೆಯಾಗಿದ್ದು, ಕೊಡಗಿನ ಈ ಸಹೋದರರು ಪರಿಶ್ರಮ ಹಾಗೂ ತರಬೇತಿಯಿಂದ ಉತ್ತರ ಅಮೇರಿಕಾದಲ್ಲಿ ಬೇಡಿಕೆಯಿರುವ ತಂಡಕ್ಕೆ ಆಯ್ಕೆಯಾಗಿ ತಮ್ಮ ಪ್ರತಿಭೆ ಅನಾವರಣಗೊಳಿಸಲಿದ್ದಾರೆ.

ಫ್ರಿಸ್ಕೊದ ಇಂಡಿಪೆಂಡೆನ್ಸ್ ಹೈಸ್ಕೂಲ್‌ನಲ್ಲಿ 10ನೇ ತರಗತಿ ವಿದ್ಯಾರ್ಥಿಯಾಗಿರುವ ಮೇಯನ್, ಈ ಹಿಂದೆ ನೀಡಿದ ಉತ್ತಮ ಪ್ರದರ್ಶನದಿಂದಾಗಿ ಈಗ ವರ್ಸಿಟಿ ತಂಡಕ್ಕೆ ಬಡ್ತಿ ಪಡೆದಿದ್ದಾರೆ. ನೆಲ್ಸನ್ ಮಿಡಲ್ ಸ್ಕೂಲ್‌ನಲ್ಲಿ 8ನೇ ತರಗತಿ ಪೂರ್ಣಗೊಳಿಸಿದ ಕ್ರಿಶ್, ಐಸಿ ಹಾಕಿಯಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿದ್ದು ಜ್ಯೂನಿಯರ್ ವರ್ಸಿಟಿ ತಂಡದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು.

ಐಸ್ ಹಾಕಿಯು ವೇಗ, ಕೌಶಲ್ಯ, ಸಹಿಷ್ಣುತೆ, ಸಮತೋಲನದಿಂದ ಆಡುವ ಕ್ರೀಡೆಯಾಗಿದೆ. ಸಹೋದರರು ಚಿಕ್ಕ ವಯಸ್ಸಿನಿಂದಲೂ ಈ ಕ್ರೀಡೆಯನ್ನು ಆಡುತ್ತಿದ್ದಾರೆ ಮತ್ತು ಟೆಕ್ಸಾಸ್‌ನಲ್ಲಿ ಯುವ ಹಾಕಿ ಕಾರ್ಯಕ್ರಮಗಳ ಮೂಲಕ ವ್ಯಾಪಕವಾಗಿ ತರಬೇತಿ ಪಡೆದಿದ್ದಾರೆ. ಈ ಸಹೋದರರು ಕೊಡಗಿನ ಮೇರಿಯಂಡ ಕುಟುಂಬಕ್ಕೆ ಸೇರಿದವರಾಗಿದ್ದು, ಅವರ ಪೂರ್ವಜರ ಬೇರುಗಳು ಮೇರಿಯಂಡ ಐನ್ಮನೆಯಲ್ಲಿವೆ. ಇವರು ಶಿರೋ ಟೆಕ್ನಾಲಜೀಸ್‌ನ ಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಕಾಂತ್ ತಿಮ್ಮಯ್ಯ ಮತ್ತು ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿ ನೆಲೆಸಿರುವ ವೈದ್ಯೆ ಡಾ.ಗಂಗಮ್ಮ ಚೆನೆಂಡಾ ಅವರ ಪುತ್ರರು.

ಇವರ ದಿವಂಗತ ಅಜ್ಜ ಮೇರಿಯಂಡ ಕೆ.ತಿಮ್ಮಯ್ಯ ಅವರು ವಕೀಲರಾಗಿದ್ದರು. ಇವರ ಅಜ್ಜಿ ಶಾರದಾ ತಿಮ್ಮಯ್ಯ ಅವರು ಮೈಸೂರಿನಲ್ಲಿ ವಾಸಿಸುತ್ತಿದ್ದಾರೆ. ಅಮೆರಿಕದಲ್ಲಿ ಬೆಳೆದಿದ್ದರೂ, ಮಾಯನ್ ಮತ್ತು ಕ್ರಿಶ್ ಮೈಸೂರು ಮತ್ತು ಕೊಡಗಿಗೆ ನಿಯಮಿತವಾಗಿ ಭೇಟಿ ನೀಡುವ ಮೂಲಕ ಕರ್ನಾಟಕದೊಂದಿಗೆ ನಿಕಟ ಸಂಬಂಧ ಉಳಿಸಿಕೊಂಡಿದ್ದಾರೆ.



ಮೇಯನ್ ಮಾಚಯ್ಯ ಮೆರಿಯಂಡ



ಕ್ರಿಶ್ ಕಾರಿಯಪ್ಪ ಮೆರಿಯಂಡ

ಮುಖ್ಯಮಂತ್ರಿ ಆದ ಮೂರೇ ದಿನಕ್ಕೆ ಪೊಲೀಸ್ ಇಲಾಖೆಗೆ ಡಿಕೆಶಿ ಸರ್ಜರಿ

ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳ ವರ್ಗ

ಮೈಸೂರು, ಜೂ.7(ಬಿಎಲ್‌ಯು)– ಮುಖ್ಯಮಂತ್ರಿ ಆಗಿ ಅಧಿಕಾರ ಸ್ವೀಕರಿಸಿದ 3 ದಿನದ ನಂತರ ಡಿ.ಕೆ.ಶಿವಕುಮಾರ್ ಅವರು ಪೊಲೀಸ್ ಇಲಾಖೆ ಹಿರಿಯ ಐಪಿಎಸ್ ಅಧಿಕಾರಿಗಳ ವರ್ಗಾವಣೆಯಲ್ಲಿ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ.

ಹಿರಿಯ ಐಪಿಎಸ್ ಅಧಿಕಾರಿಯಾಗಿರುವ ಡಾ.ಪ್ರಣಬ್ ಮೊಹಂತಿ ಅವರನ್ನು ಅಪರಾಧ ತನಿಖಾ ಇಲಾಖೆಯ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳ ಪೊಲೀಸ್ ಮಹಾ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ. ಅಲ್ಲದೆ ಡಾ.ಪ್ರಣಬ್ ಮೊಹಂತಿ ಅವರು ಬೆಂಗಳೂರಿನ ಅಪರಾಧ ತನಿಖಾ ಇಲಾಖೆಯ ಪೊಲೀಸ್ ಮಹಾ ನಿರ್ದೇಶಕರ (ಸೈಬರ್ ಅಪರಾಧಗಳು) ಹುದ್ದೆಯ ಏಕಕಾಲಿಕ ಉಸ್ತುವಾರಿಯನ್ನು ವಹಿಸಿಕೊಳ್ಳಲಿದ್ದಾರೆ.

ಮತ್ತೊಬ್ಬ ಹಿರಿಯ ಐಪಿಎಸ್ ಅಧಿಕಾರಿ ಡಾ.ಚಂದ್ರಗುಪ್ತ ಅವರನ್ನು ಬೆಂಗಳೂರಿನ ಗುಪ್ತಚರ ವಿಭಾಗದ ಪೊಲೀಸ್ ಮಹಾ ನಿರೀಕ್ಷಕರಾಗಿ ನೇಮಕ ಮಾಡಲಾಗಿದೆ. ಐಪಿಎಸ್ (ವೇತನ) 2016ರ ನಿಯಮ ಮತ್ತು 12ನೇ ನಿಯಮದ ಅಡಿಯಲ್ಲಿ ಗುಪ್ತಚರ ವಿಭಾಗದ ಪೊಲೀಸ್ ಮಹಾ ನಿರ್ದೇಶಕರ ಹುದ್ದೆಯನನ್ನು ಅಪರಾಧ ತನಿಖಾ ಇಲಾಖೆ ಪೊಲೀಸ್ ಮಹಾ ನಿರ್ದೇಶಕರ ಹುದ್ದೆಗೆ ಸಮಾನ ಸ್ಥಾನಮಾನ ಮತ್ತು ಜವಾಬ್ದಾರಿಗಳಲ್ಲಿ ಸಮಾನವೆಂದು ಘೋಷಿಸಲಾಗಿದೆ. ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಸಂಜಯ್ ಬಿ.ಎಸ್. ಆದೇಶ ಹೊರಡಿಸಿದ್ದಾರೆ.



ಡಾ.ಮೊಹಾಂತಿ



ಡಾ.ಚಂದ್ರಗುಪ್ತ

ರಾಷ್ಟ್ರೀಯ ದೇಹದಾರ್ಢ್ಯ ಸ್ಪರ್ಧೆ: ದರ್ಶನ್‌ಗೆ ಐದನೇ ಸ್ಥಾನ

ಮೈಸೂರು, ಜೂ.7(ಎಂಟಿವೈ)– ರಾಷ್ಟ್ರೀಯ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಮೈಸೂರು ತಾಲೂಕಿನ ಸಿದ್ದಲಿಂಗಪುರದ ದರ್ಶನ್ 5ನೇ ಸ್ಥಾನ ಗಳಿಸಿದ್ದಾರೆ.

ಸಿದ್ದಲಿಂಗಪುರ ಗ್ರಾಮದ ರೈತ ಲೋಕೇಶ್ ಮತ್ತು ಭಾಗ್ಯ ದಂಪತಿಯ ಪುತ್ರನಾಗಿರುವ ದರ್ಶನ್ ಐಸಿಎನ್ ನ್ಯಾಚುರಲ್ ಬಾಡಿ ಬಿಲ್ಡಿಂಗ್ ಮತ್ತು ಫಿಟ್ನೆಸ್ ಮಾಡೆಲಿಂಗ್ ಫೆಡರೇಷನ್ ಸಂಸ್ಥೆಯು, ಇತ್ತೀಚೆಗೆ ಬೆಂಗಳೂರಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ದೇಹದಾಢ್ಯ ಸ್ಪರ್ಧೆಯ ಮೆನ್ ಫಿಟ್ನೆಸ್ ಜ್ಯೂನಿಯರ್ ಅಂಡರ್ 23 ವಿಭಾಗದಲ್ಲಿ ಭಾಗವಹಿಸಿ, 5ನೇ ಸ್ಥಾನ ಗಳಿಸಿ ಮೈಸೂರಿಗೆ ಕೀರ್ತಿ ತಂದಿದ್ದಾರೆ.

ಆಸ್ಟ್ರೇಲಿಯಾ ಮೂಲದ ಈ ಸಂಸ್ಥೆ ಪ್ರತಿ ವರ್ಷ ಬೆಂಗಳೂರಿನಲ್ಲಿ ಈ ಸ್ಪರ್ಧೆ ನಡೆಸಲಿದೆ. ಈ ಬಾರಿ ನಡೆದ ಸ್ಪರ್ಧೆಯಲ್ಲಿ ದೇಶಾದ್ಯಂತ ವಿವಿಧ ರಾಜ್ಯಗಳಿಂದ ನೂರಾರು ಪಟುಗಳು ಪಾಲ್ಗೊಂಡಿದ್ದರು. ಮೈಸೂರಿನ ದರ್ಶನ್ ತನ್ನ ನಿರಂತರ ಶ್ರಮದಿಂದ ಉತ್ತಮ ಸಾಧನೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಪೋಷಕರೊಂದಿಗೆ ಕೃಷಿ ಕ್ಷೇತ್ರದಲ್ಲೂ ತೊಡಗಿಸಿಕೊಂಡಿರುವ ದರ್ಶನ್, ನರ್ಸಿಂಗ್ ವಿಭಾಗದಲ್ಲಿ ಡಿಪ್ಲೋಮಾ ಪದವಿ ಪಡೆದಿದ್ದಾರೆ. ಜಿಮ್ ತರಬೇತುದಾರ ವಿಶಾಲ್‌ರಿಂದ ತರಬೇತಿ ಪಡೆದು ಇದೀಗ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಉತ್ತಮ ಸಾಧನೆ ಮಾಡುವತ್ತ ಗಮನಹರಿಸುತ್ತಿದ್ದಾರೆ.



ದರ್ಶನ್



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮೈಸೂರು ಪಾಲಿಕೆ ಘಟಕದ ನೂತನ ಅಧ್ಯಕ್ಷ ಕೆ.ಎಸ್.ಪ್ರಕಾಶ್ ಹಾಗೂ ನಿರ್ದೇಶಕರಾದ ಪ್ರತಿಧ್ವನಿ ಪ್ರಸಾದ್, ಶಿವಮೂರ್ತಿ, ಚಂದನ್ ಮತ್ತು ನಿರ್ದೇಶಕರು ಅಖಿಲ ಭಾರತ ವೀರಶೈವ ಮಹಾಸಭಾ ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ವೀಣಾ ಕಾಶಪ್ಪನವರನ್ನು ಅಭಿನಂದಿಸಿದರು.

ಸಾಂಸ್ಕೃತಿಕ ಸೌರಭ, ಯುವ ಸೌರಭ; ಚಿಗುರು ಕಾರ್ಯಕ್ರಮಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜೂ.7– 2026–27ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ಜಿಲ್ಲೆಯಲ್ಲಿ ಸಾಂಸ್ಕೃತಿಕ ಸೌರಭ, ಯುವ ಸೌರಭ ಹಾಗೂ ಚಿಗುರು ಕಾರ್ಯಕ್ರಮಗಳನ್ನು ಏರ್ಪಡಿಸಲಿದ್ದು, ಈ ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡ ಬಯಸುವ ಕಲಾವಿದ ರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಕಲಾವಿದರು ಜೂನ್ 15ರ ಸಂಜೆ 5.30 ರೊಳಗೆ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕಲಾಮಂದಿರ ಮೈಸೂರು ಇಲ್ಲಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕಲಾಮಂದಿರ ಮೈಸೂರು ಕಚೇರಿ ದೂ.ಸಂ: 0821–2513225 ಅನ್ನು ಸಂಪರ್ಕಿಸಬಹುದೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನುಕಂಪದ ಮೇಲೆ ಹಣ ಹಾಕುವ ಮುನ್ನ ಎಚ್ಚರ!

ತಂದೆ–ತಾಯಿಗೆ ಹುಷಾರಿಲ್ಲವೆಂದು ಬಂದು ಬೇರೆಯವರಿಂದ ಹಣ ಹಾಕಿಸಿ ನಗದು ಪಡೆದರು, ಡೆಲ್ಲಿಯಲ್ಲಿ ಸೈಬರ್ ವಂಚನೆ ಕೇಸ್ ದಾಖಲು

ಮೈಸೂರು, ಜೂ.7(ಜಿಎ)–ಅಪರಿಚಿತರ ಮಾತು ನಂಬಿ ಅನುಕಂಪದ ಮೇಲೆ ಯುಪಿಐ ಮೂಲಕ ಹಣ ವರ್ಗಾಯಿಸಿದರೆ ಅಪಾಯ ಕಟ್ಟಿಟ್ಟ ಬುತ್ತಿ...

ಅಣ್ಣ ತಂದೆಗೆ ಹುಷಾರಿಲ್ಲ, ಅಮ್ಮನಿಗೆ ಅನಾರೋಗ್ಯ, ಅಪಘಾತವಾಗಿದೆ. ತಕ್ಷಣ ಹಣದ ಸಹಾಯ ಮಾಡಿ ಎಂದು ಕೇಳುವ ಅಪರಿಚಿತರಿಗೆ ಯುಪಿಐ ಮೂಲಕ ಹಣ ವರ್ಗಾವಣೆ ಮಾಡಿದರೆ ನಿಮ್ಮ ವಿರುದ್ಧ ಡೆಲ್ಲಿ, ಮುಂಬೈ, ಕೇರಳದಲ್ಲಿ ಸೈಬರ್ ಪ್ರಕರಣ ದಾಖಲಾಗುತ್ತದೆ, ಎಚ್ಚರ. ಅನುಕಂಪ ಮೂಡಿಸಿ, ಹಣ ಪಡೆದು ಸೈಬರ್ ವಂಚನೆ ಮಾಡುವ ಹೊಸ ಮೋಸದ ಜಾಲ ಮೈಸೂರಲ್ಲಿ ಆರಂಭವಾಗಿದ್ದು, ಕರುಣೆ ತೋರಿ ಹಣ ವರ್ಗಾವಣೆ ಮಾಡಿದರೆ ಬೀಳಲಿದೆ ನಿಮ್ಮ ವಿರುದ್ಧ ಕೇಸ್.

ಮೈಸೂರು ನಗರದಲ್ಲಿ ದಿನದಿಂದ ದಿನಕ್ಕೆ ಸೈಬರ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಕೋಟ್ಯಾಂತರ ರೂ. ಹಣವನ್ನು ಆನ್‌ಲೈನ್ ವಂಚಕರ ಜಾಲದಿಂದ ಕಳೆದುಕೊಂಡು ಸೈಬರ್ ಠಾಣೆ ಮೆಟ್ಟಿಲು ಹತ್ತುವವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗುತ್ತಿದೆ. ಈಗ ಇದು ಮುಂದುವರೆದು, ಮುಂದಿನ ಹಂತಕ್ಕೆ ತಲುಪಿದ್ದು, ಅಮಾಯಕರಂತೆ ಬಂದು ಹಣ ವರ್ಗಾವಣೆ ಮಾಡುವಂತೆ ಕೋರಿ ನಿಮ್ಮನ್ನು ಮೋಸದ ಜಾಲಕ್ಕೆ ಬೀಳಿಸಲಿದ್ದಾರೆ.

ಇದೇ ರೀತಿಯ ಪ್ರಕರಣ ಮೈಸೂರಿನ ಆಲನಹಳ್ಳಿಯ ಪೆಟ್ರೋಲ್ ಬಂಕ್‌ವೊಂದರಲ್ಲಿ ನಡೆದು, ಡೆಲ್ಲಿ ಸೈಬರ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೇ 25ರಂದು ಮೈಸೂರಿನ ಆಲನಹಳ್ಳಿಯ ಪೆಟ್ರೋಲ್ ಬಂಕ್‌ವೊಂದಕ್ಕೆ ಸಂಜೆ 6 ಗಂಟೆ ಸುಮಾರಿಗೆ ಇಬ್ಬರು ಅಪರಿಚಿತರು ಬಂದು ನಮ್ಮ ತಂದೆಗೆ ಆರೋಗ್ಯ ಸರಿಯಿಲ್ಲ. ತುರ್ತಾಗಿ ನಗದು ಹಣ ಬೇಕಾಗಿದೆ. ನೀವು ಕೊಡಬೇಡಿ ಬದಲಾಗಿ ನಮ್ಮ ಸ್ನೇಹಿತ ನಿಮ್ಮ ಖಾತೆಗೆ ಹಣ ವರ್ಗಾವಣೆ ಮಾಡುತ್ತಾನೆ. ನನಗೆ ನಗದು ಮಾತ್ರ ನೀಡಿ ಎಂದು ಅಂಗಲಾಚಿದ್ದಾರೆ.

ಆರೋಗ್ಯ ಸಮಸ್ಯೆ ಹಿನ್ನೆಲೆಯಲ್ಲಿ ಯುವಕರು ಕೇಳಿದ ತಕ್ಷಣ ಮಾನವೀಯತೆ ದೃಷ್ಟಿಯಿಂದ ಪೆಟ್ರೋಲ್ ಬಂಕ್ ಕ್ಯಾಶಿಯರ್ ಬ್ಯಾಂಕ್ ಖಾತೆಗೆ ಲಿಂಗ್ ಆಗಿರುವ ಫೋನ್ ಪೇ ನಂಬರ್ ನೀಡಿ ಅದಕ್ಕೆ ಹಣ ಹಾಕಿ ಎಂದು ಹೇಳಿದ್ದಾರೆ. ಕೆಲವೇ ಕ್ಷಣದಲ್ಲಿ ಅನಾಮಾಧೇಯ ಫೋನ್ ಪೇಯಿಂದ 98 ಸಾವಿರ ರೂ. ಕ್ಯಾಶಿಯರ್ ಫೋನ್ ಪೇಗೆ ಬಂದಿದೆ. ಹಣ ಬಂದಿರುವುದನ್ನು ಪೆಟ್ರೋಲ್ ಬಂಕ್ ಸಿಬ್ಬಂದಿ ಖಚಿತಪಡಿಸಿಕೊಂಡು ಯುವಕರಿಗೆ 98 ಸಾವಿರ ರೂ. ನಗದು ನೀಡಿದ್ದಾರೆ.

ಮತ್ತೆ ಮೇ 26ರಂದು ಮಧ್ಯಾಹ್ನ 3 ಗಂಟೆಗೆ ಮತ್ತಿಬ್ಬರು ಅಪರಿಚಿತ ವ್ಯಕ್ತಿಗಳು ಪೆಟ್ರೋಲ್ ಬಂಕ್‌ಗೆ ಬಂದು ನನ್ನ ತಂದೆಗೆ ಹುಷಾರಿಲ್ಲ ತುರ್ತಾಗಿ ಹಣ ಬೇಕಾಗಿದೆ. ನಮ್ಮ ಸ್ನೇಹಿತನಿಂದ ಹಣ ವರ್ಗಾವಣೆ ಮಾಡಿಸುತ್ತೇವೆ ಎಂದು ತಿಳಿಸಿದ್ದಾರೆ. ಮತ್ತೊಮ್ಮೆ ಮಾನವೀಯತೆ ದೃಷ್ಟಿಯಿಂದ ಸಹಾಯ ಮಾಡಲು ಒಪ್ಪಿಕೊಂಡು ಈ ಬಾರಿ ಸ್ನೇಹಿತರೊಬ್ಬರ ಖಾತೆಗೆ ಪೆಟ್ರೋಲ್ ಬಂಕ್ ಸಿಬ್ಬಂದಿ ಹಣ ಹಾಕಿಸಿದ್ದಾರೆ. ತಕ್ಷಣ ಅನಾಮಾಧೇಯ ಫೋನ್ ಪೇ ಮೂಲಕ 98 ಸಾವಿರ ರೂ. ಬಂದಿದೆ. ಹಣ ಬಂದಿರುವುದನ್ನು ಖಚಿತ ಪಡಿಸಿಕೊಂಡು ಬಂಕ್ ಸಿಬ್ಬಂದಿನ ಅಪರಿಚಿತ ವ್ಯಕ್ತಿಗಳಿಗೆ 98 ಸಾವಿರ ರೂ. ನೀಡಿದ್ದಾರೆ.

ಅದೇ ದಿನ ರಾತ್ರಿ 9 ಗಂಟೆಗೆ ಬಂಕ್ ಕ್ಯಾಶಿಯರ್ ಪೆಟ್ರೋಲ್ ಬಂಕ್ ಸಿಬ್ಬಂದಿಗೆ ಕರೆ ಮಾಡಿ, ಅಪರಿಚಿತರಿಂದ ನೀನು ಹಾಕಿಸಿದ 98 ಸಾವಿರ ರೂ. ಹಣಕ್ಕೆ ಸಂಬಂದಿಸಿದಂತೆ ಡೆಲ್ಲಿಯಲ್ಲಿ ಸೈಬರ್ ವಂಚನೆ ಕೇಸ್ ದಾಖಲಾಗಿದ್ದು, ಪೊಲೀಸರು ನನ್ನ ಬ್ಯಾಂಕ್ ಖಾತೆಯಲ್ಲಿ 95,237 ರೂ. ಲೀನ್ ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಹಾಗೇ ಸ್ನೇಹಿತ ಮೇ 27ರಂದು ಕರೆ ಮಾಡಿ ನನ್ನ ಬ್ಯಾಂಕ್ ಖಾತೆಯಲ್ಲಿ 15 ಸಾವಿರ ರೂ. ಹಣ ಕಟ್ ಆಗಿದೆ ಎಂದು ತಿಳಿಸಿದ್ದು, ಇದರಿಂದ ಅನುಮಾನಗೊಂಡ ಪೆಟ್ರೋಲ್ ಬಂಕ್ ಸಿಬ್ಬಂದಿ ವಂಚಕರ ಜಾಲದ ವಿರುದ್ಧ ಸೆನ್ ಠಾಣೆ ವಿರುದ್ಧ ದೂರು ಸಲ್ಲಿಸಿದ್ದಾರೆ.



ಕಳ್ಳಬೇಟೆ, ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಅರಣ್ಯ ಸಿಬ್ಬಂದಿಗೆ ಬಂದೂಕು ತರಬೇತಿ

ನಿಖರವಾಗಿ ಗುಂಡು ಹಾರಿಸುವ, ಬಂದೂಕು ಸ್ವಚ್ಛಗೊಳಿಸುವ ಬಗ್ಗೆಯೂ ತರಬೇತಿ

ಮೈಸೂರು,ಜೂ.7(ಎಂಟಿವೈ)– ಕಳ್ಳಬೇಟೆ ತಡೆ ಹಾಗೂ ಮಾನವ–ವನ್ಯಜೀವಿ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಂಚೂಣಿ ಅರಣ್ಯ ಸಿಬ್ಬಂದಿಗೆ ಇದೆ ಮೊದಲ ಬಾರಿಗೆ ಬಂದೂಕು ಹಾಗೂ ಪಿಸ್ತೂಲುಗಳನ್ನು ಬಳಸುವ ಹಾಗೂ ನಿಖರವಾಗಿ ಗುಂಡು ಹಾರಿಸುವ ಕುರಿತು ತರಬೇತಿ ನೀಡಲಾಗುತ್ತಿದೆ.

ವನ್ಯಜೀವಿಗಳ ಬೇಟೆಗೆ ಅರಣ್ಯ ಪ್ರವೇಶಿಸುವ ಕಳ್ಳಬೇಟೆಗಾರರ ಹೆಡೆಮುರಿ ಕಟ್ಟಲು ಅರಣ್ಯ ಇಲಾಖೆ, ಆಯ ಕಟ್ಟಿನ ಸ್ಥಳದಲ್ಲಿ ಗಸ್ತು ಕಾರ್ಯದಲ್ಲಿ ತೊಡಗುವ ಸಿಬ್ಬಂದಿ ಸೇರಿದಂತೆ ಮುಂಚೂಣಿ ಸಿಬ್ಬಂದಿಗಳಿಗೆ ಬಂದೂಕಿನ ಬಳಕೆ ಮತ್ತು ಗುಂಡು ಹಾರಿಸುವ ತರಬೇತಿ ನೀಡಿ, ಸಂಕಷ್ಟದ ಸಂದರ್ಭದಲ್ಲಿ ಅವುಗಳನ್ನು ಬಳಸುವ ಕುರಿತು ತರಬೇತಿ ನೀಡಲಾಗುತ್ತಿದೆ.

ಅರಣ್ಯ ಇಲಾಖೆ, ಮೈಸೂರು ಜಿಲ್ಲಾ ಪೊಲೀಸರ ಸಹಕಾರ ಪಡೆದು ಕಳ್ಳಬೇಟೆ ನಡೆಯುವ ಸಂಭವನೀಯ ಅರಣ್ಯ ಪ್ರದೇಶ ಮತ್ತು ಕಾಡಂಚಿನ ಗ್ರಾಮಗಳಲ್ಲಿ ಗಸ್ತು ತಿರುಗುವ ಅರಣ್ಯ ಸಿಬ್ಬಂದಿ, ಮುಂಚೂಣಿ ಸಿಬ್ಬಂದಿಯ ಮೊದಲ ತಂಡಕ್ಕೆ ಈ ತರಬೇತಿ ನೀಡಲಾಗಿದೆ. ಮೈಸೂರು, ಚಾಮರಾಜನಗರ ಜಿಲ್ಲೆಯ ಕಾಡಂಚಿನ ಗ್ರಾಮಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಆನೆ ಕಾರ್ಯಪಡೆ, ಚಿರತೆ ಕಾರ್ಯಪಡೆ ಸಿಬ್ಬಂದಿ ಹಾಗೂ ಕಳ್ಳಬೇಟೆ ತಡೆ ಶಿಬಿರದ ಸಿಬ್ಬಂದಿಗೆ ಈಗಾಗಲೇ ವಿವಿಧ ಶಸ್ತ್ರಾಸ್ತ್ರಗಳನ್ನು ಒದಗಿಸಿದ್ದು, ಅದರ ನಿರ್ವಹಣೆಯನ್ನು ತರಬೇತಿ ವೇಳೆ ತಿಳಿಸಿಕೊಡಲಾಗಿದೆ.

ಶಸ್ತ್ರಾಸ್ತ್ರಗಳ ಬಳಕೆ: ಅರಣ್ಯ ಇಲಾಖೆ ಸಿಬ್ಬಂದಿತಂಡ 12–ಬೋರ್ ಪಂಪ್ ಆಕ್ಷನ್ ಗನ್, 0.315 ರೈಫಲ್, 9 ಎಂ.ಎಂ. ಪಿಸ್ತೂಲ್, 7.65 ಎಂ.ಎಂ. ರಿವಾಲ್ವರ್ ಸೇರಿದಂತೆ ವಿವಿಧ ಶಸ್ತ್ರಾಸ್ತ್ರಗಳ ಬಳಕೆಯನ್ನು ನುರಿತ ತರಬೇತಿದಾರರು ಹಾಗೂ ಮಾಸ್ಟರ್ ಟ್ರೈನರ್‌ಗಳಿಂದ ಗುಂಡು ಹಾರಿಸುವ ತರಬೇತಿ ಕೊಡಿಸಲಾಗಿದೆ.

ಸ್ವಚ್ಛಗೊಳಿಸುವ ತರಬೇತಿ: ಶಸ್ತ್ರಾಸ್ತ್ರಗಳ ಬಿಡಿಭಾಗಗಳನ್ನು ವಿಂಗಡಿಸಿ, ಅವುಗಳನ್ನು ಸ್ವಚ್ಛಗೊಳಿಸುವ ಬಗೆಯನ್ನು ತಿಳಿಸಿಕೊಡಲಾಗಿದೆ. ಗನ್, ಬಂದೂಕು, ಪಿಸ್ತೂಲ್‌ಗಳಲ್ಲಿನ ಬಿಡಿಭಾಗ ಬೇರ್ಪಡಿಸಿ, ಅವುಗಳನ್ನು ಸ್ವಚ್ಛ ಮಾಡುವ ಮಹತ್ವ ತಿಳಿಸಲಾಗಿದೆ. ಹ್ಯಾಮರ್ ಪಿನ್, ಫೈರಿಂಗ್ ಪಿನ್, ಬ್ಯಾರಲ್, ಬೋರ್ ಹಾಗೂ ಇನ್ನಿತರ ಬಿಡಿಭಾಗಗಳನ್ನು ಬೇರ್ಪಡಿಸಿ, ಸ್ವಚ್ಛಗೊಳಿಸಿದ ಬಳಿಕ ಮತ್ತೆ ಜೋಡಿಸುವುದನ್ನು ಅರಣ್ಯ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.

ಮಂಡ್ಯ ಜಿಲ್ಲೆಯ ದೊಡ್ಡ ಬೇಡರಹಳ್ಳಿ ಫೈರಿಂಗ್ ಮೈದಾನದಲ್ಲಿ ಮೈಸೂರು ಜಿಲ್ಲಾ ಪೊಲೀಸರು ಫೈರಿಂಗ್ ತರಬೇತಿ ನೀಡಿದ್ದಾರೆ. ಈ ತರಬೇತಿ ವೇಳೆ ಜೀವಿತಾವಧಿ ಮುಗಿಯುವ ಹಂತಕ್ಕೆ ಬಂದಿದ್ದ 500ಕ್ಕೂ ಹೆಚ್ಚು ಗುಂಡು ಬಳಸಲಾಗಿದೆ. ಬಹುತೇಕ ಮಂದಿ ನಿಖರವಾಗಿ ಗುರಿಯಿಟ್ಟು ಫೈರಿಂಗ್ ಮಾಡುವ ಮೂಲಕ ಭರವಸೆ ಮೂಡಿಸಿದ್ದಾರೆ. ಬಳಿಕ ಡಿಎಆರ್, ಸಿಎಆರ್‌ಗೇ ಭೇಟಿ ನೀಡಿ, ಪೊಲೀಸರು ಬಳಸುವ ಶಸ್ತ್ರಾಸ್ತ್ರಗಳನ್ನು ವೀಕ್ಷಿಸಿ, ಅವುಗಳನ್ನು ಹೇಗೆ ಬಳಸುತ್ತಾರೆ ಎಂಬ ಮಾಹಿತಿ ಪಡೆದು ಕೊಂಡಿದ್ದಾರೆ. ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಮೈಸೂರು ವೃತ್ತದ ಸಿಎಫ್ ಎಸ್.ಎಸ್.ರವಿಶಂಕರ್, ಮೈಸೂರು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಮೈಸೂರು ಪ್ರಾದೇಶಿಕ ವಿಭಾಗದ ಡಿಸಿಎಫ್ ಕೆ.ಪರಮೇಶ್ ಶಿಭಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಅರಣ್ಯ ಸಂಚಾರಿ ದಳದ ಎಸಿಎಫ್ ಜಿ.ರುದ್ರೇಶ್, ಆರ್‌ಎಫ್‌ಒಗಳಾದ ಕೆ.ಸುರೇಂದ್ರ, ಸಚಿನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.





ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣದಲ್ಲಿ ಅರಣ್ಯ ಸಿಬ್ಬಂದಿಗೆ ಸಿಎಫ್ ಎಸ್.ಎಸ್.ರವಿಶಂಕರ್, ಮೈಸೂರು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಶಸ್ತ್ರಾಸ್ತ್ರಗಳ ನಿರ್ವಹಣೆ ಕುರಿತಂತೆ ಮಾಹಿತಿ ನೀಡುತ್ತಿರುವುದು. ಮಂಡ್ಯ ಜಿಲ್ಲೆ ದೊಡ್ಡಬೇಡರಹಳ್ಳಿಯಲ್ಲಿ ಫೈರಿಂಗ್ ತರಬೇತಿ ಪಡೆಯುತ್ತಿರುವ ಅರಣ್ಯ ಸಿಬ್ಬಂದಿ (ಬಲಚಿತ್ರ).

42 ಮಂದಿಗೆ ತರಬೇತಿ

ಮೈಸೂರು ಅರಣ್ಯ ಸಂಚಾರಿ ದಳದ ವತಿಯಿಂದ ಆಯೋಜಿಸಿದ್ದ 4 ದಿನಗಳ ತರಬೇತಿ ಕಾರ್ಯಾಗಾರದಲ್ಲಿ ಮೈಸೂರು ವೃತ್ತಕ್ಕೆ ಸೇರಿದ ನಾಗರಹೊಳೆ, ಮೈಸೂರು ಪ್ರಾದೇಶಿಕ ವಲಯ, ಹುಣಸೂರು ಪ್ರಾದೇಶಿಕ ವಲಯ ಮತ್ತು ಮಂಡ್ಯ ಪ್ರಾದೇಶಿಕ ವಲಯದ ಪ್ರಮುಖ ಮತ್ತು ಸೂಕ್ಷ್ಮ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 42 ಮಂದಿ ಡಿಆರ್‌ಎಫ್‌ಒ ಹಾಗೂ ಗಸ್ತು ಅರಣ್ಯ ಪಾಲಕರಿಗೆ ಶಸ್ತ್ರಾಸ್ತ್ರ ನಿರ್ವಹಣೆ ತರಬೇತಿ ನೀಡಲಾಗಿದೆ. ತರಬೇತಿ ಪಡೆದ ಶಿಭಿರಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಗಿದೆ.

ಬಸವಮಾರ್ಗ ಉಚಿತ ವಸತಿನಿಲಯ ಉದ್ಘಾಟನೆ

ಮೈಸೂರು,ಜೂ.7(ಪಿಎಂ)– ನಗರದ ಸರಸ್ವತಿಪುರಂನಲ್ಲಿರುವ ಬಸವಮಾರ್ಗ ಉಚಿತ ವಸತಿ ನಿಲಯವು 2026–27ನೇ ಶೈಕ್ಷಣಿಕ ಸಾಲಿಗೆ ಭಾನುವಾರ ಉದ್ಘಾಟನೆಗೊಂಡಿತು.

ಹುಣಸೂರು ಕ್ಷೇತ್ರದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಟೇಪ್ ಕತ್ತರಿಸುವ ಮೂಲಕ ವಸತಿನಿಲಯವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಜೀವನದ ಪ್ರತಿಯೊಂದು ಹಂತದಲ್ಲೂ ಪರೀಕ್ಷೆ ಇರುತ್ತದೆ. ಕೇವಲ ಪರೀಕ್ಷೆಗಳಲ್ಲಿ ಅಂಕ ಗಳಿಸುವುದೇ ಸಾಧನೆ ಅಲ್ಲ. ವೈಯಕ್ತಿಕ ಮತ್ತು ವೃತ್ತಿಪರ ಕೌಶಲ್ಯಗಳನ್ನು ಬೆಳೆಸಿಕೊಳ್ಳುವ ಮೂಲಕ ಉನ್ನತ ಸಾಧನೆ ಮಾಡಬೇಕು. ಇದಕ್ಕೆ ನಿರಂತರ ಪ್ರಯತ್ನ ಮತ್ತು ಸಕಾರಾತ್ಮಕ ಮನೋಭಾವಬೇಕು. ಆಗ ಮಾತ್ರ ಗುರಿಯನ್ನು ತಲುಪಲು ಸಾಧ್ಯ ಎಂದರು.

ವಿದ್ಯಾರ್ಥಿಗಳು ಹೊಸ ವಿಷಯ, ತಂತ್ರಜ್ಞಾನ ಮತ್ತು ನೈಜ ಪ್ರಪಂಚದ ಕೌಶಲ್ಯಗಳನ್ನು ಕಲಿಯಲು ಆಸಕ್ತಿ ತೋರಿಸಬೇಕು. ಅಧ್ಯಯನ, ವಿಶ್ರಾಂತಿ ಮತ್ತು ಇತರೆ ಚಟುವಟಿಕೆಗಳಿಗೆ ಪ್ರತ್ಯೇಕ ಸಮಯವನ್ನು ನಿಗದಿಪಡಿಸಿ ವೇಳಾಪಟ್ಟಿ ಅನುಸರಿಸಬೇಕು. ನಿಮ್ಮ ಶೈಕ್ಷಣಿಕ ಜೀವನಕ್ಕೆ ಚಿಕ್ಕ ಮತ್ತು ದೊಡ್ಡ ಗುರಿಗಳನ್ನು ನಿಗದಿಪಡಿಸಿಕೊಂಡು, ಸಾಧಿಸಲು ಶ್ರಮಿಸಬೇಕು ಎಂದು ಹೇಳಿದರು.

ಶ್ರೀಕನ್ನಡ ಟಿವಿ ಚಾನಲ್‌ನ ನಿರ್ದೇಶಕಿ ಖುಷಿ ವಿನು ಮಾತನಾಡಿ, ಸ್ವಾರ್ಥದ ಪ್ರಪಂಚದಲ್ಲಿ ಪರರಿಗಾಗಿ ಮಿಡಿಯುವುದು ವಿರಳ. ಈ ನಿಟ್ಟಿನಲ್ಲಿ ಬಸವಮಾರ್ಗ ಫೌಂಡೇಶನ್ ಸಂಸ್ಥಾಪಕ ಎಸ್.ಬಸವರಾಜು ಅವರು ಪರರಿಗಾಗಿ ದುಡಿಯುತ್ತಿರುವುದರಲ್ಲಿ ಒಬ್ಬರಾಗಿದ್ದಾರೆ. ದಾನಗಳಲ್ಲಿ ದೊಡ್ಡದಾನ ಅನ್ನದಾನ ಮತ್ತು ವಿದ್ಯಾದಾನ ಆ ದಾನವನ್ನು ಮಕ್ಕಳಿಗೆ ಕಲ್ಪಿಸುವ ಮೂಲಕ ಮತ್ತೊಬ್ಬರಿಗೆ ಮಾದರಿಯಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಸವಮಾರ್ಗ ಫೌಂಡೇಶನ್ ಸಂಸ್ಥಾಪಕ ಎಸ್.ಬಸವರಾಜು ಮಾತನಾಡಿ, ಬಡ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಬೇಕೆಂದು ಕುಕ್ಕರಹಳ್ಳಿ ಶಾಲೆಯನ್ನು ದತ್ತು ಪಡೆಯಲಾಯಿತು. ಅಲ್ಲಿದ್ದ ವಿದ್ಯಾರ್ಥಿಗಳು ದೂರದೂರುಗಳಿಂದ ಪ್ರಯಾಣ ಮಾಡುತ್ತಿದ್ದರು. ಅದನ್ನು ಮನಗಂಡು ಬಾಲಕರಿಗೆ ವಿದ್ಯಾರ್ಥಿನಿಲಯ ತೆರೆಯಲಾಯಿತು. ಆ ಬಳಿಕ ಬೇರೆ ಬೇರೆ ಶಾಲೆಯ ವಿದ್ಯಾರ್ಥಿಗಳಿಂದ ಬೇಡಿಕೆ ಬಂದ ಹಿನ್ನೆಲೆಯಲ್ಲಿ ಅವರಿಗೂ ಉಚಿತವಾಗಿ ವಸತಿ ನಿಲಯವನ್ನು ವಿಸ್ತಾರ ಮಾಡಲಾಯಿತು. ಕೇವಲ ನಾಲ್ಕೈದು ವಿದ್ಯಾರ್ಥಿಗಳಿಂದ ಪ್ರಾರಂಭವಾದ ನಮ್ಮ ಉಚಿತ ವಸತಿ ನಿಲಯ ಇಂದು 30ಕ್ಕೂ ಹೆಚ್ಚು ಮಕ್ಕಳು ಇದ್ದಾರೆ. ಈ ವರ್ಷದಿಂದ ಇದರ ಸಂಖ್ಯೆ ಮತ್ತಷ್ಟು ಹೆಚ್ಚಾಗಿದೆ ಎಂದು ಮಾಹಿತಿ ನೀಡಿದರು.

ಕುಕ್ಕರಹಳ್ಳಿ ಶಾಲೆಯ ಮುಖ್ಯ ಶಿಕ್ಷಕ ಚಂದ್ರ, ಎಸ್‌ಡಿಎಂಸಿ ಅಧ್ಯಕ್ಷ ಸ್ವಾಮಿ, ನಿವೃತ್ತ ಶಿಕ್ಷಕ ಮೋಹನ್‌ಕುಮಾರ್, ಪಾಲಕರು, ಮಕ್ಕಳು ಹಾಜರಿದ್ದರು.



ಮೈಸೂರಿನ ಸರಸ್ವತಿಪುರಂನಲ್ಲಿ ಬಸವಮಾರ್ಗ ಉಚಿತ ವಸತಿ ನಿಲಯವನ್ನು ಹುಣಸೂರು ಕ್ಷೇತ್ರದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು. ಎಸ್.ಬಸವರಾಜು, ಖುಷಿ ವಿನು, ಚಂದ್ರ ಇತರರು ಚಿತ್ರದಲ್ಲಿದ್ದಾರೆ.

ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗಲೆಂದು ಬಸವಮಾರ್ಗ ಉಚಿತ ವಸತಿ ನಿಲಯದ ಈ ಸಾಲಿನ ಲಕ್ಷಾಂತರ ರೂ. ಬಾಡಿಗೆ ಖರ್ಚನ್ನು ಹೆಚ್.ಪಿ.ಮಂಜುನಾಥ್ ವಹಿಸಿಕೊಂಡರು. ಜೊತೆಗೆ ಶ್ರೀ ಕನ್ನಡ ಟಿವಿ ಚಾನಲ್‌ನ ನಿರ್ದೇಶಕಿ ಖುಷಿ ವಿನು, ವಸತಿ ನಿಲಯದ ವಿದ್ಯಾರ್ಥಿಗಳಿಗೆ ಸ್ಕೂಲ್ ಬ್ಯಾಗ್ ಅನ್ನು ಕೊಡುಗೆಯಾಗಿ ನೀಡಿದರು.


ವ್ಯಕ್ತಿ ನಾಪತ್ತೆ



ಮೈಸೂರು,ಜೂ.7–ಮೈಸೂರಿನ ಬಂಬುಬಜಾರ್ ನಿವಾಸಿ ಬಸವಣ್ಣ ಅವರು ಜೂ. 2ರಂದು ಕೆಲಸಕ್ಕೆಂದು ಮನೆಯಿಂದ ಹೊರ ಹೋದವರು ನಾಪತ್ತೆಯಾಗಿದ್ದಾರೆ. ನಾಪತ್ತೆಯಾದ ಬಸವಣ್ಣ ಅವರ ವಯಸ್ಸು 36 ವರ್ಷ, 5.6 ಅಡಿ ಎತ್ತರ, ಕೋಲುಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಗಡ್ಡ–ಮೀಸೆ ಬಿಟ್ಟಿದ್ದು, ಕಪ್ಪು–ಬಿಳಿ ತಲೆಗೂದಲು ಉಳ್ಳವರಾಗಿದ್ದು, ಎದೆಯ ಎಡ ಭಾಗದಲ್ಲಿ ಹೃದಯದ ಸಿಂಬಲ್, ನಾಗರತ್ನ ಎಂಬ ಹಸಿರು ಅಚ್ಚೆ ಇರುತ್ತದೆ. ಇವರು ಕನ್ನಡ ಭಾಷೆ ಮಾತನಾಡುತ್ತಾರೆ. ಕಾಣೆಯಾದ ವೇಳೆ ಪಿಂಕ್ ಕಲರ್ ತುಂಬು ತೋಳಿನ ಶರ್ಟ್, ಸಿಮೆಂಟ್ ಕಲರ್ ಪ್ಯಾಂಟ್ ಧರಿಸಿರುತ್ತಾರೆ. ಇವರ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ದೇವರಾಜ ಪೊಲೀಸ್ ಠಾಣೆ ದೂ.ಸಂ. 0821–2418306, 9740607 924 ಮೂಲಕ ಮಾಹಿತಿ ನೀಡುವಂತೆ ಪ್ರಕಟಣೆ ಕೋರಿದೆ.

ಗಂಡಾನೆಗೆ ಕಾಲರ್ ಐಡಿ

ಮಡಿಕೇರಿ ಜೂ.7–ತಿತಿಮತಿ ಸಮೀಪದ ಕೋಣನಕಟ್ಟೆ ಗ್ರಾಮದ ಕಾಫಿ ತೋಟವೊಂದರಲ್ಲಿ ಐಪಿಎಸ್ ಅಧಿಕಾರಿ ಐಜಿಪಿ ಸುನಿಲ್ ಅಚ್ಚಯ್ಯ ಅವರ ಪತ್ನಿ ಸಂಧ್ಯಾ ಅವರನ್ನು ಬಲಿ ಪಡೆದ ಕಾಡಾನೆಯ ಸೆರೆಗೆ ಕಾರ್ಯಾಚರಣೆ ತೀವ್ರಗೊಂಡಿದೆ.



ಮತ್ತಿಗೋಡು ಸಾಕಾನೆ ಶಿಬಿರದ ಭೀಮ, ಅಭಿಮನ್ಯು, ಮಹೇಂದ್ರ, ಗಣೇಶ, ಏಕಲವ್ಯ ಹಾಗೂ ಶ್ರೀಕಂಠ ಆನೆಗಳು ಅರಣ್ಯ ಇಲಾಖೆಯ ನೂರಾರು ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆಗಿಳಿದಿವೆ. ಮಹಿಳೆಯ ಮೇಲೆ ದಾಳಿ ಮಾಡಿದ ಹೆಣ್ಣಾನೆಯ ಪತ್ತೆ ಕಾರ್ಯಾಚರಣೆಯ ಸಂದರ್ಭ ಎದುರಾದ ಗಂಡಾನೆಗೆ ಅರಣ್ಯ ಇಲಾಖೆಯ ತಂಡ ರೇಡಿಯೊ ಕಾಲರ್ ಅಳವಡಿಸಿದೆ. ಈ ಗಂಡಾನೆಯ ಮೂಲಕ ಹೆಣ್ಣಾನೆಯನ್ನು ಪತ್ತೆ ಮಾಡುವುದು ಅರಣ್ಯ ಸಿಬ್ಬಂದಿಗಳ ಉದ್ದೇಶವಾಗಿದೆ.

ಮಹಿಳೆಯನ್ನು ಬಲಿ ಪಡೆದ ಕಾಡಾನೆಯ ಸೆರೆಗೆ ಅಧಿಕಾರಿಗಳಿಂದ ಅನುಮತಿ ದೊರೆತಿದ್ದು, ನೂರಕ್ಕೂ ಅಧಿಕ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.